ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ದುಡಿಯುವ ಜನತೆಗೆ
ಬದ್ಧರಾಗಿದ್ದ ಅರ್ಥಶಾಸ್ತ್ರಜ್ಞ
ಡಾ. ಅಶೋಕ ಮಿತ್ರ

ಸಂಪುಟ 12 | ಸಂಚಿಕೆ 19 | ಮೇ 07-13, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ವಿಧಾನಸಭೆಯಲಿ ದುಡಿವ ಜನರ ದನಿ ಮೊಳಗಲಿ!

ಕರ್ನಾಟಕ ಜನಮತ 2018

ಬಿಜೆಪಿ ಸೋಲಿಸಿ!!



ಜಗದಗಲದಲ್ಲೂ ಮೇ ದಿನ





ಮೇ 8 : ತೈಲ ಬೆಲೆ ಪ್ರತಿಭಟನೆ

ಏರ್ ಇಂಡಿಯಾ: ಒಂದು ಸಾರ್ವಜನಿಕ ಉದ್ದಿಮೆಯನ್ನು ಮುಗಿಸಿದ ಕತೆ

ಕೆಂಪು ಕೋಟೆ ದಾಲ್ಮಿಯಗಳಿಗೆ ಹಸ್ತಾಂತರ ಪಾಷಂಡತನಕ್ಕಿಂತ ಕಡಿಮೆಯೇನಲ್ಲ
ಭಾರತದ ಪರಂಪರೆಯ ಖಾಸಗೀಕರಣವನ್ನು ನಿಲ್ಲಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ



ಇತಿಹಾಸ ಪ್ರಸಿದ್ಧ ಕೆಂಪು ಕೋಟೆಯನ್ನು ವಹಿಸಿಕೊಡುವುದರ ಬಗ್ಗೆ ಪ್ರವಾಸೋದ್ಯಮ ಮಂತ್ರಾಲಯ, ಸಂಸ್ಕೃತಿ ಮಂತ್ರಾಲಯ ಮತ್ತು ಭಾರತ ಪುರಾತತ್ವ ಸರ್ವೆ(ಎಎಸ್‌ಐ) ಹಾಗೂ ದಾಲ್ಮಿಯ ಭಾರತ್ ಲಿಮಿಟೆಡ್ ನಡುವೆ ಎಂಒಯು(ತಿಳುವಳಿಕೆ ಒಪ್ಪಂದ) ಆಗಿದೆ ಎಂದು ವರದಿಯಾಗಿದೆ. ಇದಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ವಿರೋಧವನ್ನು ವ್ಯಕ್ತಪಡಿಸಿದೆ. 25 ಕೋಟಿ ರೂ.ಪಡೆದು, ಅದಕ್ಕೆ ಪ್ರತಿಯಾಗಿ ಕೆಂಪುಕೋಟೆಯನ್ನು ಐದು ವರ್ಷಗಳ ಕಾಲ ಆ ಗುಂಪಿಗೆ ಹಸ್ತಾಂತರಿಸಲಾಗುವುದಂತೆ.

ದಾಲ್ಮಿಯಾ ಗುಂಪು 'ಆರಂಭದಲ್ಲಿ ಐದು ವರ್ಷಗಳ ವರೆಗೆ ಅದರ ಒಡೆತನ' ಹೊಂದಬೇಕಾಗುತ್ತದೆ, ಮತ್ತು ಈ ಗುತ್ತಿಗೆ ತಮಗೆ ದಾಲ್ಮಿಯ ಬ್ರಾಂಡ್ ಎದ್ದು ಕಾಣುವಂತೆ ಮಾಡಲು ಸ್ವಾತಂತ್ರ್ಯ ಕೊಟ್ಟಿದೆ' ಎಂದು ಅವರ ಪತ್ರಿಕಾ ಹೇಳಿಕೆ ತಿಳಿಸಿದೆ. ಆ ಸ್ಥಳದಲ್ಲಿ ಏರ್ಪಡಿಸುವ ಸಮಾರಂಭಗಳ ಸಂದರ್ಭದಲ್ಲಿ ಎಲ್ಲ ತೆರನ ಪ್ರಚಾರ ಸಾಮಗ್ರಿಗಳಲ್ಲಿ ಮತ್ತು ನಾಮ ಫಲಕಗಳಲ್ಲಿ ತಮ್ಮ ಬ್ರಾಂಡ್ ಹೆಸರನ್ನು ಪ್ರದರ್ಶಿಸಲು ಬಳಸುವ ಹಕ್ಕು ಅದಕ್ಕೆ ಇರುತ್ತದೆ. 'ಕೆಂಪು ಕೋಟೆಯನ್ನು ದಾಲ್ಮಿಯ ಭಾರತ ಲಿಮಿಟೆಡ್ ದತ್ತು ತೆಗೆದುಕೊಂಡಿದೆ' ಎಂದು ಎದ್ದು ಕಾಣುವ ಫಲಕದಲ್ಲಿ ಸಾರಿ ಹೇಳಲು ಕೂಡ ಅವರಿಗೆ ಅವಕಾಶ ನೀಡಲಾಗಿದೆ.

ಕೆಂಪು ಕೋಟೆ ನಮ್ಮ ದೇಶದ ಪರಂಪರೆಯ ಹಲವು ಸ್ಥಳಗಳಲ್ಲಿ ಒಂದು ಮಾತ್ರವೇ ಅಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅದು ಹೊಂದಿರುವ ಸ್ಥಾನದ ಸ್ಮರಣಾರ್ಥ ರಾಷ್ಟ್ರೀಯ ಧ್ವಜಾರೋಹಣ ಮಾಡುವ ಸ್ಥಳವಾಗಿದೆ ಎಂಬ ಸಂಗತಿಯತ್ತ ಗಮನ ಸೆಳೆದಿದೆ. ಬ್ರಿಟಿಶ್ ಆಳ್ವಿಕೆಯಿಂದ ಭಾರತದ ಸ್ವಾತಂತ್ರ್ಯದ ಮೊದಲ ಘೋಷಣೆಯನ್ನು 1857ರಲ್ಲಿ ಬಹದ್ದೂರ್ ಶಹಾ ಝಫರ್ ಈ ಕೋಟೆಯ ಕೊತ್ತಳದಿಂದಲೇ ಮಾಡಿದ್ದರು. ನಂತರ ಬ್ರಿಟಿಶ್ ವಸಾಹತುಶಾಹಿಗಳಿಂದ ಆತನ ವಿಚಾರಣೆ ಇದೇ ಕೋಟೆಯಲ್ಲಿ ನಡೆಯಿತು.

ಕೆಲವು ದಶಕಗಳ ನಂತರ, ಭಾರತದ ಸ್ವಾತಂತ್ರ್ಯ ಸಮರದಲ್ಲಿ ಒಂದು ಮಹತ್ವದ ಪಾತ್ರ ವಹಿಸಿದ ಆಝಾದ್ ಹಿಂದ್ ಸೇನೆ(ಐಎನ್‌ಎ)ಯ ಚಾರಿತ್ರಿಕ ವಿಚಾರಣೆಯನ್ನು ಕೂಡ ಬ್ರಿಟಿಶರು ಇಲ್ಲಿಯೇ ನಡೆಸಿದರು. ಈ ಸಂಗತಿಯಿಂದಾಗಿಯೇ ಕೆಂಪು ಕೋಟೆ ಸ್ವತಂತ್ರ ಭಾರತದ ಒಂದು ಪ್ರತೀಕವಾಗಿ, ಸ್ವಾತಂತ್ರ್ಯ ದಿನ ಆಗಸ್ಟ್ 15ರಂದು ಪ್ರಧಾನ ಮಂತ್ರಿಗಳು ಈ ಕೋಟೆಯ ಹಿನ್ನೆಲೆಯಲ್ಲಿ ದೇಶವನ್ನು ಉದ್ದೇಶಿಸಿ ಮಾತಾಡುತ್ತಾರೆ. ಈ ಪ್ರತೀಕಾತ್ಮಕ ಸ್ಮಾರಕವನ್ನು ಒಂದು ಕಾರ್ಪೊರೇಟ್ ಗುಂಪಿಗೆ ಹಸ್ತಾಂತರಿಸುವುದು ಪಾಷಂಡತನಕ್ಕಿಂತ ಕಡಿಮೆಯೇನಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಟೀಕಿಸಿದೆ.

ಪರಂಪರೆಯ ಪ್ರತೀಕಗಳನ್ನು ಖಾಸಗಿ ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸುವ ಪ್ರಶ್ನೆಯನ್ನು ಕುರಿತಂತೆ ಪರಿಶೀಲಿಸಿರುವ ಸಂಸದೀಯ ಸಮಿತಿ ಹಾಗೆ ಮಾಡಬಾರದು ಎಂದು ಒಮ್ಮತದಿಂದ ನಿರ್ಧರಿಸಿದೆ ಎಂಬುದನ್ನೂ ಸರಕಾರಕ್ಕೆ ನೆನಪು ಮಾಡಿಕೊಟ್ಟಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅದು ತನ್ನ ನಿರ್ಧಾರವನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿದೆ.

ಸಿಮೆಂಟ್ ಕಂಪನಿಗೆ ನಿರ್ವಹಣೆ: ವ್ಯಾಕುಲತೆ ವ್ಯಕ್ತಪಡಿಸಿರುವ ಭಾರತೀಯ ಇತಿಹಾಸ ಸಮ್ಮೇಳನ–ನಿಷ್ಪಕ್ಷಪಾತಿ ಪರಾಮರ್ಶೆ ನಡೆಸಲು ಆಗ್ರಹ

ಒಂದು ಪ್ರಮುಖ ರಾಷ್ಟ್ರೀಯ ಸ್ಮಾರಕವನ್ನು ಕೆಂಪು ಕೋಟೆಯನ್ನು ಒಂದು ಸಿಮೆಂಟ್ ಕಂಪನಿಯಾದ ದಾಲ್ಮಿಯ ಭಾರತ್‌ನ ಸುಪರ್ದಿಗೆ ಒಪ್ಪಿಸಲಾಗುತ್ತಿದೆ ಎಂದು ಭಾರತೀಯ ಇತಿಹಾಸ ಸಮ್ಮೇಳನ (ಐಹೆಚ್‌ಸಿ) ತೀವ್ರ ವ್ಯಾಕುಲತೆ ವ್ಯಕ್ತಪಡಿಸಿದೆ. ತಾಜ್‌ಮಹಲ್ ಸೇರಿದಂತೆ ಇತರ ಪ್ರಮುಖ ಸ್ಮಾರಕಗಳನ್ನು ಕೂಡ ಇದೇ ರೀತಿ ಖಾಸಗಿಯವರ ಸುಪರ್ದಿಗೆ ಕೊಡುವುದಾಗಿ ಪ್ರಕಟಿಸಿರುವುದನ್ನು ಅದು ಗಮನಿಸಿದೆ.

ಈ ಕಂಪನಿಗೆ ಯಾವುದೇ ಪ್ರಮುಖ ಸ್ಮಾರಕವನ್ನು ನೋಡಿಕೊಂಡಿರುವ ಅನುಭವವೇ ಇಲ್ಲ. ಅಲ್ಲದೆ ಬಹಳ ಸಡಿಲ ಶರತ್ತುಗಳ ಮೇಲೆ ಅದನ್ನು ಕೊಡಲಾಗುತ್ತಿದೆ. 'ನಿರ್ಮಾಣ' ಮತ್ತು, 'ಭೂದೃಶ್ಯ ವಿನ್ಯಾಸ' ಮಾಡುವ ಅವಕಾಶ ಅದಕ್ಕಿದೆ, ಹಾಗೂ ಅದು 'ವ್ಯಾಖ್ಯಾನ ಕೇಂದ್ರ'ವನ್ನೂ ನಡೆಸಬಹುದು. ಇದು ಅತ್ಯಂತ ಕಳವಳಕಾರಿ ಎಂದು ಐಹೆಚ್‌ಸಿ ಹೇಳಿದೆ.

ಹುಮಾಯೂನ್ ಸಮಾಧಿ ಮತ್ತು ಸುತ್ತಲಿನ ಪ್ರದೇಶದಲ್ಲಿ ಮೊಗಲ್ ಸ್ಮಾರಕಗಳಲ್ಲಿ ಮೂಲರಚನೆಗಳು, ಅಲಂಕರಣಗಳಲ್ಲಿ ಕೈಯಾಡಿಸಲು ಆಘಾಖಾನ್ ಟ್ರಸ್ಟ್‌ಗೆ ಸ್ವಾತಂತ್ರ್ಯ ನೀಡಿರುವ ಬಗ್ಗೆ ಈ ಮೊದಲೇ ತಾನು ದಿಗಿಲು ವ್ಯಕ್ತಪಡಿಸಿರುವುದನ್ನು ನೆನಪಿಸಿರುವ ಐಹೆಚ್‌ಸಿ ದಾಲ್ಮಿಯ ಭಾರತ್‌ಗೆ ಕೆಂಪು ಕೋಟೆಯನ್ನು ವಹಿಸಿ ಕೊಟ್ಟಿರುವ ರೀತಿ ಇನ್ನಷ್ಟು ತೊಂದರೆಯುಂಟು ಮಾಡುವಂತದ್ದು ಎಂದಿದೆ. ಏಕೆಂದರೆ ಈ ಕಂಪನಿಗೆ ಸ್ಮಾರಕಗಳ ನಿರ್ವಹಣೆ, ಸಂರಕ್ಷಣೆ ಮತ್ತು ವ್ಯಾಖ್ಯಾನದಲ್ಲೂ ಏನೇನೂ ಅನುಭವ ಇಲ್ಲ. ಹೆಚ್ಚೆಚ್ಚು ಪ್ರವಾಸಿಗರನ್ನು ಆಕರ್ಷಿಸಲು ಕೆಂಪುಕೋಟೆಯ ಆವರಣದಲ್ಲಿರುವ ನಿರ್ದಿಷ್ಟ ರಚನೆಗಳ ಬಗ್ಗೆ ಅದು ತಪ್ಪಾದ ಅಥವ ಸಾಬೀತಾಗದ ವ್ಯಾಖ್ಯಾನಗಳನ್ನು ಕೊಡುವ ಸಾಧ್ಯತೆಯಿದೆ. ಒಮ್ಮೆ ಇಂತಹ ವ್ಯಾಖ್ಯಾನಗಳನ್ನು, ಅದರಲ್ಲೂ ಸಂಕುಚಿತ ವ್ಯಾಖ್ಯಾನಗಳನ್ನು ಹರಿಯ ಬಿಟ್ಟರೆ ಮುಂದೆ ಅದನ್ನು ಸರಿಪಡಿಸುವುದು ಅತ್ಯಂತ ಕಷ್ಟಕರವಾಗುತ್ತದೆ ಎಂಬ ಭಯವನ್ನೂ ಐಹೆಚ್‌ಸಿ ವ್ಯಕ್ತಪಡಿಸಿದೆ.

ಆದ್ದರಿಂದ ಈ ಇಡೀ ವ್ಯವಸ್ಥೆಯ ನಿಷ್ಪಕ್ಷಪಾತಿ ಪರಾಮರ್ಶೆಯನ್ನು ಪುರಾತತ್ವದ ಕೇಂದ್ರೀಯ ಸಲಹಾ ಮಂಡಳಿ ಅಥವ ಬೇರಾವುದೇ ಮಾನ್ಯತೆ ಪಡೆದ ತಜ್ಞರ ಸಂಸ್ಥೆಯಿಂದ ನಡೆಸಬೇಕು, ಅದುವರೆಗೆ ಕೆಂಪು ಕೋಟೆಯ ಈ ವ್ಯವಹಾರವನ್ನು ಅಮಾನತಿನಲ್ಲಿಡಬೇಕು ಎಂದು ಐಹೆಚ್‌ಸಿ ಆಗ್ರಹಿಸಿದೆ.

ಆರೆಸ್ಸೆಸ್‌ನ ಸಂಕುಚಿತ ವ್ಯಾಖ್ಯಾನವನ್ನು ತಣಿಸಲು ವ್ಯಾಪಾರೀ ಕಂಪನಿ ಮುಂದಾಗುವ ಭೀತಿ–126 ಪ್ರತಿಷ್ಠಿತರ ಹೇಳಿಕೆ

ಹಿರಿಯ ಇತಿಹಾಸಜ್ಞರಾದ ಪ್ರೊ. ಇರ್ಫಾನ್ ಹಬಿಬ್, ಪ್ರೊ.ಡಿ.ಎಲ್.ಝಾ, ಆರ್ಥಿಕ ತಜ್ಞರಾದ ಪ್ರೊ. ಪ್ರಭಾತ್ ಪಟ್ನಾಯಕ್, ಪ್ರೊ. ಸಿ.ಪಿ.ಚಂದ್ರಶೇಖರ್, ಖ್ಯಾತ ಕಲಾವಿದರಾದ ವಿವಾನ್ ಸುಂದರಂ ಮತ್ತಿತರ **ಒಟ್ಟು 126 ಪ್ರತಿಷ್ಠಿತ ನಾಗರಿಕರೂ ಕೂಡ ಕೆಂಪು ಕೋಟೆಯ ಉಸ್ತುವಾರಿಯನ್ನು ಖಾಸಗಿ ಕಂಪನಿಗೆ ವಹಿಸುವ ಒಪ್ಪಂದವನ್ನು ರದ್ದು ಮಾಡಬೇಕೆಂದು ಆಗ್ರಹಿಸಿದ್ದಾರೆ.** ಇವರುಗಳು ಸಹಿ ಹಾಕಿರುವ ಹೇಳಿಕೆಯೊಂದನ್ನು ಸಾಂಸ್ಕೃತಿಕ ಸಂಘಟನೆಯಾದ ಸಹಮತ್ ಬಿಡುಗಡೆ ಮಾಡಿದೆ.

ಹಿಂದಿನ ಕಾಲದ ಏನೆಲ್ಲ ಸ್ಮಾರಕಗಳು ಇನ್ನೂ ಉಳಿದಿದೆಯೋ ಅವನ್ನು ವಿಧೇಯತೆಯಿಂದ ಸಂರಕ್ಷಿಸಿಕೊಳ್ಳುವುದು ಮಾತ್ರವಲ್ಲ, ಅವನ್ನು ಸರಿಯಾಗಿ ವ್ಯಾಖ್ಯಾನಿಸುವುದು ಅಗತ್ಯವಾಗಿದೆ. ಆದರೆ 1992ರಲ್ಲಿ ಒಂದು 450 ವರ್ಷ ಹಳೆಯದಾದ ಪುರಾತತ್ವ ಮಹತ್ವ ಹೊಂದಿದ್ದ ಸ್ಮಾರಕವೊಂದನ್ನು ಅದು ಮಸೀದಿಯೆಂಬ ಕಾರಣಕ್ಕಾಗಿಯಷ್ಟೇ ಧ್ವಂಸ ಮಾಡಲು ಹಿಂದೆ–ಮುಂದೆ ನೋಡದ, ನಮ್ಮ ಪರಂಪರೆಯ ಬಗ್ಗೆ ಅಸಹ್ಯಕರ ನಿಲುವಿನವರು ಈಗ ಅಧಿಕಾರದಲ್ಲಿದ್ದಾರೆ. ಆರೆಸ್ಸೆಸ್ ಬಹಳ ಕಾಲದಿಂದ ತಾಜ್‌ಮಹಲ್ ಮತ್ತು ಕೆಂಪು ಕೋಟೆ ಸೇರಿದಂತೆ ಎಲ್ಲ ಮಧ್ಯಕಾಲೀನ ಸ್ಮಾರಕಗಳನ್ನು ಹಿಂದೂ ರಚನೆಗಳು ಎಂದು ಪ್ರತಿಪಾದಿಸುತ್ತ ಬಂದಿದೆ.

ಆದ್ದರಿಂದ ಭಾರತದ ಸ್ವಾತಂತ್ರ್ಯಕ್ಕೆ ಸಾಕ್ಷಿಯಾದ ಐತಿಹಾಸಿಕ ಕೆಂಪು ಕೋಟೆಯ ಸಂರಕ್ಷಣೆಯನ್ನು ಖಾಸಗಿ ಕಂಪನಿಗೆ ವಹಿಸಿ ಕೊಡುವ ಪ್ರಕಟಣೆಯ ಬಗ್ಗೆ ಈ ಪ್ರತಿಷ್ಠಿತರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಕಾನೂನಿನ ಪ್ರಕಾರ ಎಲ್ಲ ರಾಷ್ಟ್ರೀಯ ಸ್ಮಾರಕಗಳ ಸಂರಕ್ಷಣೆಯ ಹೊಣೆ ಇರುವ ಭಾರತ ಪುರಾತತ್ವ ಸರ್ವೆ(ಎಎಸ್‌ಐ)ಗೇ ಮಾತ್ರವೇ ಈ ಎಲ್ಲ ಸ್ಮಾರಕಗಳ ಸಂರಕ್ಷಣೆಯನ್ನು ವಹಿಸಬೇಕೆಂದು ಅವರು ಸರಕಾರವನ್ನು ಆಗ್ರಹಿಸಿದ್ದಾರೆ.

ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವುದರ ವಿರುದ್ಧ ಮೇದಿನದಂದು ರಾಷ್ಟ್ರೀಯ ಪ್ರತಿರೋಧ ದಿನಾಚರಣೆ

ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಮೇಲೆ ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವ ಸುಪ್ರಿಂ ಕೋರ್ಟಿನ ತೀರ್ಪಿನ ವಿರುದ್ಧ ದೇಶಾದ್ಯಂತ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ರಚನೆಗೊಂಡಿರುವ 'ಬಲಿಷ್ಟ ದೌರ್ಜನ್ಯ ತಡೆ ಕಾಯ್ದೆಯ ಅನುಷ್ಠಾನಕ್ಕೆ ರಾಷ್ಟ್ರೀಯ ಮೈತ್ರಿಕೂಟ' ದುಡಿಯುವ ಹಕ್ಕುಗಳ ಈಡೇರಿಕೆಯ ಅಂತರ್ರಾಷ್ಟ್ರೀಯ ದಿನವಾಗಿ ಆಚರಿಸುವ ಮೇ ದಿನದಂದು 'ರಾಷ್ಟ್ರೀಯ ಪ್ರತಿರೋಧ ದಿನ' ಆಚರಿಸಲು ಕರೆ ನೀಡಿತ್ತು. ಅಂದು ದಿಲ್ಲಿಯಲ್ಲಿ ಮತಪ್ರದರ್ಶನ ನಡೆಯಿತು. ಅದನ್ನುದ್ದೇಶಿಸಿ ಸಿಪಿಐ(ಎಂ)ನ ಹಿರಿಯ ಮುಖಂಡರಾದ ಬೃಂದಾ ಕಾರಟ್ ಮತ್ತು ಇತರ ಮುಖಂಡರು ಮಾತಾಡಿದರು.



ಎರಡು 'ಕಿಸಾನ್ ಮುಕ್ತಿ' ಮಸೂದೆಗಳ ಚರ್ಚೆಗೆ ವಿಶೇಷ ಸಂಸದ್ ಅಧಿವೇಶನಕ್ಕೆ ಕರೆ– ಮೇ 10ರಂದು ರೈತರ ದೇಶವ್ಯಾಪಿ ಮತಪ್ರದರ್ಶನ

ನವೆಂಬರ್ 2017 ರಲ್ಲಿ ದೇಶಾದ್ಯಂತ ಸಂಚರಿಸಿದ ಕಿಸಾನ್ ಮುಕ್ತಿ ಯಾತ್ರಾಗಳ ನಂತರ ದಿಲ್ಲಿಯಲ್ಲಿ ಐತಿಹಾಸಿಕ ಕಿಸಾನ್ ಮುಕ್ತಿ ಸಂಸದ್ ನಡೆಯಿತು. ಈ ಪ್ರಕ್ರಿಯೆಯಲ್ಲಿ ರೈತರ ಆಧಾರಭೂತ ಸಮಸ್ಯೆಗಳನ್ನು ಕುರಿತಂತೆ ಎರಡು ಮಸೂದೆಗಳ ಕರಡುಗಳು ಮೂಡಿಬಂದವು. ಇವನ್ನು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯ ಬೇಕು ಎಂದು ಅಖಿಲ ಭಾರತ ಕಿಸಾನ್ ಸಂಘರ್ಷ ಸಂಯೋಜನಾ ಸಮಿತಿ' (ಎಐಕೆಎಸ್‌ಸಿಸಿ) ಆಗ್ರಹಿಸಿದೆ. ಇದಕ್ಕೆ ಬೆಂಬಲವಾಗಿ ಮೇ 10ರಂದು ದೇಶಾದ್ಯಂತ ರೈತರು ಮತಪ್ರದರ್ಶನ ನಡೆಸುತ್ತಾರೆ ಎಂದು 192 ರೈತ ಸಂಘಟನೆಗಳ ಈ ಜಂಟಿ ವೇದಿಕೆ ತಿಳಿಸಿದೆ.

ಎಪ್ರಿಲ್ 25 ರಂದು ಈ ಸಮಿತಿ ಏರ್ಪಡಿಸಿದ್ದ ಸಭೆಯಲ್ಲಿ 21 ರಾಜಕೀಯ ಪಕ್ಷಗಳು ಭಾಗವಹಿಸಿದ್ದು ಅವು ಈ ಎರಡು ಮಸೂದೆಗಳಿಗೆ ಬೆಂಬಲ ಸೂಚಿಸಿವೆ.

ಮಹಾರಾಷ್ಟ್ರದ ಸ್ವಾಭಿಮಾನ ಪಕ್ಷದ ಸಂಸದ್ ಸದಸ್ಯ ರಾಜು ಶೆಟ್ಟಿಯವರು ಲೋಕಸಭೆಯಲ್ಲಿ ಇವನ್ನು ಖಾಸಗಿ ಸದಸ್ಯನ ಮಸೂದೆಯಾಗಿ ಮಂಡಿಸುತ್ತಾರೆ, ರಾಜ್ಯಸಭೆಯಲ್ಲಿ ಸಿಪಿಐ(ಎಂ)ನ ಕೆ.ಕೆ. ರಾಗೇಶ್ ಮಂಡಿಸುತ್ತಾರೆ ಎಂದು ಎಐಕೆಎಸ್‌ಸಿಸಿ ಸಂಯೋಜಕ ವಿ.ಕೆ.ಸಿಂಗ್ ಹೇಳಿದ್ದಾರೆ.

ರೈತರ ಸಾಲಗ್ರಸ್ತೆಯಿಂದ ಸ್ವಾತಂತ್ರ್ಯ ಮಸೂದೆ, 2018 ಸಾಲಗ್ರಸ್ತ ರೈತರಿಗೆ ಒಮ್ಮೆ ಸಂಪೂರ್ಣ ಸಾಲಮನ್ನಾ ಪಡೆಯುವ ಮತ್ತು ಸಾಂಸ್ಥಿಕ ಸಾಲಗಳನ್ನು ಪಡೆಯುವ ಹಕ್ಕನ್ನು ನೀಡುತ್ತದೆ. ಇದು ಅಂಗೀಕಾರವಾದರೆ ಸಾಲಗ್ರಸ್ತತೆಯ ಮೂಲ ಕಾರಣಗಳನ್ನು ನಿವಾರಿಸುವ ಮತ್ತು ವಾತಾವರಣ ಬದಲಾವಣೆಯಿಂದ ಹೆಚ್ಚುತ್ತಿರುವ ನೈಸರ್ಗಿಕ ವಿಕೋಪಗಳನ್ನು ಎದುರಿಸಲು ನೆರವಾಗುವ ಒಂದು ರಾಷ್ಟ್ರೀಯ ಕಾನೂನು ಅಸ್ತಿತ್ವಕ್ಕೆ ಬಂದಂತಾಗುತ್ತದೆ.

ಎರಡನೇ ಮಸೂದೆಯ ಹೆಸರು: **ಕೃಷಿ ಸರಕುಗಳಿಗೆ ಫಲದಾಯಕ ಕನಿಷ್ಟ ಬೆಂಬಲ ಬೆಲೆ ಗ್ಯಾರಂಟಿಯ ರೈತರ ಹಕ್ಕು ಮಸೂದೆ,** 2018. ಸಮಗ್ರ ಉತ್ಪಾದನಾ ಖರ್ಚಿನ ಮೇಲೆ 50% ಲಾಭ ಬರುವಂತೆ ಕನಿಷ್ಟ ಬೆಂಬಲ ಬೆಲೆಯನ್ನು ಪಡೆಯುವ ಹಕ್ಕನ್ನು ಈ ಮಸೂದೆ ರೈತರಿಗೆ ಕೊಡುತ್ತದೆ, ಮತ್ತು ಅದಕ್ಕೆ ಸಂಬಂಧಪಟ್ಟ ಅಂಶಗಳನ್ನು ಪರಿಶೀಲಿಸುತ್ತದೆ. ರಾಷ್ಟ್ರೀಯ ಮತ್ತು ರಾಜ್ಯ ರೈತರ ಕೃಷಿ ಖರ್ಚುಗಳು ಮತ್ತು ಫಲದಾಯಕ ಬೆಲೆ ಗ್ಯಾರಂಟಿ ಆಯೋಗಗಳನ್ನು ರಚಿಸುವ ಪ್ರಸ್ತಾವ ಈ ಮಸೂದೆಯಲ್ಲಿದೆ.

ಇದು ಕಾನೂನಾದರೆ, ರೈತರಿಗೆ ಹೊಸ ಹುಮ್ಮಸ್ಸು ಸಿಗುತ್ತದೆ, ಅವರು ಸಾಲದ ಬಲೆಯೊಳಗೆ ಸಿಲುಕದೆ ಸಮಾಧಾನಕರವಾಗಿ ಬದುಕಲು, ಆಮೂಲಕ ಉತ್ಪಾದಕತೆಯನ್ನೂ ಹೆಚ್ಚಿಸಿ, ದೇಶದ ಆಹಾರ ಭದ್ರತೆ ಗಟ್ಟಿಗೊಳ್ಳುತ್ತದೆ ಎಂದು ಎಐಕೆಎಸ್‌ಸಿಸಿ ವಕ್ತಾರರು ಹೇಳುತ್ತಾರೆ.

ದುಡಿಯುವವರ ದನಿ ವಿಧಾನಸಭೆಯಲ್ಲಿ ಮೊಳಗಲಿ!

ಸಂಪಾದಕೀಯ

ಕರ್ನಾಟಕ ವಿಧಾನಸಭೆ ಚುನಾವಣಾ ಪ್ರಚಾರ ಈಗ ಪೂರ್ಣ ತೀವ್ರತೆ ಪಡೆದಿದೆ. ಮೂರೂ ಪಕ್ಷಗಳು ತಾವೇ ಸರಕಾರ ರಚಿಸುವುದು ಎಂದು ಬೀಗುತ್ತಿದ್ದಾರೆ. ಯೆಡಿಯೂರಪ್ಪ ನವರಂತೂ ಪ್ರಮಾಣ ವಚನದ ತಾರೀಕು, ಸ್ಥಳ, ಆಹ್ವಾನಿತರ ಪಟ್ಟಿ ಘೋಷಿಸಿದ್ದಾರೆ. ಕೂಸು ಹುಟ್ಟುವ ಮೊದಲು ಕುಲಾವಿ ಹೊಲಿದದ್ದು ಮಾತ್ರವಲ್ಲ, ಕರ್ನಾಟಕದ ಜನತೆಯ ತೀರ್ಪಿಗೆ ಕಾಯದೆ ಅವಮಾನ ಮಾಡಿದ್ದಾರೆ. ಮೋದಿ ಮತ್ತು ಇತರ ತಾರಾ ಪ್ರಚಾರಕರು ಪ್ರಚಾರ ಆರಂಭಿಸಿದ್ದು ಸುಳ್ಳುಗಳ ಸರಮಾಲೆ ಪಟಾಕಿ ಸಿಡಿಯತೊಡಗಿದೆ. ರಾಜಕೀಯ ಸಂಕಥನದ ಮಟ್ಟ ದಿನೇ ದಿನೇ ಕುಸಿಯುತ್ತಿದೆ. ಅಷ್ಟರ ಮಟ್ಟಿಗೆ ನಿಜವಾದ ಚರ್ಚೆಯಾಗಬೇಕಾದ ವಿಷಯಗಳು ಮರೆಯಾಗುತ್ತಿವೆ. ಮೋದಿ ಅವರ ಈ ಸುತ್ತಿನ ಪ್ರಚಾರ '2+1 ದಾಳಿ'ಯಿಂದ ಆರಂಭವಾಗಿತ್ತು. ತಾನೇ 2014 ಚುನಾವಣೆಯಲ್ಲಿ ಎರಡು ಕಡೆ ಸ್ಪರ್ಧೆ ಮಾಡಿ, ಯೆಡಿಯೂರಪ್ಪ ಸೇರಿ ಹಲವು ಬಿಜೆಪಿ ನಾಯಕರಿಗೆ ಮಕ್ಕಳಿಗೆ ಟಿಕೇಟು ಕೊಟ್ಟಿರುವಾಗ 2+1 ಎಂದು ಸಿದ್ಧರಾಮಯ್ಯನವರ ಮೇಲೆ ದಾಳಿ ಮಾಡುವುದು ತಮ್ಮ ತಟ್ಟೆಯಲ್ಲಿ ಬಿದ್ದ ಹೆಗ್ಗಣ ಕಾಣದೆ ಬೇರೆಯವರ ತಟ್ಟೆಯಲ್ಲಿ ನೊಣ ಬಿದ್ದಿರುವುದನ್ನು ತೋರಿಸಿದಂತೆ.

ಮೋದಿ ದೇವೇಗೌಡ ಅವರನ್ನು ಹೊಗಳಿದ್ದು ಅದಕ್ಕೆ ಉಬ್ಬಿ ದೇವೇಗೌಡರು ಹೇಳಿಕೆ ನೀಡಿದ್ದು ಎರಡು ಪಕ್ಷಗಳ ನಡುವೆ ಒಳ ಒಪ್ಪಂದ ನಡೆದಿರುವ ಬಗೆಗಿನ ವ್ಯಾಪಕ ಊಹಾಪೋಹವನ್ನು ಖಚಿತ ಪಡಿಸುವಂತಿತ್ತು. ದೇವೇಗೌಡರನ್ನು ಚುನಾವಣೆಯ ನಂತರ ವೃದ್ಧಾಶ್ರಮ ಸೇರಿಸಬೇಕು ಅಂತ 2014ರಲ್ಲಿ ಕೀಳು ಮಟ್ಟದ ವೈಯಕ್ತಿಕ ಟೀಕೆ ಮಾಡಿದ ಮೋದಿಯನ್ನು ಪ್ರಧಾನಿ ಆದ ಮೇಲೆ ಭೇಟಿ ಮಾಡಿ ರಾಜಿನಾಮೆ ಕೊಟ್ಟೆ. ನಿಮ್ಮಂತಹ ಹಿರಿಯರು ಇರಬೇಕು ಎಂದು ಹೇಳಿ ಅವರು ಗೌರವಯುತವಾಗಿ ಹೇಳಿದರು ಎಂಬ ಅವರ ಕಾಗಕ್ಕ ಗೂಬಕ್ಕ ಕತೆಯನ್ನು ಕಿವಿಯ ಮೇಲೆ ಕಮಲ ಇಟ್ಟುಕೊಂಡವರು ಮಾತ್ರ ನಂಬಬಹುದು! ಅದೇ ಉಸಿರಿನಲ್ಲಿ ಸಿದ್ಧರಾಮಯ್ಯನವರು ತಮ್ಮ ಕಚೇರಿಯಲ್ಲಿ ತನ್ನ ಫೊಟೊ ತೆಗೆದು ಹಾಕಿ ಅವಮಾನ ಮಾಡಿದರು ಎಂದು ಹೇಳಿದ್ದು ಹಾಸ್ಯಾಸ್ಪದವೂ ಶೋಚನೀಯವೂ ಆಗಿತ್ತು. ಇಲ್ಲಿ ಇಬ್ಬರೂ ತಮ್ಮ ತಂತ್ರಗಾರಿಕೆಯ ಭಾಗವಾಗಿ ಇವೆಲ್ಲವನ್ನೂ ಹೇಳುತ್ತಿದ್ದಾರೆ ಎಂಬುದು ಸ್ಪಷ್ಟ. ಆದರೆ ಅದರಿಂದ ಜೆಡಿ(ಎಸ್)ಗೆ ಲಾಭವಾಗುತ್ತದೆಯೇ ಎಂಬುದು ಪ್ರಶ್ನಾರ್ಹ. ಅದು ಸೆಕ್ಯುಲರ್ ಮತ್ತು ನೀತಿಬದ್ಧ ಪಕ್ಷ ಎಂಬ ವಿಶ್ವಾಸಾರ್ಹತೆಯನ್ನು ಯಾವಾಗಲೋ ಕಳೆದುಕೊಂಡಿದೆ. ಬಿಜೆಪಿ ಕೇಂದ್ರ ಸರಕಾರದ ಆಡಳಿತ ವೈಖರಿಯನ್ನಾಗಲಿ, ರಾಜ್ಯದಲ್ಲಿ ಬಿಜೆಪಿಯ ಕೋಮುವಾದಿ ನಡವಳಿಕೆಯನ್ನಾಗಲಿ ಎಂದೂ ಗಂಭೀರವಾಗಿ ಅದು ಟೀಕಿಸಿಲ್ಲ. ಕಾಂಗ್ರೆಸ್ ಅದರ ಮೇಲೆ ಬಿಜೆಪಿಯ ಬಿ ಟೀಂ ಎಂದು ದಾಳಿ ಮಾಡುತ್ತಿರುವಾಗ, ಕನಿಷ್ಠ ತಾನೊಂದು ಸ್ವತಂತ್ರ ಪಕ್ಷವೆಂದು ಬಿಂಬಿಸುವ ಅಗತ್ಯ ಇರುವಾಗ, ಈ ರೀತಿಯ ವರ್ತನೆ ಜೆಡಿ(ಎಸ್)ಗೆ ಹಾನಿ ಮಾಡುವಂತಹುದು. ಜೆಡಿ(ಎಸ್) ಬಿಜೆಪಿಯ ಟೀಂ ಆದರೆ ಅದರ ಬೆಂಬಲಿಗರ ಕನಿಷ್ಠ ಒಂದು ವಿಭಾಗದ ಜನಕ್ಕೆ, ಬಿ ಟೀಮಿಗೆ ಯಾಕೆ ಎ ಟೀಮಿಗೆ ಮತ ಹಾಕೋಣ ಎಂದನಿಸಲಿಕ್ಕಿಲ್ಲವೇ? ಅದು ಬಿಜೆಪಿಯ ಉದ್ದೇಶವೂ ಆಗಿರಲಿಕ್ಕಿಲ್ಲವೇ? ಜೆಡಿ(ಎಸ್) ತನ್ನ ಅಸ್ತಿತ್ವ ಉಳಿಸಿಕೊಳ್ಳಲು, ಅದರ ಸೀಮಿತ ಉದ್ದೇಶವಾದ 'ಕಿಂಗ್ ಮೇಕರ್' ಆಗಬೇಕಾದರೂ ಬಿಜೆಪಿಯಿಂದ ಅದು ತನ್ನನ್ನು ಪ್ರತ್ಯೇಕಿಸಿಕೊಳ್ಳಬೇಕಾಗಿದೆ.

ರಾಹುಲ್ ಗಾಂಧಿ ಅವರ ಮೇಲೆ ವೈಯಕ್ತಿಕ ಟೀಕೆಯ ಹಳೆಯ ವಿಧಾನವನ್ನೂ ಮೋದಿ ಮುಂದುವರೆಸಿದ್ದಾರೆ. 15 ನಿಮಿಷಗಳಲ್ಲಿ ಟಿಪ್ಪಣಿ ನೋಡದೆಯೋ ನೋಡಿಯೋ ಕೇಂದ್ರ ಮತ್ತು ರಾಜ್ಯ ಸರಕಾರಗಳ ಸಾಧನೆಗಳ ಬಗ್ಗೆ ಆಶು ಭಾಷಣಕ್ಕೆ ಇಬ್ಬರ ಸವಾಲು–ಸ್ಪರ್ಧೆ ಮತ್ತು ಕನ್ನಡದ ಸಾಧಕರ ಹೆಸರನ್ನು ಸರಿಯಾಗಿ ಉಚ್ಚಾರ ಮಾಡುವುದರ ಬಗೆಗೂ ಸವಾಲು–ಸ್ಪರ್ಧೆ ಸಹ ಹಾಸ್ಯಾಸ್ಪದವೂ ಶೋಚನೀಯವೂ ಆಗಿತ್ತು. ಅಕ್ರಮ ಗಣಿಕೋರರ ಮೇಲೆ ಅವಲಂಬಿಸಿ ಅವರಿಗೆ ಟಿಕೆಟ್ ಕೊಟ್ಟು ಭ್ರಷ್ಟಾಚಾರದ ಬಗ್ಗೆ ಉಪದೇಶ ಮಾಡುವುದರ ಬಗೆಗೂ ಅಷ್ಟೇ. ದೇಶದ ರಾಜಕೀಯ–ತಟಸ್ಥ ಮಿಲಿಟರಿಯನ್ನು ರಾಜಕೀಯಕ್ಕೆ ಎಳೆ ತರುವ ಮತ್ತು ಕರ್ನಾಟಕದ ಜನತೆಯ ಸ್ವಾಭಿಮಾನ ಕೆರಳಿಸಲು ಮಾಡಿದ ಮೋದಿಯ ಪ್ರಯತ್ನ ಮಾತ್ರ ಬಹಳ ಅಪಾಯಕಾರಿಯಾದ್ದು. ಕರ್ನಾಟಕದ ಜನರಲ್ ಕಾರಿಯಪ್ಪ ಮತ್ತು ತಿಮ್ಮಯ್ಯ ಅವರಿಗೆ ನೆಹರೂ ಮತ್ತು ಕಾಂಗ್ರೆಸ್ ಅವಮಾನ ಮಾಡಿದ್ದರು ಎಂಬುದರ ಮೂಲಕ ಕರ್ನಾಟಕದ ಜನತೆಯ ಸ್ವಾಭಿಮಾನ ಕೆರಳಿಸಲು ಮೋದಿ ಪ್ರಯತ್ನಿಸಿದರು. ಅದರಲ್ಲಿ ಯಥಾ ಪ್ರಕಾರ ಚರಿತ್ರೆ ತಪ್ಪು ತಪ್ಪಾಗಿದ್ದು ಸಿಕ್ಕಿ ಹಾಕಿಕೊಂಡರು ಎಂಬುದು ಬೇರೆ ಮಾತು. 1947ರಲ್ಲಿ ಕಾಶ್ಮೀರದ ರಕ್ಷಣೆ ಮಾಡಿದ ಜನರಲ್ ತಿಮ್ಮಯ್ಯ ಅವರನ್ನು ನೆಹರೂ ಮತ್ತು ಕೃಷ್ಣ ಮೆನನ್ ಅವಮಾನಿಸಿದರು. ರಾಜಿನಾಮೆ ಕೊಡುವಂತೆ ಮಾಡಿದರು, ಎಂದರು ಮೋದಿ. ಕೃಷ್ಣ ಮೆನನ್ ರಕ್ಷಣಾ ಮಂತ್ರಿ ಯಾಗಿದ್ದು 1957ರಲ್ಲಿ! ಆದರೆ, ಯಾವುದೇ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಮತ್ತು ಮಿಲಿಟರಿ ನಾಯಕತ್ವಕ್ಕೆ ಭಿನ್ನಾಭಿಪ್ರಾಯ ಇರಲು ಸಾಧ್ಯ. ಆದರೆ ಚುನಾಯಿತ ರಾಜಕೀಯ ನಾಯಕತ್ವದ ನಿರ್ದೇಶನದಂತೆ ಮಿಲಿಟರಿ ನಾಯಕತ್ವ ನಡೆಯಬೇಕು ಎಂಬ ನೀತಿಯನ್ನು ತಿರುವು ಮುರುವು ಮಾಡಿದರು ಮೋದಿ ಅಗ್ಗದ ಚುನಾವಣಾ ಪ್ರಚಾರಕ್ಕಾಗಿ.

ಆದರೆ ಮೋದಿ ಮಾತ್ರ ಹೇಳಬಲ್ಲ ಬೊಗಳೆ ಎಂದರೆ ಪೂರ್ಣ ವಿದ್ಯುದೀಕರಣದ ಬಗ್ಗೆ. ಪ್ರತಿ ಪ್ರಮುಖ ಚುನಾವಣೆಯ ಮೊದಲು ಮೋದಿ, 'ಕಾಂಗ್ರೆಸ್ 70 ವರ್ಷಗಳಲ್ಲಿ ಮಾಡಲಾಗದ್ದನ್ನು' ಬಿಜೆಪಿ ಮಾಡಿದ ಒಂದು ಭಾರಿ 'ಹುಸಿ ಸಾಧನೆ'ಯನ್ನು ಸೃಷ್ಟಿಸುತ್ತಾರೆ. ಕರ್ನಾಟಕ ಚುನಾವಣೆಗೆ 'ಹುಸಿ ಸಾಧನೆ' ಪೂರ್ಣ ವಿದ್ಯುದೀಕರಣವಾಗಿತ್ತು. ವಾಸ್ತವವಾಗಿ ಮೋದಿ ಸರ್ಕಾರದ ಅವಧಿಯಲ್ಲಿ ವಿದ್ಯುತ್ ಸಂಪರ್ಕ ಒದಗಿಸಲಾದ ಒಟ್ಟು ಗ್ರಾಮಗಳ ಸಂಖ್ಯೆ ಕೇವಲ 19,727. ಯುಪಿಎ ಸರ್ಕಾರದ ಅವಧಿಯಲ್ಲೂ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆ ಜಾರಿಯಲ್ಲಿತ್ತು. 2014ರಲ್ಲಿ ಮೋದಿ ಸರ್ಕಾರ ಅಧಿಕಾರ ಗದ್ದುಗೆ ಏರಿದಾಗ, 5,79,012 ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿತ್ತು. ವಿದ್ಯುತ್ ಸಂಪರ್ಕ ಇಲ್ಲದ ಗ್ರಾಮಗಳ ಸಂಖ್ಯೆ 18,452 ಇತ್ತು. ಆ ನಂತರ ಮತ್ತೆ ವಿದ್ಯುತ್ ಸಂಪರ್ಕ ಇಲ್ಲದ 1,275 ಗ್ರಾಮಗಳು ಹೆಚ್ಚುವರಿಯಾಗಿ ಪತ್ತೆಯಾಗಿದ್ದವು. ಇತ್ತೀಚೆಗೆ ಮಣಿಪುರದ ಲೈಸಾಂಗ್ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವುದರೊಂದಿಗೆ ದೇಶದ ಎಲ್ಲಾ ಗ್ರಾಮಗಳಿಗೂ ವಿದ್ಯುತ್ ಸೌಲಭ್ಯ ಸಿಕ್ಕಿದಂತಾಗಿದೆ. ಪ್ರತಿವರ್ಷ 12,030 ಗ್ರಾಮಗಳಿಗೆ ಯುಪಿಎ ಸರ್ಕಾರದ ಅವಧಿಯಲ್ಲಿ ವಿದ್ಯುತ್ ನೀಡಲಾಗಿದೆ. ಮೋದಿ ಸರ್ಕಾರದ ಅವಧಿಯಲ್ಲಿ ಪ್ರತಿವರ್ಷ 4,842 ಗ್ರಾಮಗಳಿಗೆ ವಿದ್ಯುತ್ ನೀಡಲಾಗಿದೆ. ಪರಿಸ್ಥಿತಿ ಹೀಗಿರುವಾಗ, ಎಲ್ಲಾ ಗ್ರಾಮಗಳಿಗೆ ತ್ವರಿತಗತಿಯಲ್ಲಿ ಮೋದಿ ಸರ್ಕಾರ ವಿದ್ಯುತ್ ಸೌಲಭ್ಯ ಕಲ್ಪಿಸಿದೆ ಎಂದು ಕೊಚ್ಚಿಕೊಳ್ಳುವುದು ಹಸಿ ಸುಳ್ಳು. ಈಗಿನ ವಿದ್ಯುದೀಕರಣ ಮಾನದಂಡಗಳ ಪ್ರಕಾರ, ಒಂದು ಗ್ರಾಮದಲ್ಲಿ ಶೇ 10ರಷ್ಟು ಮನೆಗಳು ಹಾಗೂ ಶಾಲೆ, ಆರೋಗ್ಯ ಕೇಂದ್ರ, ಪಂಚಾಯಿತಿ ಕಚೇರಿಯಂತಹ ಸಾರ್ವಜನಿಕ ಬಳಕೆಯ ಕೇಂದ್ರಗಳಿಗೆ ವಿದ್ಯುತ್ ಇದ್ದಲ್ಲಿ ಆ ಗ್ರಾಮವನ್ನು ವಿದ್ಯುತ್ ಜಾಲದಲ್ಲಿರುವ ಗ್ರಾಮವಾಗಿ ಪರಿಗಣಿಸಲಾಗುತ್ತದೆ. ಪೂರ್ಣ ವಿದ್ಯುದೀಕರಣ ಎಂದರೆ ಎಲ್ಲಾರಿಗೂ ವಿದ್ಯುತ್ ಸಂಪರ್ಕಯಿದೆ ಎಂದರ್ಥವಲ್ಲ. ದೇಶದ ಮೂರು ಕೋಟಿಗೂ ಹೆಚ್ಚು ಮನೆಗಳು ವಿದ್ಯುತ್ ಸಂಪರ್ಕಕ್ಕಾಗಿ ಇನ್ನೂ ಕಾಯುತ್ತಿವೆ. ಅದರಲ್ಲೂ ಉತ್ತರಪ್ರದೇಶ, ಜಾರ್ಖಂಡ್ ನಂತಹ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ವಿದ್ಯುತ್ ಇಲ್ಲದ ಮನೆಗಳ ಪ್ರಮಾಣ ಶೇ 40ಕ್ಕೂ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ಈ ಬೊಗಳೆ ಇನ್ನಷ್ಟು ಹೀನಾಯವಾದ್ದು.

ಇಂತಹ ಬೊಗಳೆ ರಾಜಕೀಯ ಸಂಕಥನ ನಡೆಯುತ್ತಿರುವಾಗ, ಪಕ್ಷದ ಪ್ರಣಾಳಿಕೆಗಳಿಗೆ ಅಷ್ಟು ಮಹತ್ವವಿರುವುದಿಲ್ಲ. ಅವೂ ಬೊಗಳೆನೇ ಎಂದು ಜನಕ್ಕೆ ಗೊತ್ತು. ಅದರ ಬಗ್ಗೆ ಜನಕ್ಕೆ ಕುತೂಹಲವೂ ಉಳಿದಿಲ್ಲ. ಕಾಂಗ್ರೆಸ್ ಚುನಾಣೆಯ 2 ವಾರಗಳ ಮೊದಲು ಪ್ರಣಾಳಿಕೆ ಬಿಡುಗಡೆ ಮಾಡಿದ ಮೇಲೆ, ಚುನಾವಣೆಗೆ ಕೇವಲ 1 ವಾರ ಉಳಿದಿರುವಾಗ ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಕಾಂಗ್ರೆಸ್ ಪ್ರಣಾಳಿಕೆ ಸಾಲಮನ್ನಾ, ನೀರಾವರಿಗೆ ಹೂಡಿಕೆ ಮಾಡುವ, ರೈತರ ಬೆಳೆಗಳಿಗೆ ಲಾಭದಾಯಕ ಬೆಲೆ ಕೊಡುವ, ಲೋಕಾಯುಕ್ತ ಬಲಗೊಳಿಸುವ, ಲ್ಯಾಪ್ ಟಾಪ್, ಮೊಬೈಲ್ ಕೊಡುವ ಜನಮರುಳು ಅಂಶಗಳು ಇವೆ. ಕೆಲವು ಜನಮರುಳು ಅಂಶಗಳು ಆಂಶಿಕವಾಗಿ ಬಿಟ್ಟರೆ ಇವ್ಯಾವುವೂ ಜಾರಿಯಾಗುವುದಿಲ್ಲ ಎಂದು ಎಲ್ಲರಿಗೂ ಗೊತ್ತು. ಆಸಕ್ತಿಕಾರಕ ಅಂಶ ಎಂದರೆ ಕೇಂದ್ರ ಸರಕಾರದಲ್ಲಿ ಯುಪಿಎ ಸರಕಾರದ ಯೋಜನೆಗಳನ್ನು ಪುನರ್ನಾಮಕರಣ ಮಾಡಿ (ನಿರ್ಮಲ ಭಾರತ್ -> ಸ್ವಚ್ಛ ಭಾರತ್) ಬೇರೆ ಎಂದು ತೋರಿಸುವಂತಹ ಪ್ರಯತ್ನ ಇಲ್ಲೂ ನಡೆದಿದೆ. ಕಾಂಗ್ರೆಸ್ ಪ್ರಣಾಳಿಕೆಯ ಯೋಜನೆಗಳಿಗೆ (ಇಂದಿರಾ ಕ್ಯಾಂಟೀನ್ -> ಅನ್ನಪೂರ್ಣ ಕ್ಯಾಂಟೀನ್) ಬೇರೆ ಹೆಸರು ಕೊಟ್ಟು ಅದನ್ನು ಸ್ವಲ್ಪ ವಿಸ್ತರಿಸುವ ಪ್ರಯತ್ನವೂ ನಡೆದಿದೆ. ರೈತರ ಸಾಲಮನ್ನಾ ಮತ್ತು ಬೆಲೆಗಳ ಬಗ್ಗೆ ಬಿಜೆಪಿ ಗಂಭೀರವಾಗಿದ್ದರೆ ಕೇಂದ್ರೀಯ ಋಣಮುಕ್ತ ಮತ್ತು ಬೆಲೆಗಳ ಬಗ್ಗೆ ಕಾನೂನು ತಂದು ಏಕೆ ಜಾರಿ ಮಾಡುವುದಿಲ್ಲ? ಆದರೆ ನಿರೀಕ್ಷಿತವೋ ಎಂಬಂತೆ ಗೋರಕ್ಷಣೆ ಕಾಯಿದೆ ಮತ್ತು ಕೆ.ಡಿ.ಎಫ್.–ಎಸ್.ಡಿ.ಪಿ.ಐ. ನಿಷೇಧದ ಬಗ್ಗೆ ಪ್ರಸ್ತಾಪವಿದೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಇವೆಲ್ಲಕ್ಕಿಂತಲೂ ಮುಖ್ಯವಾಗಿ ಕಾರ್ಮಿಕ ವರ್ಗದ ಮತ್ತು ಕೃಷಿ ಕೂಲಿಕಾರರ ಕನಿಷ್ಟ ಕೂಲಿ, ರೇಗಾ ಆಹಾರ ಭದ್ರತೆ ವಿಸ್ತರಿಸುವ, ಕೈಗಾರಿಕೆ–ಕೃಷಿಗೆ ಹೂಡಿಕೆ ಮಾಡುವ ಯಾವ ಪ್ರಸ್ತಾಪವೂ ಎರಡೂ ಪ್ರಣಾಳಿಕೆಗಳಲ್ಲೂ ಇಲ್ಲ. ಮಹದಾಯಿ, ಕಾವೇರಿ ವಿವಾದಗಳನ್ನು ಹೇಗೆ ಬಗೆಹರಿಸಲಾಗುವುದು, ಜಿ.ಎಸ್.ಟಿ.–15ನೇ ಹಣಕಾಸು ಆಯೋಗದ ನಂತರದ ಅವಧಿಯಲ್ಲಿ ರಾಜ್ಯದ ಆದಾಯಮೂಲದ ಸಮಸ್ಯೆಯ ಪರಿಹಾರವೇನು ಎಂಬುದರ ಬಗ್ಗೆ ಪ್ರಸ್ತಾಪವಿಲ್ಲ. ಈ ಮೂರು ಪಕ್ಷಗಳಿಂದ ಇದನ್ನು ನಿರೀಕ್ಷಿಸಲೂ ಸಾಧ್ಯವಿಲ್ಲ. ಸ್ಪಷ್ಟ ಜನಪರ ಧೋರಣೆಗಳಿರುವ ಎಡ ಜನಪ್ರತಿನಿಧಿಗಳು ವಿಧಾನಸಭೆಯಲ್ಲಿ ದುಡಿಯುವ ಜನರ ದನಿಯನ್ನು ಮೊಳಗಿಸದೆ ಇದು ಸಾಧ್ಯವೂ ಇಲ್ಲ. ಚುನಾವಣಾ ಪ್ರಚಾರದ ವೈಯಕ್ತಿಕ ಕೀಳು ಮಟ್ಟದ ಕೆಸರೆರಚಾಟ ಮಾಡುವ, ನಿಜವಾದ ವಿಷಯಗಳನ್ನು ಮರೆಮಾಚುವ ಕೆಲಸ ವಿಧಾನಸಭೆಯಲ್ಲೂ ಮುಂದುವರೆಯುತ್ತದೆ. ಆದ್ದರಿಂದ ಕರ್ನಾಟಕದ ಜನತೆ ಎಡ ಅಭ್ಯರ್ಥಿಯ ಆಯ್ಕೆ ಇರುವ ಕ್ಷೇತ್ರಗಳಲ್ಲಿ ಅವರನ್ನು ಆರಿಸಿ ವಿಧಾನಸಭೆಯಲ್ಲಿ ದುಡಿಯುವ ಜನರ ದನಿಯನ್ನು ಮೊಳಗಿಸಬೇಕು.

ಕರ್ನಾಟಕ ವಿಧಾನ ಸಭಾ ಚುನಾವಣೆ ಮಹಿಳೆಯರ ಬೇಡಿಕೆಗಳ ಪಟ್ಟಿ

ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಗೆ ಸಜ್ಜಾಗಿ ನಿಂತಿದೆ. ಚುನಾವಣೆ ಎಂದರೆ ಜನತಂತ್ರದ ಹಬ್ಬವಿದು. ಮತದಾರರ ಆಶೋತ್ತರಗಳಿಗೆ ಉತ್ತರವಾಗಿ, ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಜನಪ್ರತಿನಿಧಿಗಳು ಮಾತನಾಡಬೇಕು, ತಮ್ಮ ನೆಲೆ ನಿಲುವುಗಳನ್ನು ವ್ಯಕ್ತಪಡಿಸಬೇಕು. ಆದರೆ ಈ ಚುನಾವಣೆಯೂ ಸೇರಿದಂತೆ ಇತ್ತೀಚಿನ ವರ್ಷಗಳಲ್ಲಿ ಜನರ ಸಮಸ್ಯೆಗಳ ಬಗ್ಗೆ ತಮ್ಮ ಪಕ್ಷದ ನಿಲುವನ್ನು ಸ್ಪಷ್ಟಪಡಿಸುವ ಬದಲು ವೈಯಕ್ತಿಕ ದೋಷಾರೋಪಣೆ, ಕೆಸರೆರೆಚಾಟದಲ್ಲಿ ರಾಜಕೀಯ ಪಕ್ಷಗಳು ನಿರತರಾಗಿರುವುದು ವಿಷಾದದ ಸಂಗತಿ.

ಈ ಹಿನ್ನೆಲೆಯಲ್ಲಿ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಯ ಮೂಲಕವಷ್ಟೇ ನಿಜವಾದ ಪ್ರಗತಿ ಸಾಧ್ಯ ಎಂದು ನಂಬುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯದ ಚುನಾವಣೆಯನ್ನು ಜನರ ಸಮಸ್ಯೆಗಳ ಪರಿಹಾರದ ನೆಲೆಯಲ್ಲಿ ನೋಡಲು ಬಯಸುತ್ತದೆ. ನೆಲದ ಅನುಭವದ ಆಧಾರದಲ್ಲಿ ರಾಜ್ಯದ ಮಹಿಳೆಯರ ಪ್ರಗತಿಗೆ ಅಗತ್ಯವಾದ ಕ್ರಮ ಕೈಗೊಳ್ಳಲು ಚುನಾವಣೆಯ ಮುಂದೆ, ರಾಜಕೀಯ ಪಕ್ಷಗಳ ಗಮನಕ್ಕೆ, ಮುಂದಿನ ಸರ್ಕಾರ ಮಹಿಳೆಯರ ಅಗತ್ಯಕ್ಕನುಗುಣವಾಗಿ ನೀತಿ ನಿರೂಪಣೆಗಳನ್ನು ಜಾರಿಮಾಡುವಂತೆ ಒತ್ತಾಯಿಸುತ್ತ 'ಮಹಿಳೆಯರ ಬೇಡಿಕೆಗಳ ಪಟ್ಟಿ' ಗಳನ್ನು ಬಿಡುಗಡೆ ಮಾಡುತ್ತಿದ್ದೇವೆ.

ಮಹಿಳೆಯರ ಘನತೆಯ ಬದುಕಿಗಾಗಿ :

☐ ಮಹಿಳೆಯರು ಮತ್ತು ಮಕ್ಕಳ ವಿರುದ್ಧ ನಡೆಯುವ ಎಲ್ಲ ರೀತಿಯ ದೌರ್ಜನ್ಯಗಳನ್ನು ನಿಯಂತ್ರಿಸಲು ಅಗತ್ಯವಾದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

☐ ಪ್ರಾಥಮಿಕ ಶಾಲೆ, ಹೈಸ್ಕೂಲುಗಳಲ್ಲಿ ಆಪ್ತ ಸಲಹಾ ಕೇಂದ್ರಗಳನ್ನು ತೆರೆಯಬೇಕು.

☐ ಹೈಸ್ಕೂಲ್ ಮತ್ತು ಪಿ.ಯು.ಸಿ ತರಗತಿಗಳಲ್ಲಿ ಹದಿಹರೆಯದ ಜ್ಞಾನಪಠ್ಯವನ್ನು ಅಳವಡಿಸಬೇಕು.

☐ ಜಸ್ಟೀಸ್ ವರ್ಮಾ ಆಯೋಗದ ಶಿಫಾರಸುಗಳನ್ನು ಸರಿಯಾಗಿ ಜಾರಿಗೆ ತರಬೇಕು. ಅತ್ಯಾಚಾರದಂಥಹ ಪ್ರಕರಣಗಳಲ್ಲೂ ನ್ಯಾಯಕ್ಕಾಗಿ ಅಲೆದಾಡುವ ಸ್ಥಿತಿ ಇದೆ. ಅದು ಬದಲಾಗಬೇಕು. ನ್ಯಾಯದ ದಾರಿಯಲ್ಲಿ ಜಾತಿ ಧರ್ಮ ಪೀಠ, ಸ್ಥಾನಗಳು ಅಡ್ಡಿ ಬಾರದಂತೆ ಕ್ರಮ ವಹಿಸಬೇಕು.

☐ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವನ, ಚಿಕಿತ್ಸೆ, ಕಾನೂನು ನೆರವುಗಳನ್ನು ನೀಡಲು ತೆರೆದಿರುವ ಒಂದೇ ಸೂರಿನಡಿಯ ಚಿಕಿತ್ಸಾ ಘಟಕಗಳು. ಎಲ್ಲ ತಾಲೂಕು ಕೇಂದ್ರಗಳಲ್ಲಿ ತೆರೆಯಬೇಕು ಮತ್ತು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು.

☐ ಮಹಿಳಾ ಸ್ನೇಹಿ ಪೋಲೀಸ್ ಠಾಣೆಗಳು ಮತ್ತು ಮಹಿಳಾ ಪೋಲೀಸ್ ನೇಮಕಕ್ಕೆ ಗಮನ ಕೊಡಬೇಕು.

☐ ಮಹಿಳೆಯರಿಗೆ ವೈವಾಹಿಕ ಜೀವನದ ಆಸ್ತಿಯಲ್ಲಿ ಸಮಾನ ಹಕ್ಕು ಇರುವಂತಹ ಕಾನೂನನ್ನು ರೂಪಿಸಬೇಕು.

☐ ಯುವ ಜನರ ಆಯ್ಕೆಯ ಹಕ್ಕುಗಳನ್ನು ಎತ್ತಿಹಿಡಿಯಬೇಕು. ಮರ್ಯಾದೆ ಹೆಸರಿನಲ್ಲಿ ನಡೆಯುತ್ತಿರುವ ದೌರ್ಜನ್ಯ ಮತ್ತು ಹತ್ಯೆಗಳನ್ನು ನಿಯಂತ್ರಿಸಲು ಪ್ರತ್ಯೇಕ ಕಾನೂನನ್ನು ರೂಪಿಸಬೇಕು.

☐ ದೇವದಾಸಿ ಪದ್ಧತಿಯ ನಿರ್ಮೂಲನೆ ಮತ್ತು ಪುನರ್ವಸತಿಯ ಭಾಗವಾಗಿ ಮರು ಸಮೀಕ್ಷೆ ಹಾಗೂ ಭೂಮಿ ಹಂಚಿಕೆಯಂಥಹ ಗುಣಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು.

☐ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತ್ತು ಅಲ್ಪ ಸಂಖ್ಯಾತ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಹೀನಾಯ ಲೈಂಗಿಕ ದೌರ್ಜನ್ಯಗಳ ವ್ಯಾಪ್ತಿಗೆ ತರಬೇಕು.

☐ ದುಡಿಯುವ ಸ್ಥಳಗಳಲ್ಲಿ ಕಾನೂನಿನ ಪ್ರಕಾರ ರಚಿಸಬೇಕಿರುವ ಕ್ರಿಯಾಶೀಲ ಲೈಂಗಿಕ ದೌರ್ಜನ್ಯ ತಡೆ ಸಮಿತಿಗಳನ್ನು ಕಡ್ಡಾಯವಾಗಿ ರಚಿಸಬೇಕು. ಉಲ್ಲಂಘನೆಗೆ ದಂಡ ವಿಧಿಸಿ ಪಾಠ ಕಲಿಸಬೇಕು.

☐ ಕರ್ನಾಟಕ ಮೂಡನಂಬಿಕೆ ಆಚರಣೆಗಳ ಪ್ರತಿಬಂಧಕ ಕಾನೂನನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು.

☐ ಲೈಂಗಿಕ ಕಾರ್ಯಕರ್ತೆಯರ ಕುರಿತು ಅಧ್ಯಯನ ನಡೆಸಲು ಮತ್ತು ಮಹಿಳೆ ಮತ್ತು ಮಕ್ಕಳ ವಿರುದ್ಧ ನಡೆಯುವ ಅತ್ಯಾಚಾರ ಲೈಂಗಿಕ ದೌರ್ಜನ್ಯಗಳ ತಡೆ ಗೆ ಸರ್ಕಾರಕ್ಕೆ ಸಲಹೆ ನೀಡಲು ರಚಿಸಿದ್ದ ಸಮಿತಿಗಳು ಸಲ್ಲಿಸಿದ ವರದಿಗಳನ್ನು ಸಾರ್ವಜನಿಕರ ಚರ್ಚೆಗೆ ಬಿಟ್ಟು ಜಾರಿಗೆ ಕ್ರಮ ಕೈಗೊಳ್ಳಬೇಕು.

☐ ರಾಜ್ಯ ಮಹಿಳಾ ನೀತಿಯ ಕರಡು ಶೈತ್ಯಾಗಾರಕ್ಕೆ ತಳ್ಳಲ್ಪಟ್ಟಿದ್ದು ಅದನ್ನು ಹೊರತೆಗೆದು ಸಾರ್ವಜನಿಕ ಚರ್ಚೆ ಮತ್ತು ಅನುಷ್ಠಾನಕ್ಕೆ ತರಬೇಕು.

ಮಹಿಳೆಯರ ರಾಜಕೀಯ ಹಕ್ಕೊತ್ತಾಯಗಳು

☐ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ 33% ಮಹಿಳಾ ಮೀಸಲಾತಿ ಮಸೂದೆಯನ್ನು ಕಾಯ್ದೆ ಮಾಡಿ ಜಾರಿಗೆ ತರಬೇಕು.

☐ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತರಾಗಿ ಬಂದ ಮಹಿಳೆಯರಿಗೆ ಸ್ವ ಸಾಮರ್ಥ್ಯ ಬೆಳೆಸಿಕೊಳ್ಳಲು, ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ತರಬೇತಿ ಸಮರ್ಪಕವಾಗಿ ನಡೆಯಬೇಕು.

☐ ಎಲ್ಲ ನೀತಿ ನಿರೂಪಕ ಮತ್ತು ನಿರ್ಣಾಯಕ ಸಂಸ್ಥೆಗಳಲ್ಲಿ ಮಹಿಳೆಯರಿಗೆ 50% ಸ್ಥಾನಗಳನ್ನು ಮೀಸಲಿಡಲು ಅಗತ್ಯ ಕಾನೂನನ್ನು ರೂಪಿಸಬೇಕು.

☐ ಪ್ರತಿಯೊಂದು ಇಲಾಖೆಯಲ್ಲೂ ಕನಿಷ್ಠ 1/3 ಭಾಗದ ಹಣಕಾಸನ್ನು ಮಹಿಳೆಯರಿಗೆ ಮೀಸಲಿಡಬೇಕು. ಎಸ್.ಸಿ ಮತ್ತು ಎಸ್.ಟಿ. ಬುಡಕಟ್ಟು ಮತ್ತು ಅಲ್ಪ ಸಂಖ್ಯಾತರಿಗಾಗಿ ರೂಪಿಸಲಾದ ಯೋಜನೆಗಳಲ್ಲೂ ಮಹಿಳೆಯರಿಗೆ 30% ಅನುದಾನವನ್ನು ಮೀಸಲಿಡಬೇಕು.

ಆಹಾರ ಭದ್ರತೆ

☐ ಆಹಾರ ಭದ್ರತಾ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು.

☐ ವಿಧವೆಯರು, ಒಂಟಿ ಮಹಿಳೆಯರು, ಅಂಗವಿಕಲರು, ಅಸಂಘಟಿತ ವಲಯದ ಕಾರ್ಮಿಕರು ವಲಸೆ ಕಾರ್ಮಿಕರಿಗೆ ಸುಲಭ ರೀತಿಯಲ್ಲಿ ಪಡಿತರ ಚೀಟಿ ಮತ್ತು ಪಡಿತರ ಸಿಗಬೇಕು.

☐ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಕೈ ಬಿಡಬೇಕು.

☐ ಪ್ರತಿ ಮನೆಗೆ 35 ಕೆ.ಜಿ ಆಹಾರ ಧಾನ್ಯ ಸಿಗುವಂತಾಗಬೇಕು.

☐ ಆಧಾರ್ ಗುರುತಿನ ಚೀಟಿಯ ಕಡ್ಡಾಯವನ್ನು ಕೈ ಬಿಡಬೇಕು,

☐ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಸಾರ್ವತ್ರೀಕರಿಸಿ ನೀಡುತ್ತಿರುವ ಬಜೆಟ್‌ನ್ನು ಹೆಚ್ಚಿಸಬೇಕು.

ದುಡಿಮೆಯ ಬೇಡಿಕೆಗಳು

☐ ಸಮಾನ ಕೆಲಸಕ್ಕೆ ಸಮಾನವೇತನದ ಸುಪ್ರೀಂ ಕೋರ್ಟ್ ತೀರ್ಪು ಜಾರಿಯಾಗಬೇಕು.

☐ ಖಾಸಗಿ ಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯ ಮತ್ತು ಮೀಸಲಾತಿಯನ್ನು ಖಾತ್ರಿಗೊಳಿಸಬೇಕು.

☐ ಮನೆಗೆಲಸ, ಗೃಹಾದಾರಿತ ಕೆಲಸ ಮಾಡುವವರಿಗೆ ಕಾನೂನಾತ್ಮಕ ಜೀವನ ಭದ್ರತೆಯನ್ನು ಒದಗಿಸಬೇಕು.

☐ ಅಸಂಘಟಿತ ಕಾರ್ಮಿಕರ ಸಾಮಾಜಿಕ ಸುರಕ್ಷತೆ ಕಾಯ್ದೆ 2008 ನ್ನು ಜಾರಿಗೆ ತರಲೇಬೇಕು ಕನಿಷ್ಠ ವೇತನ 18000 ರೂಗಳನ್ನು ನೀಡಲೇಬೇಕು.

☐ ಮಹಿಳೆಯರೇ ಹೆಚ್ಚು ಕೆಲಸ ಮಾಡುವ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸದ ದಿನಗಳ ಮಿತಿಯನ್ನು ಕೈಬಿಡಬೇಕು, ಕನಿಷ್ಠ ಕೂಲಿಯನ್ನು 600/ ನಿಗದಿಗೊಳಿಸಬೇಕು.

☐ ದೇವದಾಸಿ, ದಲಿತ, ಒಂಟಿ, ಅಂಗವಿಕಲ ಮಹಿಳೆಯರಿಗೆ ರೇಗಾ ಕೆಲಸ ವರ್ಷದುದ್ದಕ್ಕೂ ಕಡ್ಡಾಯವಾಗಿ ಒದಗಿಸಬೇಕು.

☐ ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ಗೌರವಧನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೂ ಅವರ ನಿಗದಿತ ಕೆಲಸದ ಅವಧಿಯ ನಂತರ ರೇಗಾ ಅಡಿ ಕೆಲಸ ಮಾಡಲು ಅವಕಾಶ ಕಲ್ಪಿಸಿ ಆದೇಶ ಹೊರಡಿಸಬೇಕು.

☐ ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೊಳಿಸಬೇಕು.

☐ ಕೆಲಸದ ಸ್ಥಳಗಳಲ್ಲಿ ಶೌಚಾಲಯ, ವಿಶ್ರಾಂತಿ ಕೊಠಡಿ, ಶಿಶುಪಾಲನಾ ಕೇಂದ್ರಗಳನ್ನು ಕಡ್ಡಾಯಗೊಳಿಸಬೇಕು.

☐ ಲಿಂಗತ್ವ ಅಲ್ಪ ಸಂಖ್ಯಾತರ ಸಮಸ್ಯೆಗಳ ಪರಿಹಾರದ ಬಗ್ಗೆ ಗಮನ ಹರಿಸಬೇಕು. 2017 ರ ರಾಜ್ಯ ಲಿಂಗತ್ವ ಅಲ್ಪಸಂಖ್ಯಾತ ನೀತಿಯನ್ನು ಜಾರಿ ಮಾಡಬೇಕೆನ್ನುವ ಆ ಸಮುದಾಯದ ಬೇಡಿಕೆಯನ್ನು ಮಾನ್ಯ ಮಾಡಬೇಕು.

ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳು

☐ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳನ್ನು ಆದ್ಯತಾ ವಲಯವೆಂದು ಪರಿಗಣಿಸಿ ಅವರಿಗೆ ವಾರ್ಷಿಕ 4% ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳು ದೊರೆಯುವಂತಾಗಬೇಕು. ಅವರಿಗೆ ಸ್ವ ಉದ್ಯೋಗ ತರಬೇತಿಗಳನ್ನು ನೀಡಿ ಅವರು ಉತ್ಪಾದಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಬೇಕು.

☐ ಯಾವುದೇ ತಾರತಮ್ಯವಿಲ್ಲದೇ ಎಲ್ಲ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿಗೆ ಸುತ್ತು ನಿಧಿ ಸಬ್ಸಿಡಿ ನೀಡಬೇಕು.

☐ ಪ್ರತಿ ಹಳ್ಳಿಯಲ್ಲಿಯೂ ಮಹಿಳೆಯರ ಸಭೆ, ತರಬೇತಿಗಳಿಗೆ ಲಭ್ಯವಾಗುವಂತೆ ಮಹಿಳಾ ಭವನ ಕಟ್ಟಿಸಬೇಕು.

☐ ಈ ವಿಭಾಗವನ್ನು ಬಲಪಡಿಸಿ ಪರಿಣಾಮಕಾರಿಯಾಗಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪ್ರತ್ಯೇಕ ಸಚಿವಾಲಯವನ್ನು ರಚಿಸಬೇಕು.

☐ ಖಾಸಗಿ ಕಿರುಸಾಲ ನೀಡುವ ಸಂಸ್ಥೆಗಳು ಮತ್ತು ಅವರು ವಿಧಿಸುವ ದುಬಾರಿ ಬಡ್ಡಿದರ ನಿಯಂತ್ರಿಸಲು ಕಠಿಣ ಕಾನೂನನ್ನು ಜಾರಿಗೆ ತರಬೇಕು.

ಕೃಷಿ ಮತ್ತು ಗ್ರಾಮೀಣ ವಲಯ-ಆಸ್ತಿ ಹಕ್ಕು:

☐ ರೈತ ಮತ್ತು ಕೃಷಿ ಕೂಲಿಕಾರ ಮಹಿಳೆಯರ ಸಮಸ್ಯೆಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಬೇಕು.

☐ ಡಾ ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯ ಪ್ರಕಾರ ಕೃಷಿ ಉತ್ಪನ್ನಗಳ ಒಟ್ಟು ಉತ್ಪಾದನಾ ವೆಚ್ಚಕ್ಕೆ ಶೇಕಡಾ 50% ಲಾಭಾಂಶವನ್ನು ಸೇರಿಸಿ ನಿಗದಿ ಪಡಿಸಲಾಗುವ ಬೆಂಬಲ ಬೆಲೆ ಖಾತ್ರಿಯಾಗಿ ಸಿಗುವಂತಹ ಕಾಯಿದೆಯನ್ನು ರೂಪಿಸಬೇಕು.

☐ ಎಲ್ಲ ಬಡವರಿಗೆ ಹಿತ್ತಲು ಸಹಿತ ನಿವೇಶನಗಳನ್ನು ಉಚಿತವಾಗಿ ನೀಡಬೇಕು. ಅವುಗಳನ್ನು ಆ ಕುಟುಂಬದ ಮಹಿಳೆಯನ್ನು ಒಳಗೊಂಡಂತಹ ಜಂಟಿ ಹಕ್ಕು ಪತ್ರ ನೀಡಬೇಕು.

ಭೂಮಿ ಮತ್ತು ಆಸ್ತಿ ಒಡೆತನ:

ಇಂದಿಗೂ ಗ್ರಾಮೀಣ ಭಾಗದಲ್ಲಿ ಪುರುಷರ ಸ್ವತಂತ್ರ ಒಡೆತನದಲ್ಲಿ 71% ಭೂಮಿಯ ಒಡೆತನವಿದೆ. ಮಹಿಳೆಯರ ಸ್ವತಂತ್ರ ಹೆಸರಿನಲ್ಲಿ 14% ಮಾತ್ರ ಇದೆ. ವಾಸದ ಮನೆ ಮತ್ತು ಕೃಷಿ ಭೂಮಿಯ ಸಂದರ್ಭದಲ್ಲಿಯೂ ಇದು ಹೆಚ್ಚು ವ್ಯತ್ಯಾಸವಿಲ್ಲ. ಈ ಅಸಮಾನತೆಯನ್ನು ತೊಡೆದು ಹಾಕಲು ಎಲ್ಲ ಆಸ್ತಿಗಳ ಜಂಟಿ ಒಡೆತನವನ್ನು ಕಡ್ಡಾಯ ಮಾಡಬೇಕು.

ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೂ ಹಕ್ಕಿನ ಕಾನೂನು ಇದೆಯಾದರೂ ಗ್ರಾಮೀಣ ಭಾಗದಲ್ಲಿ 13%, ನಗರಗಳಲ್ಲಿ 15% ನಷ್ಟು ಮಹಿಳೆಯರು ಮಾತ್ರ ಈ ಕಾನೂನಿನ ಫಲಾನುಭವಿಗಳು. ಕಾನೂನು ಬಂದರಷ್ಟೇ ಸಾಲದು, ಸಮಾಜದ ಆಲೋಚನಾಕ್ರಮ ಬದಲಿಸಲು ಕಾರ್ಯಕ್ರಮ ರೂಪಿಸಬೇಕು.

ಕೃಷಿ ಕುಸಿತ ವಲಸೆ:

ಕೃಷಿವಲಯ ಕುಸಿಯುತ್ತಿದೆ. ಕಂಗೆಟ್ಟ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕುಟುಂಬಗಳು ನಿರಾಧಾರವಾಗುತ್ತಿವೆ. ಬೆಳೆದ ಬೆಳೆಗೆ ಬೆಂಬಲ ಬೆಲೆ, ಮಾರುಕಟ್ಟೆ ನಿಯಂತ್ರಣಗಳಿಲ್ಲದೇ ವಲಸೆ ಅನಿವಾರ್ಯವಾಗಿದೆ. ವಲಸಿಗ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳೂ ಸಾಮಾನ್ಯವಾಗಿವೆ.

ಜಲಮೂಲ ಸಂರಕ್ಷಣೆ:

ಅನಿಯಮಿತ ಕೊಳವೆ ಬಾವಿಗಳಿಂದಾಗಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿದ್ದು, ಸಿಗುವ ನೀರೂ ಆರೋಗ್ಯಕ್ಕೆ ಮಾರಕವಾಗಿದೆ. ಇದನ್ನು ಸಮರ್ಪಕವಾಗಿ ತಡೆಗಟ್ಟಲು ಪ್ರಾಕೃತಿಕ ನೀರಿನ ಮೂಲಗಳಾದ ಕೆರೆ ಕುಂಟೆಗಳ ಹೂಳೆತ್ತುವ, ಇಂಗು ಗುಂಡಿಗಳನ್ನು ತೋಡುವ, ಜಲ ಸಂಗ್ರಹಣೆಗೆ ಮತ್ತು ಸಾಮಾಜಿಕ ಅರಣ್ಯೀಕರಣಕ್ಕೆ ಒತ್ತು ನೀಡುವ ಕೆಲಸವಾಗಬೇಕು. ಈ ಕೆಲಸಗಳನ್ನು ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನ ಅಡಿಯಲ್ಲಿ ಸ್ಥಳೀಯವಾಗಿ ಉದ್ಯೋಗದ ಅವಕಾಶ ಮತ್ತು ಸಹಜ ಅಂತರ್ಜಲ ವೃದ್ಧಿಗೆ ಅವಕಾಶ ನೀಡುವ ಮೂಲಕ ಹಲವು ಸಮಸ್ಯೆಗಳಿಗೆ ಒಟ್ಟಿಗೇ ಪರಿಹಾರ ಒದಗಿಸುತ್ತದೆ.

ಶಿಕ್ಷಣ-ಆರೋಗ್ಯ ನೈರ್ಮಲ್ಯ :

ಶಿಕ್ಷಣ ಆರೋಗ್ಯ ನೈರ್ಮಲ್ಯಗಳು ಹೆಚ್ಚು ಮಹಿಳೆಯರನ್ನು ಬಾಧಿಸುವ ಸಂಗತಿಗಳಾಗಿದ್ದು ಅವುಗಳನ್ನು ಪರಿಹರಿಸಲು ಗಂಭೀರವಾದ ಗಮನ ನೀಡಬೇಕು.

ಅತಿಥಿ ಅಂಕಣ



ಡಾ. ವಿನಯಾ ಒಕ್ಕುಂದ

ಚೆಲುವಿ ಚೆಲುವರ ನಾಡಿನಲ್ಲಿ

ನಮ್ಮ ಸಂವೇದನೆ ಹಲ್ಲೆಗೀಡಾಗಿದೆ. ನಮ್ಮ ಬಣ್ಣಗಳು ಕಳೆದುಹೋಗಿವೆ. ಲೇಖನಿ ದಿಗ್ಭ್ರಮೆಗೊಂಡಿದೆ. ನುಡಿ ಅಪಹರಣವಾಗಿದೆ. ಸೃಜನಶೀಲತೆ ಬೌದ್ಧಿಕ ಸ್ವಾತಂತ್ರ್ಯವಿಲ್ಲದೇ ಹುಟ್ಟಲಾರದು. ಬೌದ್ಧಿಕ ಸ್ವಾತಂತ್ರ್ಯವೆನ್ನುವುದು ತನ್ನ ಕಾಲದ ಅಪ್ರಿಯ ಸತ್ಯಗಳಿಗೆ ಎದುರಾಗುವ, ದಟ್ಟವಾದ ಅಸಮ್ಮತಿಯನ್ನು ದಾಖಲಿಸುವ ಕ್ರಿಯೆ. ಬರಹಗಾರ – ಕಲಾವಿದ ತನ್ನೆಲ್ಲಾ ದುಗುಡಗಳನ್ನು ಆತಂಕಗಳನ್ನು ಬದಿಗಿಟ್ಟು ವರ್ತಮಾನಕ್ಕೆ ಸಾಕ್ಷೀಪ್ರಜ್ಞೆಯಾಗಬೇಕಾಗುತ್ತದೆ. ಆದರೆ ವರ್ತಮಾನವು ಅರಗಿಸಿಕೊಳ್ಳಲಾರದಷ್ಟು ವಿದ್ರೋಹಗಳಿಂದ ತುಂಬಿ ವಿಕಾರವಾದಾಗ ಅಭಿವ್ಯಕ್ತಿ ದಿಕ್ಕೆಡುತ್ತದೆ.

"ಇಂದು ಪೀರ್‌ಭಾಷ್ ಮಾಮಾನ ಬರ್ತಡೇ ಅಮ್ಮಾ" ಅಂದಳು ಮಗಳು. ಹೂಂ ಅಂದೆ. ಹುಟ್ಟಲೇ ಬೇಕಲ್ಲ ಎಲ್ಲರೂ ಒಂದಲ್ಲ ಒಂದು ದಿನ ಎಂಬ ಅನ್ಯಮನಸ್ಕತೆಯಲ್ಲಿ. ಒಂದು ಕವಿತೆ ಹಾಕಿದಾರೆ ನೋಡು ಎಂದು ಕೊಟ್ಟಳು. ಓದಿದೆ. ವಿಷಾದ ಕಲಕಿತು. ಮನಸ್ಸೆಲ್ಲ ಒದ್ದೆಯಾದಂತೆ. ಕೆಟ್ಟ ವ್ಯಂಗ್ಯದಲ್ಲಿ, ಇದರಾಚೆ ಮತ್ತೆ ಪದಗಳಿಲ್ಲ ಎಂಬಷ್ಟು ವ್ಯಂಗ್ಯದಲ್ಲಿ ಪದ ಪೋಣಿಸಿಟ್ಟ ಹಾಗಿತ್ತು. "ಮತ್ತೆ..... ಬದುಕಬೇಕಲ್ಲ ನಾವೂ.... ಹೀಗಾದರೂ ಉಪಶಮನ ಮಾಡಿಕೊಂಡು." ಎಂದು ಅಡಿಟಿಪ್ಪಣಿ ಇದೆಯೇ ಎಂದು ಹುಡುಕಿದೆ.

ಅಕ್ಕ ಸೀತಾ,
ನಾನೂ ನಿನ್ನಂತೆ ಶಂಕಿತ.
ರಾಮರಾಜ್ಯದ ರಾಜಧರ್ಮ
ನಮ್ಮನ್ನು ನಡುಬೀದಿಯಲ್ಲಿ ಸುಡುತ್ತಿದೆ.

ಎಂದು ನಮ್ಮ ಕಾಲದ ಅಪ್ಪಟ ರಾಜಕೀಯ ಕಾವ್ಯವನ್ನು ಬರೆದ ಯಶಸ್ವಿ ಕವಿ ಪೀರ್‌ಭಾಷಾ. ಓಹ್! ಸುಡು ಸತ್ಯದ ಸಂಕಟವನ್ನು ಆರಿಸಿ ತಣಿಸಿ ಬರೆವಷ್ಟು ವ್ಯವಧಾನವನ್ನು ನಮ್ಮ ಕಾಲ ಕೊಡುತ್ತಿಲ್ಲವಲ್ಲ ಅನ್ನಿಸಿತು. ಎಷ್ಟೋ ದಿನಗಳಿಂದ ಕಥೆಯ ಬೀಜವೊಂದು ನನ್ನೊಳಗೆ ಉರುಳಾಡುತ್ತ ಕಳೆದೇ ಹೋದಂತ ದಿಗಿಲು. ಇನ್ನು ನಾನು ಕಥೆ ಬರೆಯಲಾರೆನೇ ಎಂಬ ಅಧೀರತೆ. ಇರಬಹುದು ಪುಣ್ಯವಂತರು. ಲೋಕಕ್ಕೆ ತಲೆಹಾಕದೇ ಸೃಜನಶೀಲ ಕಾಳಜಿಯಲ್ಲಿ ಬರೆಯುತ್ತ ಅನುವಾದಿಸುತ್ತ ಇರುವವರು. ಅಂತಹ ನಿಷ್ಠುರತೆ ಸಾಧ್ಯವಾಗದವರಿಗೆ ತಳಮಳದ ಕಾಲ. ನಮ್ಮ ಸಂವೇದನೆ ಹಲ್ಲೆಗೀಡಾಗಿದೆ. ನಮ್ಮ ಬಣ್ಣಗಳು ಕಳೆದುಹೋಗಿವೆ. ಲೇಖನಿ ದಿಗ್ಭ್ರಮೆಗೊಂಡಿದೆ. ನುಡಿ ಅಪಹರಣವಾಗಿದೆ. ಸೃಜನಶೀಲತೆ ಬೌದ್ಧಿಕ ಸ್ವಾತಂತ್ರ್ಯವಿಲ್ಲದೇ ಹುಟ್ಟಲಾರದು. ಬೌದ್ಧಿಕ ಸ್ವಾತಂತ್ರ್ಯವೆನ್ನುವುದು ತನ್ನ ಕಾಲದ ಅಪ್ರಿಯ ಸತ್ಯಗಳಿಗೆ ಎದುರಾಗುವ, ದಟ್ಟವಾದ ಅಸಮ್ಮತಿಯನ್ನು ದಾಖಲಿಸುವ ಕ್ರಿಯೆ. ಬರಹಗಾರ – ಕಲಾವಿದ ತನ್ನೆಲ್ಲಾ ದುಗುಡಗಳನ್ನು ಆತಂಕಗಳನ್ನುಬದಿಗಿಟ್ಟು ವರ್ತಮಾನಕ್ಕೆ ಸಾಕ್ಷೀಪ್ರಜ್ಞೆಯಾಗಬೇಕಾಗುತ್ತದೆ. ಆದರೆ ವರ್ತಮಾನವು ಅರಗಿಸಿಕೊಳ್ಳಲಾರದಷ್ಟು ವಿದ್ರೋಹಗಳಿಂದ ತುಂಬಿ ವಿಕಾರವಾದಾಗ ಅಭಿವ್ಯಕ್ತಿ ದಿಕ್ಕೆಡುತ್ತದೆ. ಬಹುಶಃ ಶಿಶು ಕಂಡ ಕೆಟ್ಟ ಕನಸಿನಂತೆ. ವಿವರಿಸಲೂ ಆಗದು, ಮರೆತು ನಿರ್ಲಕ್ಷಿಸಲೂ ಆಗದು.

ಸದ್ಯದ ಚುನಾವಣೆಯಲ್ಲಿ ಮಾತು ನಷೆ ಏರಿದೆ. ಮಾತು ಬಂಡವಾಳವಾಗಿದೆ. ಹೃದಯದಾಳದಿಂದಲೇ ಕಪಟ ಮಾತುಗಳು ವಿಜೃಂಭಿಸುತ್ತಿವೆ. ಎಲ್ಲ ಬಗೆಯ ಅಸಮಾನತೆಯೂ ಕಟ್ಟಕಡೆಯ ಹಂತವನ್ನು ತಲುಪಿ, ಜನಾಂಗೀಯ ವಿಧ್ವಂಸಕತೆ ನಡೆಯುತ್ತಿರುವ ದೇಶದಲ್ಲಿ ಬರೀ ಮಾತಿನ ವರಸೆಯಿಂದಲೇ ಅಧಿಕಾರ ಹಿಡಿಯಬಹುದು ಎಂಬ ನಿರ್ಧಾರಕ್ಕೆ ರಾಜಕಾರಣಿಗಳು ಬಂದು ತಲುಪಿದ್ದಾರೆ. ಅದರಲ್ಲೂ ಮಾತಿನ ಅಸ್ತ್ರದಿಂದಲೇ ರಾಜ್ಯ ರಾಜ್ಯಗಳಲ್ಲಿ ಅಧಿಕಾರ ಹಿಡಿಯುತ್ತ ನಡೆಯುತ್ತಿರುವ ಮೋದಿ ಮತ್ತು ಅಮಿತ್‌ಶಾ ಜೋಡಿಗೆ ಬಾಯಿ ಪಳಗಿದೆ. ಪ್ರಾದೇಶಿಕ ಭಾಷೆಯ ಕೆಲವು ಸಾಲುಗಳು (ಉಚ್ಚಾರ ಎಕ್ಕುಟ್ಟಿ ಹೋಗಲಿ ಬೇಕಾದರೆ), ಆ ಪ್ರದೇಶದ ಸಾಧಕರ ನೆನಪು, ಮತೀಯ ಉನ್ಮಾದದ ಭಾವನಾತ್ಮಕ ಉವಾಚಗಳು, ನಿದರ್ಶನಗಳು (ಘಟನೆ ನಿಜವಿರಲಿ ಸುಳ್ಳಿರಲಿ, ಕೇಸು ಸಿಬಿಐನಲ್ಲಿರಲಿ, ಸಿಐಟಿನಲ್ಲಿರಲಿ ಗಣನೆಗೇ ಇಲ್ಲದಂತ ಕೂಗಾಟ), ತಮ್ಮನ್ನು ತಾವು ನಮ್ಮ ಸೇವಕನೆಂದು ಬಿಂಬಿಸುವ ನಾಟಕ, ಎದುರು ಪಕ್ಷದವರ ಮೇಲೆ ಅಸಭ್ಯ ಅಶ್ಲೀಲ ಮಾತುಗಳು – ಇಷ್ಟಿದ್ದರೆ ಯಶಸ್ವಿ ಚುನಾವಣಾ ಭಾಷಣದ ಪ್ಯಾಕೇಜ್ ಸಿದ್ಧವಾದಂತೆ. ಕವಿಗಡಚಿಕ್ಕುವ ಚಪ್ಪಾಳೆಗಳಿಗೆ ಕೊರತೆಯಿಲ್ಲ. ಈ ಚಪ್ಪಾಳೆಗಳು ಮತಗಳಾಗುತ್ತವೆ ಎನ್ನುವುದು ಪಳಗಿದ ರಾಜಕಾರಣಿಗಳಿಗೆ ಗೊತ್ತಿದೆ.

ಇಷ್ಟು ಸಾಲದೆಂಬಂತೆ ಇಂತಹ ಭಾಷಣಗಳನ್ನು ಮರು ಮರು ಪ್ರಸಾರ ಮಾಡುವ ಮಾರಿಕೊಂಡ ಚೆನಲ್‌ಗಳು. ಇತ್ತೀಚಿನ ಪ್ರಧಾನಿಯವರ ಉಡುಪಿಯ ಭಾಷಣವನ್ನು ಗಮನಿಸಿ. ಮಾತುಗಾರಿಕೆಯೇ ಮತಬ್ಯಾಂಕ್ ಎಂಬ ಅಹಂಕಾರ ತಲೆಗೇರಿದೆ! ತಾನು ಭಾರತದಂತಹ ಬಲು ದೊಡ್ಡ ಪ್ರಜಾಪ್ರಭುತ್ವ ದೇಶದ ಪ್ರಧಾನ ಮಂತ್ರಿ ಎನ್ನುವುದನ್ನು ಪುಟ್ಟಪೂರ ಮರೆತು ಮಲೆತಿದ್ದಾರೆ. ಮಾತಿನ ಜರ್ಬಿಗೆ ಕನಿಷ್ಠ ನೈತಿಕತೆಯ ಹಂಗೂ ಇರಲಿಲ್ಲ. ರಾಹುಲ್ ಗಾಂಧಿಯವರ ಮೇಲೆ ಮಾಡಿದ ಮಾತಿನ ದಾಳಿ ಗಮನಿಸಿ. – ರಾಹುಲ ಗಾಂಧಿ ಯಾವುದೇ ಭಾಷೆಯಲ್ಲಿ ಮಾತಾಡಲಿ ಹಿಂದಿ, ಇಂಗ್ಲಿಷ್ ಅಥವಾ ಅವನ ತಾಯಿಯ ಮಾತೃಭಾಷೆಯಲ್ಲಿ. ಹದಿನೈದು ನಿಮಿಷ ಕೈಯಲ್ಲಿ ಚೀಟಿ ತೆಗೆದುಕೊಳ್ಳದೇ ಮಾತಾಡಲಿ. ಆ ಮಾತಿನಲ್ಲಿ ಐದು ಸಲವಾದರೂ ವಿಶ್ವೇಶ್ವರಯ್ಯನವರ ಹೆಸರು ತೆಗೆದುಕೊಳ್ಳಲಿ. ಆಗ ಕರ್ನಾಟಕದ ಜನಕ್ಕೆ ತಿಳಿಯುತ್ತದೆ. ಆಪ್ ಕೆ ಬಾತ್ ಮೆ ದಮ್ ಕಿತನಾ ಹೈ ಎಂದು. ಪ್ರಧಾನಿಯ ಘನತೆಯ ಸ್ಥಾನದಲ್ಲಿರುವ ವ್ಯಕ್ತಿ ಅತ್ಯಂತ ಕೀಳು ಮಟ್ಟದ ನಟನೆಯನ್ನು ಮಾಡುತ್ತ ಜನರನ್ನು ರಂಜಿಸುವುದು ಚೀಪ್ ಅನ್ನಿಸುತಿತ್ತು. ಸ್ವತಃ ತಾವು ಉಚ್ಚರಿಸುತ್ತಿರುವ ಕನ್ನಡದಲ್ಲಿ ತಪ್ಪಿರಬಹುದೇ ಎಂಬ ಸಣ್ಣ ಅನುಮಾನವೂ ಆತ್ಮಶಂಕೆಯೂ ಇರಲಿಲ್ಲ, ಧಾರಾಳವಾಗಿ ತಪ್ಪು ಉಚ್ಚರಿಸುವಾಗಲೂ. ಇಂತಹ ನಟನೆಯನ್ನು ಯಾರೇ ಮಾಡಿದರೂ ಅದು ಅಪರಾಧವೇ. ಎಷ್ಟೋ ಸಲ ಕೆಡುಕು ಅದೆಷ್ಟು ದಟ್ಟವಾಗಿ ಆಕ್ರಮಿಸಿಕೊಳ್ಳುತ್ತದೆಂದರೆ ವಿರೋಧದ ಸರಿದಾರಿಗಳೇ ಕಾಣೆಯಾಗುತ್ತದೆ. ಕೆಡುಕು ಮಾದರಿಯಾಗುತ್ತದೆ. ಉಳಿದವರು ತಮ್ಮ ವ್ಯಕ್ತಿತ್ವವನ್ನೇ ಮರೆತು ಅದನ್ನು ಅನುಕರಿಸುವ ದುರಂತ ಉಂಟಾಗುತ್ತದೆ. ಆದರೆ ಇಂತಹ ಅಗ್ನಿದಿವ್ಯಗಳಲ್ಲಿಯೇ ನಿಜವಾದ ಪರ್ಯಾಯದ ತ್ರಾಣ ಮೂಡುವುದು. ಜನರನ್ನು ಮೆಚ್ಚಿಸಲಿಕ್ಕೆಂದು ಎಂದೂ ಆಕರ್ಷಕವಾಗಿ ಮಾತನಾಡಲು ಬಯಸದ ಗಾಂಧೀಜಿ ನೆನಪಾಗುತ್ತಾರೆ. ಹೌದು, ಜನರಿಗೆ ನೈತಿಕ ಭ್ರಷ್ಟತೆ ಒಗ್ಗಿಹೋಗಿದೆ. ಡಿ.ಆರ್ ಹೇಳಿದ್ದರು "ಸಜ್ಜನರಿಗೆ ಸಿಟ್ಟು ಬರುತ್ತಿಲ್ಲ. ರಾಜಕೀಯ ಅಧಿಕಾರದ ಮುಂದೆ ಬಾಲವಾಡಿಸುವ ಪ್ರವೃತ್ತಿ ಬೆಳೆಯುತ್ತಿದೆ. ನಿಜವಾದ ನೈತಿಕ ಕೋಪ ಮತ್ತು ಮಾತಿನ ಅಟ್ಟಹಾಸಗಳ ನಡುವೆ ವ್ಯತ್ಯಾಸ ಕಾಣುವ ಗುಣ ಜನಕ್ಕೆ ಹೊರಟುಹೋಗಿದೆ." ಅಂದಿಗಿಂತಲೂ ಹೆಚ್ಚು ಕೆಟ್ಟದಾದ ಸ್ಥಿತಿ ಈಗಿನದು.


ಒಂದೆರಡೇ ದಶಕಗಳ ಹಿಂದೆ ಚುನಾವಣೆಯೆಂದರೆ ರಾಜಕೀಯ ಪಕ್ಷಗಳ ಪ್ರಣಾಳಿಕೆ. ಅಲ್ಲಿರುವ ಜನಪರ ಯೋಜನೆಗಳು., ಆ ಯೋಜನೆಗಳನ್ನು ಈಡೇರಿಸಲಾಯಿತೇ ಇಲ್ಲವೇ? ಮಹಿಳಾ ಮೀಸಲಾತಿಯ ಸ್ಥಿತಿ ಏನು? ಭ್ರಷ್ಟರಿಗೆ ಸೀಟು ಕೊಡಲಾಗಿದೆಯೇ? – ಎನ್ನುವುದು ಚರ್ಚೆಯ ವಿಷಯವಾಗಿರುತ್ತಿತ್ತು. ರಾಜಕೀಯ ನಡೆ ಇಷ್ಟೊಂದು ಅಧಃಪತನಕ್ಕಿಳಿಯಲು ಕಾರಣ ಮಧ್ಯಮ ವರ್ಗದ ಅವಕಾಶವಾದಿತನ. ನೈತಿಕ ಆದರ್ಶಗಳಿಂದ ಬಂಡವಾಳವಾದ ಸಮುದಾಯಗಳನ್ನು ಬಲು ದೂರ ತಂದಿದೆ. ಪರಿಣಾಮವಾಗಿ ಸ್ವಾರ್ಥ ಮತ್ತು ಸರ್ವಾಧಿಕಾರವನ್ನು ಓಲೈಸುವ ಪ್ರವೃತ್ತಿ ಬೆಳೆಯುತ್ತಿದೆ. ಹಾಗಾಗಿಯೇ ಯಾರು ಬೇಕಾದರೂ ಯಾರನ್ನು ಬೇಕಾದರೂ ಏನು ಬೇಕಾದರೂ ಅಂದಾಡುವ ಅರಾಜಕತೆ ಬೆಳೆದಿದೆ. ಪ್ರಶ್ನಿಸಿದರೆ ಬಾಯಿ ಮುಚ್ಚಿಸುವ ಠೇಂಕಾರ, ವ್ಯಕ್ತಿಗತ ನಿಂದನೆಗೆ ತೊಡಗುವ ಪ್ರವೃತ್ತಿ ಕಾಣುತ್ತಿದೆ. 'ಗೊಬೆಲ್ಸನ ಸತ್ಯದಂತೆ' ಹೇಳಿದ್ದನ್ನೇ ಹೇಳುತ್ತ ಹೋಗುವ ಮಾತಿನ ಆರ್ಭಟ ಇದು. ಕಥುವಾದ ಬಾಲಕಿಯ ಮೇಲೆ ನಡೆದ ಜನಾಂಗೀಯ ದ್ವೇಷದ ಅತ್ಯಾಚಾರವನ್ನು, ಅಲ್ಲಿಯ ನಾಯಕರು 'ಅದೊಂದು ಸಣ್ಣ ಸಂಗತಿ ದೊಡ್ಡದು ಮಾಡುವ ಅಗತ್ಯವಿಲ್ಲ' ಎಂದು ನಿರ್ಲಜ್ಜೆಯಿಂದ ಹೇಳುತ್ತಾರೆ. ಅದೇ ಪಕ್ಷದ ನಾಯಕಿ ನಿರ್ಮಲಾ ಸೀತಾರಾಮನ್ (ದೇಶದ ರಕ್ಷಣಾ ಮಂತ್ರಿ), ಬೆಂಗಳೂರಿಗೆ ಬಂದು, ಮಹಿಳೆಯರ ಮತಗಳನ್ನು ಸೆಳೆವ ಕಾರ್ಯಕ್ರಮದಲ್ಲಿ "ಮಹಿಳೆಯರಿಗೆ ರಾಜ್ಯದಲ್ಲಿ ರಕ್ಷಣೆಯಿಲ್ಲ" ಎಂದು ಮಾತನಾಡುತ್ತಾರೆ. ಹೆಣ್ಣುಗಳ ಘನತೆಯ ಬಗ್ಗೆ ಪ್ರಸ್ತಾಪಿಸುತ್ತಾರೆ. ತಮ್ಮ ಪಕ್ಷದ ನಾಯಕರುಗಳು ಸಂಸತ್ತಿನ ಒಳ–ಹೊರಗೆ ಹೆಣ್ಣುಗಳ ವಿಷಯದಲ್ಲಿ ನಡೆದುಕೊಂಡ ರೀತಿ ನೆನಪಾಗುವುದಿಲ್ಲ. ಚಪ್ಪಾಳೆಗೆ ಸಿದ್ಧವಾಗಿ ಬಂದವರಿಗೂ ಬೇಕಿರುವುದಿಲ್ಲ.

ಹೌದು, ಇಲ್ಲೀಗ ಏನು ಬೇಕಾದರೂ ನಡೆಯಬಹುದು, ನಡೆಯುತ್ತಿದೆ. ಸ್ವಂತ ಸುಖದ ಆಮೋದದಲ್ಲಿ ಮುಳುಗಿರುವ ಮಧ್ಯಮವರ್ಗಕ್ಕೆ ಇದು ಕಾಣುತ್ತಿಲ್ಲ, ಕೇಳುತ್ತಿಲ್ಲ. ಪ್ರಜ್ಞಾವಂತರ ರಾಜ್ಯದಲ್ಲಿ ವಿಚಾರವಾದಿಗಳ ಹತ್ಯೆಯಾಯಿತು. ಅದಕ್ಕೆ ಸಂಭ್ರಮಾಚರಣೆಯೂ ಆಯಿತು. 'ಖೂನ್ ಸೆ ತಿಲಕ್ ಕರೇಂಗೆ, ಗೋಲಿಯೋಸೆ ಆರತಿ' ಎಂದೆಲ್ಲ ಪ್ರಧಾನಿಗಳು ಫಾಲೋ ಮಾಡುತ್ತಿರುವವರಿಂದ ಟ್ವೀಟ್‌ಗಳು ನಡೆದವು. ಪ್ರಶ್ನಿಸಿದವರನ್ನು 'ಕ್ರಾಂತಿಕಾರಿಗಳು' ಎಂದು ಗದರಿಸಲಾಯಿತು. ಸಮಾಜ ವಿಕಾರವಾಗುತ್ತಿದೆ. ವಿಕಾರವಾದ ಸಮಾಜದಲ್ಲಿ ಸುಂದರತೆಯೇ ಅರ್ಥ ಕಳೆದುಕೊಳ್ಳುತ್ತದೆ. "ಜನ ಅವಿವೇಕಿ ಪತ್ರಿಕೆಗಳ ಬುಡುಬುಡಿಕೆಗೆ ತಕ್ಕಂತೆ ಅಂತರ್ಲಾಗ ಹಾಕುವ ಕೋತಿಗಳಾಗೋದನ್ನು ಬಿಟ್ಟು ವಾಸ್ತವವನ್ನು ಸ್ವಚ್ಛ ಕಣ್ಣುಗಳಿಂದ ನೋಡುವುದನ್ನು ಕಲಿತುಕೊಳ್ಳಬೇಕಿದೆ." ಎಂದಿದ್ದರು ತೇಜಸ್ವಿ. ಇದು ಮಾತಿನ ಆರ್ಭಟದ ಕಾಲವಷ್ಟೇ ಅಲ್ಲ. ಸಂವಿಧಾನ ಬದಲಿಸುವ ಮಾತಿಗಿಂತ ಮುಂಚೆ, ಪ್ರಜಾತಂತ್ರವ್ಯವಸ್ಥೆಯ ಸಂಸತ್ತಿಗೆ ಪರ್ಯಾಯವೆಂಬಂತೆ ಉಡುಪಿಯಲ್ಲಿ ಧರ್ಮ ಸಂಸತ್ತು ನಡೆದಿತ್ತು ಎಂಬುದನ್ನು ಮರೆಯದಿರೋಣ.

ಇಂಥ ಕಾಲದಲ್ಲಿ ಬರಹಗಾರರು ಏನು ಮಾಡಬಹುದು? ಯಾರೋ ಕತ್ತಿನ ಮೇಲೆ ಕೂತಂತಹ ಭಾರದ ದಿನಗಳಿವು. ಇದನ್ನು ಉದ್ದೇಶ ಪೂರ್ವಕವಾಗಿ ನಿರ್ಲಕ್ಷಿಸುತ್ತಿರುವ ಮಧ್ಯಮವರ್ಗ ಚರಿತ್ರೆಯಲ್ಲಿ ಆರೋಪಿಯ ಸ್ಥಾನವನ್ನು ಪಡೆಯಲಿದೆ. ಕವಿ ಎಚ್. ಎಸ್. ಶಿವಪ್ರಕಾಶ್ ಬರೆಯುತ್ತಾರೆ

ಕಣ್ಣು ಮೂಗು ಕೈಯಿ ಕಾಲು
ಬಾತುಕೊಂಡರೂ ಇನ್ನೂ ಇವೆ.
ಪ್ರಾಣ ಮಾತ್ರ ಕಾಣದಾಗಿದೆ
ಜೀವ ಸೊಡರು ಆರಿಹೋಗಿದೆ
ಇಂತ ಚೆಲುವಿಚೆಲುವರಿಂದ
ಇಂದು ನೆಲವೇ ತುಂಬಿಹೋಗಿದೆ.

ಕಾವ್ಯಮೀಮಾಂಸೆಯ ಮಾನದಂಡಗಳು ದಿಕ್ಕಾಪಾಲಾಗುವಂತೆ ಬರೆವ ಪ್ರತಿರೋಧದ ಹೊರತು ಇನ್ನೇನು ಮಾಡಬಹುದು? ಇದು ಯುದ್ಧದ ಕಾಲ. ಜೆರಿಮಿ ಹೇಳುತ್ತಾರೆ "ಯಾವುದು ಅಪರಾಧ, ಯಾವುದು ಅತಿಕ್ರಮಣ, ಯಾವುದು ಜೀವನ ಮೌಲ್ಯಗಳಿಂದ ಕೂಡಿದ ಬದುಕಿನ ಮೇಲೆ ನಡೆಯುತ್ತಿರುವ ಯುದ್ಧ. ಎಂದು ಗುರುತಿಸಲು ಆಗದಿರುವುದು ಮೂರನೇ ಮಹಾಯುದ್ಧಕ್ಕಿಂತ ಭೀಕರ." ●



ತಾಯಿ ಮತ್ತು ಮಕ್ಕಳ ಮರಣದ ಪ್ರಮಾಣವನ್ನು ತಗ್ಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಗ್ರಾಮೀಣ ಮತ್ತು ತಾಲೂಕು ಕೇಂದ್ರಗಳಲ್ಲಿ ಸುಸಜ್ಜಿತ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಬೇಕು. ಮಾನಸಿಕ ಸಮಸ್ಯೆಗಳಿಗೂ ಸೇರಿದಂತೆ ಚಿಕಿತ್ಸೆ, ಸಮಾಧಾನ ನೀಡುವ ಸೂಕ್ತ ಸೌಲಭ್ಯಗಳನ್ನು ಒದಗಿಸಬೇಕು.

ರಾಜ್ಯದ ಎಲ್ಲ ಜನತೆಗೆ ಉಚಿತ ಶುದ್ಧ ಕುಡಿಯುವ ನೀರು ಸಿಗಬೇಕು. ಖಾಸಗಿ ನೀರಿನ ಜಾಲದಿಂದ ಜನತೆಯನ್ನು ರಕ್ಷಿಸಬೇಕು.

ಸಂವಿಧಾನದತ್ತ ಹಕ್ಕುಗಳ ರಕ್ಷಣೆ:

ಸಂವಿಧಾನದತ್ತ ಹಕ್ಕುಗಳ ಮೇಲೆ ತೀವ್ರ ಧಾಳಿ ನಡೆಯುತ್ತಿದ್ದು ಇದರ ನೇರ ದುಷ್ಪರಿಣಾಮ ಮಹಿಳೆಯರ ಮೇಲೆ ಆಗುತ್ತಿದೆ. ಆಯ್ಕೆಯಾಗಿ ಬಂದ ಪ್ರತಿಯೊಬ್ಬ ಜನ ಪ್ರತಿನಿಧಿ ಮತ್ತು ಸರಕಾರ ಸಂವಿಧಾನವನ್ನು ಗೌರವಿಸಬೇಕು ಮತ್ತು ಅದರ ರಕ್ಷಣೆಗೆ ಬದ್ಧರಾಗಬೇಕು.

ಕೋಮು, ಧರ್ಮದ್ವೇಷ ಬೆಳೆಸುವುದು ಸಂವಿಧಾನಕ್ಕೆ ಎಸಗುವ ಅಪಚಾರವೆಂದು ಪರಿಗಣಿಸಿ ಅವುಗಳ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು. ಅಂಥವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಮತದಾನ ನಮ್ಮ ಹಕ್ಕು ಮತ್ತು ಕರ್ತವ್ಯ. ಅದಕ್ಕೆ ಚ್ಯುತಿಬಾರದಂತೆ ಪ್ರತಿಯೊಬ್ಬರೂ ನಡೆದುಕೊಳ್ಳಬೇಕು. ಮತ ಮಾರುವ ಅಥವಾ ಕೊಳ್ಳುವ ವಸ್ತುವಲ್ಲ ಎಂಬುದನ್ನು ಮತ ಕೊಡುವವರು ಮತ ಕೇಳುವವರು ಅರ್ಥ ಮಾಡಿಕೊಳ್ಳಬೇಕು. ●



22ನೇ ಸಿಪಿಐ(ಎಂ) ಮಹಾಧಿವೇಶನ ನಿರ್ಣಯ

ಮಾರ್ಕ್ಸ್ ಬಂಡವಾಳಶಾಹಿ ಯುಗದಲ್ಲಿ ಕಾರ್ಮಿಕ ವರ್ಗದ ಮೊದಲ ಚಿಂತಕ, ಮತ್ತು ಫ್ರೆಡ್ರಿಕ್ ಏಂಗೆಲ್ಸ್ ಜತೆಗೆ, ಕಾರ್ಮಿಕರ ಪರಿಸ್ಥಿತಿ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡಿದ ಮೊದಲಿಗ ಕೂಡಾ. "ತತ್ವಜ್ಞಾನಿಗಳು ಈ ವರೆಗೆ ಜಗತ್ತಿನ ಬಗ್ಗೆ ವಿವಿಧ ರೀತಿಯ ವ್ಯಾಖ್ಯಾನಗಳನ್ನು ನೀಡಿದ್ದಾರಷ್ಟೇ, ಆದರೆ ನಿಜವಾಗಿಯೂ ಜಗತ್ತನ್ನು ಬದಲಾಯಿಸಬೇಕಾಗಿದೆ" ಎಂದು ಬರೆದು, ಸಿದ್ಧಾಂತ ಮತ್ತು ಆಚರಣೆಗಳ ನಡುವೆ ಇರುವ ಸಂಬಂಧಗಳ ಬಗೆಗಿನ ನಮ್ಮ ತಿಳುವಳಿಕೆಯನ್ನು ಪುನರ್-ನಿರ್ವಚನೆಗೆ ಒಳಪಡಿಸಿದ ತತ್ವಜ್ಞಾನಿ. ಅವರ ಕಾಲದ ಮತ್ತು ಆನಂತರದ ಎಲ್ಲ ಅನುಭವಗಳು ಮತ್ತು ಅಧ್ಯಯನಗಳಿಂದ ವಿಮರ್ಶಾತ್ಮಕವಾಗಿ ಸರಿಯಾದ ಪಾಠಗಳನ್ನು ಕಲಿತು, ಕಾರ್ಲ್ ಮಾರ್ಕ್ಸ್ ಮತ್ತು ಅವರ ಕ್ರಾಂತಿಕಾರಿ ಸಿದ್ಧಾಂತದ ನಿಜವಾದ ವಾರಸುದಾರರಾಗಿ, ನಮ್ಮ ಮುಂದಿನ ಕಾರ್ಯಸೂಚಿಯನ್ನು ರೂಪಿಸಿಕೊಳ್ಳಬೇಕಾಗಿದೆ ಎಂದಿರುವ ಸಿಪಿಐ(ಎಂ) ನ 22ನೇ ಮಹಾಧಿವೇಶನ ಕಾರ್ಲ್ ಮಾರ್ಕ್ಸ್ ಅವರ ದ್ವಿಶತಮಾನೋತ್ಸವದ ಆಚರಣೆಯ ಭಾಗವಾಗಿ, ಪ್ರತಿಯೊಂದು ಪಕ್ಷದ ಘಟಕ, ಎಲ್ಲಾ ಪಕ್ಷದ ಸದಸ್ಯರು ಮತ್ತು ಬೆಂಬಲಿಗರಿಗೆ ವೈವಿಧ್ಯಮಯ ಚಟುವಟಿಕೆಗಳನ್ನು ಸಂಘಟಿಸಬೇಕು ಎಂದು ಕರೆ ನೀಡಿದೆ. ಅದರ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ.

ಮಾರ್ಕ್ಸ್ ದ್ವಿಶತಮಾನೋತ್ಸವ ವರ್ಷ ಆಚರಿಸಿ

ಮೇ 5, 2018 ರಿಂದ ಮೇ 5, 2019ವರೆಗಿನ ಒಂದು ವರ್ಷದ ಅವಧಿಯನ್ನು ಮಾರ್ಕ್ಸ್ ಹುಟ್ಟುಹಬ್ಬದ ದ್ವಿ-ಶತಮಾನೋತ್ಸವ ವರ್ಷವಾಗಿ ತಕ್ಕ ರೀತಿಯಲ್ಲಿ ಆಚರಿಸಬೇಕೆಂದು ಸಿಪಿಐ(ಎಂ) ಪ್ರತಿಯೊಂದು ಪಕ್ಷದ ಘಟಕ, ಎಲ್ಲಾ ಪಕ್ಷದ ಸದಸ್ಯರು ಮತ್ತು ಬೆಂಬಲಿಗರಿಗೆ ಕರೆ ನೀಡುತ್ತದೆ.

ಕಾರ್ಲ್ ಮಾರ್ಕ್ಸ್ (ಮೆ 5, 1818 – ಮಾರ್ಚ್ 14, 1883) ಯೆಹೂದಿ ವಕೀಲರ ಕುಟುಂಬದಲ್ಲಿ ಹುಟ್ಟಿದ್ದರು. ಅವರ ಮೂಲ ಕ್ರಾಂತಿಕಾರಿಯಾಗೇನೂ ಇರಲಿಲ್ಲ. ಆದರೂ ಜೀವನದ ಕೊನೆಯ ಹೊತ್ತಿಗೆ ಅವರು ಎಲ್ಲಾ ಕಾಲದ ಮಹಾನ್ ಕ್ರಾಂತಿಕಾರಿಯಾಗಿ, ಮನುಕುಲದ ಮತ್ತು ಮಾನವ ಚಿಂತನೆಯ ಇತಿಹಾಸದ ಮೇಲೆ ಅಚ್ಚಳಿಯದ ಗುರುತು ಬಿಟ್ಟು ಹೋಗಿದ್ದಾರೆ. ಅವರ ನಿಧನದ 35 ವರ್ಷಗಳೊಳಗೆ ಒಂದು ಇಡೀ ದೇಶ, ಸೋವಿಯೆಟ್ ಒಕ್ಕೂಟ, ಅವರ ಮನುಕುಲದ ಭವಿಷ್ಯದ ಬಗೆಗಿನ ಕಾಣ್ಕೆಯನ್ನು ತನ್ನದಾಗಿಸಿತು. ಮುಂದಿನ ದಶಕಗಳಲ್ಲಿ ಕೋಟ್ಯಾಂತರ ಜನ ಅವರ ಕಾಣ್ಕೆಯನ್ನು ತಮ್ಮದಾಗಿಸಿಕೊಂಡರು. 1883ರಲ್ಲಿ ಅವರು ನಿಧನ ಹೊಂದಿದಾಗ ಅವರ ಗೋರಿಯ ಬಳಿ ಬರಿಯ 11 ಜನ ಸೇರಿದ್ದರು. ಆದರೆ ಮುಂದಿನ ದಶಕಗಳಲ್ಲಿ ಮೊದಲಿಗೆ ಸಾವಿರಾರು, ಆ ಮೇಲೆ ಬರಬರುತ್ತಾ ಲಕ್ಷಾಂತರ ಕೋಟ್ಯಾಂತರ ಜನ ಹುಟ್ಟಿದ ಮತ್ತು ನಿಧನದ ದಿನದಂದು ಅವರನ್ನು ನೆನಪಿಸಿಕೊಳ್ಳುತ್ತಾರೆ. ಇಂದಿಗೂ ಅದು ಮುಂದುವರೆದಿದೆ.

ಈ ಮಹಾನ್ ಪರಂಪರೆಯ ಮೂಲವೇನು? ಅವರ ಜೀವನ ಮತ್ತು ಕೆಲಸದ ಬಗ್ಗೆ ಇಂದಿಗೂ ಜನತೆ ಏಕೆ ಸಂಭ್ರಮಿಸುತ್ತಾರೆ? ಮಾರ್ಕ್ಸ್ ಬಂಡವಾಳಶಾಹಿ ಯುಗದಲ್ಲಿ ಕಾರ್ಮಿಕ ವರ್ಗದ ಮೊದಲ ಚಿಂತಕ, ಮತ್ತು ಫ್ರೆಡ್ರಿಕ್ ಏಂಗೆಲ್ಸ್ ಜತೆಗೆ, ಅವರ ಪರಿಸ್ಥಿತಿ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡಿದ ಮೊದಲಿಗ ಕೂಡಾ. ಅಂತಹ ಅಧ್ಯಯನ ಮಾಡುತ್ತಾ ಶೋಷಣೆ ಬಂಡವಾಳಶಾಹಿ ಬರುವ ಶತಮಾನಗಳ ಮೊದಲಿನಿಂದಲೂ ಹೇಗೆ ನಡೆಯುತ್ತಿತ್ತು ಮತ್ತು ಅಂದು ಕಾಣುವ ರೂಪದಲ್ಲಿ ಅದು ಹೇಗೆ ಮೂಡಿಬಂತು ಎಂಬುದನ್ನು ಅನಾವರಣಗೊಳಿಸಿದರು. ಶೋಷಣೆಯ ಅಂದಿನ ಸ್ವರೂಪ ಮತ್ತು ಅದರ ಹಿಂದಿನ ವಿಕಾಸವಲ್ಲದೆ, ಅವರ ಅಧ್ಯಯನ ಆ ಶೋಷಣೆಯನ್ನು ಅದನ್ನು ಉಂಟುಮಾಡಿದ ಸನ್ನಿವೇಶವೇ ಹೇಗೆ ಕೊನೆಗಾಣಿಸಬಹುದು ಎಂದು ತೋರಿಸಿಕೊಟ್ಟಿತು. ಮಾರ್ಕ್ಸ್ "11ನೇ ಥೀಸಿಸ್ ಆನ್ ಫ್ಯೂಅರ್‌ಬಾಕ್" ನಲ್ಲಿ "ತತ್ವಜ್ಞಾನಿಗಳು ಈ ವರೆಗೆ ಜಗತ್ತಿನ ಬಗ್ಗೆ ವಿವಿಧ ರೀತಿಯ ವ್ಯಾಖ್ಯಾನಗಳನ್ನು ನೀಡಿದ್ದಾರಷ್ಟೇ, ಆದರೆ ನಿಜವಾಗಿಯೂ ಜಗತ್ತನ್ನು ಬದಲಾಯಿಸಬೇಕಾಗಿದೆ" ಎಂದು ಬರೆದು, ಸಿದ್ಧಾಂತ ಮತ್ತು ಆಚರಣೆಗಳ ನಡುವೆ ಇರುವ ಸಂಬಂಧಗಳ ಬಗೆಗಿನ ನಮ್ಮ ತಿಳುವಳಿಕೆಯನ್ನು ಪುನರ್-ನಿರ್ವಚನೆಗೆ ಒಳಪಡಿಸಿದರು.

ಶೋಷಣೆ ಎಂದರೆ ಸಮಾಜದಲ್ಲಿರುವ ತಪ್ಪು ಮತ್ತು ಅನ್ಯಾಯದ ಪ್ರಶ್ನೆ ಮಾತ್ರವಲ್ಲ. ಅದು ಸಮಾಜದ ವೈಪರೀತ್ಯವಲ್ಲ. ಸಮಾಜದ ಅಸ್ತಿತ್ವದ ರೀತಿಯೇ ಅದರಲಿರುವ್ಲ ಶೋಷಣೆಯ ಸ್ವರೂಪದ ಮೇಲೆ ನೇರವಾಗಿ ಅವಲಂಬಿಸಿದೆ. ಎಲ್ಲಾ ಸಮಾಜಗಳೂ ಶೋಷಕ ಮತ್ತು ಶೋಷಿತ ವರ್ಗಗಳಾಗಿ ವಿಭಜನೆಗೊಂಡಿದ್ದವು, ಮತ್ತು ದಾಖಲೆಗೊಂಡಿರುವ ಎಲ್ಲಾ ಚರಿತ್ರೆ ವರ್ಗಹೋರಾಟಗಳ ಚರಿತ್ರೆಯೇ, ಎಂಬುದು ಮಾರ್ಕ್ಸ್ ನಿಲುವಾಗಿತ್ತು. "ಪ್ರಕೃತಿಯ ಜೀವಸಂಕುಲಗಳ ವಿಕಸನದ ನಿಯಮಗಳನ್ನು ಡಾರ್ವಿನ್ ಕಂಡು ಹಿಡಿದಂತೆ, ಮನುಕುಲದ ಚರಿತ್ರೆಯ ವಿಕಸನದ ನಿಯಮಗಳನ್ನು ಮಾರ್ಕ್ಸ್ ಕಂಡು ಹಿಡಿದರು." ಎಂದು ಜೀವನದುದ್ದಕ್ಕೂ ಅವರ ನಿಕಟ ಸಂಗಾತಿಯಾಗಿದ್ದ ಫ್ರೆಡ್ರಿಕ್ ಏಂಗೆಲ್ಸ್ ಅವರ ಗೋರಿಯ ಬಳಿ ಭಾಷಣದಲ್ಲಿ ಹೇಳಿದರು. ಅಷ್ಟು ಮಾತ್ರವಲ್ಲ, "ಇಂದಿನ ಬಂಡವಾಳಶಾಹಿ ಉತ್ಪಾದನಾ ವಿಧಾನ ಮತ್ತು ಅದು ಸೃಷ್ಟಿಸಿರುವ ಬೂರ್ಜ್ವಾ ಸಮಾಜದ ಚಲನೆಯ ವಿಶಿಷ್ಟ ನಿಯಮಗಳನ್ನೂ ಮಾರ್ಕ್ಸ್ ಕಂಡು ಹಿಡಿದರು. ಹಿಂದಿನ ಎಲ್ಲಾ ಬೂರ್ಜ್ವಾ ಅರ್ಥಶಾಸ್ತ್ರಜ್ಞರು ಮತ್ತು ಅವರ ಸಮಾಜವಾದಿ ಟೀಕಾಕಾರರು ಈ ಸಮಸ್ಯೆಯನ್ನು ಬಗೆಹರಿಸಲು ತಿಣುಕಾಡಿ ವಿಫಲರಾಗಿದ್ದಾಗ, ಮಾರ್ಕ್ಸ್ ಅವರ ಮಿಗುತಾಯ ಮೌಲ್ಯದ ಅನ್ವೇಷಣೆ ಅದನ್ನು ಪರಿಹರಿಸಿತು."

ಅವರ ಕಾಲದಲ್ಲಿ, ಇನ್ನೂ ಒಂದು ಹೊಸ ಸಾಮಾಜಿಕ ವ್ಯವಸ್ಥೆಯಾಗಿ ವಿಕಾಸವಾಗುತ್ತಿದ್ದ ಬಂಡವಾಳಶಾಹಿ, ಅದರ ಜತೆ ಒಂದು ಹೊಸ ವರ್ಗ, ಕಾರ್ಮಿಕ ವರ್ಗವನ್ನು, ಹುಟ್ಟು ಹಾಕುತ್ತಿದ್ದು, ಅದೇ ಬಂಡವಾಳಶಾಹಿಯ ಗೋರಿಯನ್ನು ತೋಡುತ್ತದೆ ಎಂದು ಮಾರ್ಕ್ಸ್ ತಿಳಿಸಿದರು. ಯಾವುದೇ ಮಹಾನ್ ವಿಜ್ಞಾನಿಯಂತೆ, ಮಾರ್ಕ್ಸ್ ಅವರ ಸಮಾಜದ ಅಧ್ಯಯನಕ್ಕೆ ಬೇಕಾದ ಒಂದು – ಗತಿತಾರ್ಕಿಕ ಮತ್ತು ಚಾರಿತ್ರಿಕ ಭೌತವಾದ ಎಂಬ – ಪರಿಕರವನ್ನು ತಾವೇ ತಯಾರಿಸಿಕೊಂಡರು. ಬಂಡವಾಳಶಾಹಿ ವ್ಯವಸ್ಥೆಯ ವಿಧಾನವನ್ನು ಗತಿತಾರ್ಕಿಕ ರೀತಿಯಲ್ಲಿ ವಿಶ್ಲೇಷಿಸಿ ಅದರಲ್ಲಿ ಆಳವಾದ ಹಾಗೂ ಮತ್ತೆ ಮತ್ತೆ ಮರುಕಳಿಸುವ ಆರ್ಥಿಕ ಬಿಕ್ಕಟ್ಟಿನ ಅನಿವಾರ್ಯತೆಯನ್ನು ಅನಾವರಣಗೊಳಿಸಿದರು. ಬಂಡವಾಳಶಾಹಿ ವ್ಯವಸ್ಥೆಯ ಉತ್ಪಾದನಾ ವಿಧಾನದ ಅಸಮರ್ಥನೀಯತೆ ಹೆಚ್ಚೆಚ್ಚು ಢಾಳಾಗಿ ಕಾಣುತ್ತಾ ವ್ಯಾಪಕವಾಗಿ ಗ್ರಹೀತವಾದಾಗ, ಕಾರ್ಮಿಕ ವರ್ಗ ಎಂಬ ಸಾಮಾಜಿಕ ಶಕ್ತಿ ಅದನ್ನು ಕಿತ್ತೆಸೆದು, ಒಂದು ಹೊಸ ವ್ಯವಸ್ಥೆಯಾದ ಸಮಾಜವಾದಿ ವ್ಯವಸ್ಥೆಯನ್ನು ತರುತ್ತದೆ. ಈ ಹಂತ ಬಂದಾಗ, ವರ್ಗ ಸಮಾಜವನ್ನೇ ಮೀರಿ ನಿಲ್ಲುವ ಸಾಧ್ಯತೆಗೆ ರಂಗ ಸಜ್ಜಾಗುತ್ತದೆ, ಎಂದು ಮಾರ್ಕ್ಸ್ ಮತ್ತು ಏಂಗೆಲ್ಸ್ ಅರ್ಥಮಾಡಿಕೊಂಡರು. ಸಮಾಜದಲ್ಲಿ ಅವರು ಕಂಡ ಶೋಷಣೆ ಕೊನೆಗೊಳಿಸುವುದು ಮಾತ್ರವಲ್ಲ, ಒಂದು ಹೊಸ ಸಮಾಜ ವ್ಯವಸ್ಥೆಗೆ ಅಡಿಪಾಯ ಹಾಕುವುದು ಮಾರ್ಕ್ಸ್ ಅವರ ಸ್ಫೂರ್ತಿದಾಯಕ ಕಾಣ್ಕೆಯಾಗಿತ್ತು. ವ್ಯಾಪಕ ಸಮೃದ್ಧಿಯ, ವ್ಯಕ್ತಿಯ ಸಮಗ್ರ ಬೆಳವಣಿಗೆಗೆ ಪೂರ್ಣ ಅವಕಾಶ ನೀಡುವ, ಪ್ರಭುತ್ವ ಕ್ಷೀಣಿಸಿ ಉದುರಿ ಹೋಗುವ, ಒಂದು ಕಮ್ಯುನಿಸ್ಟ್ ಸಮಾಜದ ಸ್ಫೂರ್ತಿದಾಯಕ ಪರಿಕಲ್ಪನೆಯನ್ನು ಮಾರ್ಕ್ಸ್ ಅಭಿವೃದ್ಧಿಪಡಿಸಿದರು.

ಹಲವು ಅಧ್ಯಯನ ಕ್ಷೇತ್ರಗಳಲ್ಲಿ ಮಾರ್ಕ್ಸ್ ಅವರ ಕೃತಿಗಳು, ಹಲವು ಪೀಳಿಗೆಗಳ – ದುಡಿಯುವ ಜನರಿಗೆ, ಸಮಾಜ ಬದಲಾವಣೆಗೆ ಪಣತೊಟ್ಟ ಕ್ರಾಂತಿಕಾರಿ ವಿದ್ಯಾರ್ಥಿಗಳಿಗೆ, ಪ್ರಕೃತಿ ಮತ್ತು ಸಮಾಜವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ಸಮಾಜ ವಿಜ್ಞಾನಿಗಳು ಮತ್ತು ಬುದ್ಧಿಜೀವಿಗಳಿಗೆ – ಸ್ಫೂರ್ತಿಯನ್ನು ಒದಗಿಸಿವೆ. ಆದರೆ, ಸ್ವಯಂ-ಜಾಗೃತಿಯ ಆಧಾರವಾಗಬಲ್ಲ ಅವರ ಸಿದ್ಧಾಂತಗಳು, ನಿಲುಮೆಗಳು ಮತ್ತು ಯೋಚನೆಗಳು, ಕಾರ್ಮಿಕ ವರ್ಗ ಮತ್ತು ಅದರ ಮುಂಚೂಣಿ ಪಕ್ಷಕ್ಕೆ ವಿಶೇಷ ಸ್ಥಾನ ಹೊಂದಿವೆ. ಲೆನಿನ್ ರಂತಹ ಹಲವು ಕ್ರಾಂತಿಕಾರಿ ಚಿಂತಕರು ವಿಸ್ತರಿಸುತ್ತಿರುವ ಮಾರ್ಕ್ಸ್ ಅವರ ಕೃತಿಗಳು ಮತ್ತು ಕೆಲಸ ಒಂದು ಜೀವಂತ ಪರಂಪರೆಯಾಗಿ ಮುಂದುವರೆಯುತ್ತಿದೆ. ಅವರ ಕಾಣ್ಕೆಯಿಂದ ಸ್ಫೂರ್ತಿ ಪಡೆದ ಲಕ್ಷಾಂತರ ಜನರು ಮಾರ್ಕ್ಸ್ ತಯಾರಿಸಿ ಬಳಸಿದ ಪರಿಕರಗಳನ್ನು ತಮ್ಮ ಸುತ್ತಲಿನ ಜಗತ್ತನ್ನು ಅರ್ಥ ಮಾಡಿಕೊಂಡು ಬದಲಾಯಿಸಲು ಬಳಸುತ್ತಾ ಸಹ ಆ ಪರಂಪರೆಯನ್ನು ವಿಸ್ತರಿಸುತ್ತಿದ್ದಾರೆ.

ಅದರಲ್ಲೂ ವಿಶೇಷವಾಗಿ, ಅವರು ಮಾರ್ಕ್ಸ್‌ವಾದ ಎಂದು ಕರೆಯುವ ಕಣ್ಣೋಟಕ್ಕೆ ಬದ್ಧವಾಗಿರುವ ಹಲವು ಪೀಳಿಗೆಗಳ ಕಮ್ಯುನಿಸ್ಟರು, ಎಲ್ಲರೂ ಗೌರವಿಸುವ ಈ ಪರಂಪರೆಗೆ ತಮ್ಮದೇ ಕಾಣಿಕೆ ಕೊಟ್ಟಿದ್ದಾರೆ. ಬಂಡವಾಳ ಸಂಪುಟ 1ರ 150 ವರ್ಷಗಳು, ಕಮ್ಯುನಿಸ್ಟ್ ಪ್ರಣಾಳಿಕೆಯ 170 ವರ್ಷಗಳು, ಮತ್ತು ಮಾರ್ಕ್ಸ್ ಅವರ 200 ವರ್ಷಗಳು-ಇವುಗಳ ಸಂಭ್ರಮಾಚರಣೆ ಮಾಡುತ್ತಿರುವ ನಮಗೆ – ಪ್ಯಾರಿಸ್ ಕಮ್ಯೂನ್, ಮಹಾನ್ ರಶ್ಯನ್ ಕ್ರಾಂತಿ, ಫ್ಯಾಸಿಸಂನ ಪರಾಭವ, ಪೂರ್ವ ಯುರೋಪಿನ ಸಮಾಜವಾದದ ಪ್ರಯೋಗಗಳು, ಚೀನಿ ಮತ್ತು ವಿಯೆಟ್ನಾಂ ಕ್ರಾಂತಿಗಳು, ಕ್ಯೂಬನ್ ಕ್ರಾಂತಿ, ಸಾಮ್ರಾಜ್ಯಶಾಹಿಯ ವಿರುದ್ಧದ ಹಲವು ರಾಷ್ಟ್ರೀಯ ವಿಮೋಚನಾ ಹೋರಾಟಗಳು – ಹೀಗೆ ಶ್ರೀಮಂತ ಪ್ರಾಯೋಗಿಕ ಅನುಭವಗಳು ಇವೆ. ಇದರ ಜತೆಗೆ – ಭೌತವಿಜ್ಞಾನಗಳು, ಸಾಮಾಜಿಕ ವಿಜ್ಞಾನಗಳು, ಮಾನವಿಕ ಶಾಸ್ತ್ರಗಳು, ಸಂಸ್ಕೃತಿ, ಸಾಹಿತ್ಯ, ಮಹಿಳಾವಾದ, ಪರಿಸರ, ಕೃತಕ ಬುದ್ಧಿಮತ್ತೆ –ಮುಂತಾದ ಹಲವು ಜ್ಞಾನದ ಕ್ಷೇತ್ರಗಳನ್ನು ಮಾರ್ಕ್ಸ್‌ವಾದಿ ವಿಧಾನದಿಂದ ವಿಶ್ಲೇಷಿಸುವ ಸೈದ್ಧಾಂತಿಕ ಅಧ್ಯಯನಗಳ ಭಂಡಾರವೇ ಈಗ ನಮ್ಮ ಬಳಿ ಇದೆ.

ಭಾರತದಲ್ಲಿ ನಮ್ಮ ಅನುಭವದಲ್ಲಿ, ಕಮ್ಯುನಿಸ್ಟರು ಮತ್ತು ಇತರ ಹಲವರು ಮಾರ್ಕ್ಸ್ ಅವರ ಚಿಂತನೆಗಳು ಮತ್ತು ಯೋಚನೆಗಳನ್ನು ನಮ್ಮ ಸಮಾಜವನ್ನು ಅರ್ಥ ಮಾಡಿಕೊಳ್ಳಲು ಸೃಜನಶೀಲವಾಗಿ ಬಳಸುವ ಪ್ರಯತ್ನ ನಡೆಸಿದ್ದೇವೆ. ಬೇರೆಡೆಗೆ ಹೋಲಿಸಿದರೆ ಈ ನಿಟ್ಟಿನಲ್ಲಿ ನಮ್ಮ ಸಾಧನೆಗಳು ದೊಡ್ಡವು ಅಲ್ಲದಿರಬಹುದು. ಆದರೂ ಭಾರತದ ಸಮಾಜದ ಬಗ್ಗೆ ಅರಿವನ್ನು ಶ್ರೀಮಂತಗೊಳಿಸಿ, ನಮ್ಮ ದುಡಿಯುವ ಜನಸಮೂಹಗಳನ್ನು ಕ್ರಾಂತಿಕಾರಿ ಚೈತನ್ಯ ಮತ್ತು ಮಾರ್ಕ್ಸ್ ಚಿಂತನೆಗಳ ಸಾರಗಳಿಂದ ಸಬಲೀಕರಿಸಲು ಶ್ರಮಿಸಿದ್ದೇವೆ.

ಇವೆಲ್ಲ ಅನುಭವಗಳು ಮತ್ತು ಅಧ್ಯಯನಗಳಿಂದ ವಿಮರ್ಶಾತ್ಮಕವಾಗಿ ಸರಿಯಾದ ಪಾಠಗಳನ್ನು ಕಲಿತು, ಕಾರ್ಲ್ ಮಾರ್ಕ್ಸ್ ಮತ್ತು ಅವರ ಕ್ರಾಂತಿಕಾರಿ ಸಿದ್ಧಾಂತದ ನಿಜವಾದ ವಾರಸುದಾರರಾಗಿ, ನಮ್ಮ ಮುಂದಿನ ಕಾರ್ಯಸೂಚಿಯನ್ನು ರೂಪಿಸಿಕೊಳ್ಳಬೇಕಾಗಿದೆ.

ಕಾರ್ಲ್ ಮಾರ್ಕ್ಸ್ ಅವರ ದ್ವಿ-ಶತಮಾನೋತ್ಸವದ ಆಚರಣೆಯ ಭಾಗವಾಗಿ, ಸಿಪಿಐ(ಎಂ) ನ 22ನೇ ಮಹಾಧಿವೇಶನ ಪ್ರತಿಯೊಂದು ಪಕ್ಷದ ಘಟಕ, ಎಲ್ಲಾ ಪಕ್ಷದ ಸದಸ್ಯರು ಮತ್ತು ಬೆಂಬಲಿಗರಿಗೆ ವೈವಿಧ್ಯಮಯ ಚಟುವಟಿಕೆಗಳನ್ನು ಸಂಘಟಿಸಬೇಕು ಎಂದು ಕರೆ ನೀಡುತ್ತದೆ. ಅವುಗಳಲ್ಲಿ ಈ ಕೆಳಗಿನವು ಸೇರಿರಬೇಕು :

- ಸಾರ್ವಜನಿಕ ಸ್ಥಳಗಳಲ್ಲಿ ಸಭೆಗಳು, ಮೆರವಣಿಗೆಗಳು, ಮತ್ತಿತರ ಚಟುವಟಿಕೆಗಳು
- ಇಂದಿನ ಜಗತ್ತಿನಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಪ್ರಸ್ತುತತೆ ಬಗ್ಗೆ ವಿಚಾರ ಸಂಕಿರಣಗಳು
- ಕಾರ್ಲ್ ಮಾರ್ಕ್ಸ್ ಅವರ ಜೀವನ ಮತ್ತು ಕೊಡುಗೆಗಳಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು
- ಭಾರತೀಯ ಭಾಷೆಗಳಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಅವರ ಪ್ರಮುಖ ಕೃತಿಗಳ ಪ್ರಕಟಣೆ/ಮರು ಪ್ರಕಟಣೆ
- ಅಧ್ಯಯನ ಕಾರ್ಯಕ್ರಮದ ಭಾಗವಾಗಿ ಆ ಮೇಲಿನ ಪ್ರಮುಖ ಮಾರ್ಕ್ಸ್‌ವಾದಿಗಳ ಪ್ರಮುಖ ಕೃತಿಗಳನ್ನು ಭಾರತೀಯ ಭಾಷೆಗಳಲ್ಲಿ ಪ್ರಕಟಣೆ/ಮರು ಪ್ರಕಟಣೆ
- ಮಾರ್ಕ್ಸ್‌ವಾದ-ಲೆನಿನ್‌ವಾದದ ತಪ್ಪು ನಿರೂಪಣೆಯನ್ನು ಬಯಲುಗೊಳಿಸುವ ಕೃತಿಗಳ ಪ್ರಕಟಣೆ/ಮರು ಪ್ರಕಟಣೆ
- ಮಾರ್ಕ್ಸ್‌ವಾದ-ಲೆನಿನ್‌ವಾದದ ಪ್ರಮುಖ ವಾಗ್ವಾದಗಳ ಸಂಪಾದಿತ ಕೃತಿಗಳ ಪ್ರಕಟಣೆ
- ಮಾರ್ಕ್ಸ್ ನಂತರದ ಕ್ರಾಂತಿಕಾರಿಗಳು ಮತ್ತು ಚಿಂತಕರು ಬೆಳೆಸಿದ ಮಾರ್ಕ್ಸ್‌ವಾದಿ ಚಿಂತನೆಯ ಶ್ರೀಮಂತ ಪರಂಪರೆಯನ್ನು ಜನತೆಗೆ, ಅದರಲ್ಲೂ ಯುವಜನತೆಗೆ ಪರಿಚಯ ಮಾಡುವುದು ●

"ಮಾರ್ಕ್ಸ್ 200-ಕ್ಯಾಪಿಟಲ್ 150" ಆಚರಣೆ




ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ ಮತ್ತು ಫಿಲಂ ಪ್ರದರ್ಶನ

ನವಕರ್ನಾಟಕ ಮತ್ತು ಕ್ರಿಯಾ ಮಾಧ್ಯಮ ಜಂಟಿಯಾಗಿ **"ಮಾರ್ಕ್ಸ್ 200- ಕ್ಯಾಪಿಟಲ್ 150"** ಆಚರಣೆಯ ಅಂಗವಾಗಿ, ಕ್ಯಾಪಿಟಲ್ ಸಂಪುಟ-1 ಮತ್ತು ಇತರ 6 ಮಾರ್ಕ್ಸ್ ಕೃತಿಗಳ ಮಾಲಿಕೆಯ ಪ್ರಕಟಣೆ ಮತ್ತು ಪುಸ್ತಕ ಬಿಡುಗಡೆ ಜತೆ ಮಾರ್ಕ್ಸ್‌ವಾದದ ಬಗ್ಗೆ ವಿಚಾರ ಸಂಕಿರಣಗಳ ಸರಣಿಯನ್ನು ಹಮ್ಮಿಕೊಂಡಿದೆ. ಈ ಸರಣಿಯ ಮೊದಲ ಕಾರ್ಯಕ್ರಮ **ಮೇ 20ರಂದು ಬೆಂಗಳೂರಿನಲ್ಲಿ ಗಾಂಧಿ ಭವನದಲ್ಲಿ** ನಡೆಯಲಿದೆ. ಅಂದು ಮಾರ್ಕ್ಸ್ ಅವರ ಕೃತಿಗಳ ಅನುವಾದಗಳಾದ **"ಫ್ರಾನ್ಸಿನ ಅಂತರ್ಯುದ್ಧ – ಪ್ಯಾರಿಸ್ ಕಮ್ಯೂನ್ : ಕಾರ್ಮಿಕರ ಮೊದಲ ಕ್ರಾಂತಿ" ಮತ್ತು "ತತ್ವಶಾಸ್ತ್ರದ ದಾರಿದ್ರ್ಯ"** ಎಂಬ ಕೃತಿಗಳು ಬಿಡುಗಡೆಯಾಗಲಿವೆ. ಪುಸ್ತಕ ಪರಿಚಯ ಅಲ್ಲದೆ, ಅಂದು **"ಭಾರತದಲ್ಲಿ ಜಾತಿ ದಮನ-ಅಸ್ಪೃಶ್ಯತೆಗಳ ವಿನಾಶ ಮತ್ತು ವರ್ಗ ಸಂಘರ್ಷ – ಮಾರ್ಕ್ಸ್ ವಾದಿ ಕಣ್ಣೋಟ"** ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣ ಇರುತ್ತದೆ: ವಿಚಾರ ಸಂಕಿರಣದ ನಂತರ **"ಯಂಗ್ ಕಾರ್ಲ್ ಮಾರ್ಕ್ಸ್"** ಫಿಲಂ ಪ್ರದರ್ಶನವೂ ಇರುತ್ತದೆ.



ಕಾರ್ಲ್ ಮಾರ್ಕ್ಸ್ 200ನೇ ವಾರ್ಷಿಕ ಜನ್ಮದಿನಾಚರಣೆ





ಜಗತ್ತನ್ನು ಬದಲಿಸುವುದು ಹೇಗೆ?

ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಆಚರಣೆಯ ಮೂಲದಿಂದ ಅನೇಕಾನೇಕ ಕ್ರಾಂತಿಗಳು ನಡೆದಿವೆ ಹಾಗೂ ಕ್ರಾಂತಿಕಾರಿ ಚಳವಳಿಗಳು ಹೊಮ್ಮಿವೆ. ಯಾವುದೇ ಒಂದು ನಿರ್ದಿಷ್ಟ ಕ್ರಾಂತಿಯ ವೈಫಲ್ಯ, ಅಥವಾ ಅದು ಹಳಿ ತಪ್ಪಿದ್ದು ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಬಾಧಿಸಿಲ್ಲ. ಮಾರ್ಕ್ಸ್ ಸಿದ್ಧಾಂತವನ್ನು ಜ್ಞಾನದ ಎಲ್ಲಾ ರಂಗಗಳಲ್ಲಿ ಅಭಿವೃದ್ಧಿಪಡಿಸುವುದು ಹಾಗೂ ಸಮಕಾಲಿಕ ಗೊಳಿಸುವುದು ಮಾರ್ಕ್ಸ್‌ವಾದಿಗಳ ಕರ್ತವ್ಯವಾಗಿದೆ. ಇಂಥ ಸಾಹಸಗಳ ಮೂಲಕ ಮಾತ್ರವೇ ಸಾಮಾಜಿಕ ಪರಿವರ್ತನೆಯ ಗುರಿಯತ್ತ ನಾವು ಯಶಸ್ವಿಯಾಗಿ ಮುನ್ನಡೆಯ ಬಹುದಾಗಿದೆ.



*** ಪ್ರಕಾಶ್ ಕಾರಟ್**

ಕಾರ್ಲ್ ಮಾರ್ಕ್ಸ್ ಅವರ ಜನ್ಮ ದ್ವಿಶತಮಾನೋತ್ಸವ ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ, ಅವರು 135 ವರ್ಷಗಳ ಹಿಂದೆ ನಿಧನರಾದ ನಂತರ ಅದೆಷ್ಟು ಬಾರಿ ಮಾರ್ಕ್ಸ್‌ವಾದ ಸತ್ತು ಹೋಯಿತು ಅಥವ ಅದು ಅಸಂಗತವಾಗಿ ಬಿಟ್ಟಿದೆ ಎಂದು ಸಾರಲಾಗಿದೆ ಎಂಬುದನ್ನು ನೆನಪಿಸಿಕೊಳ್ಳದಿರಲು ಸಾಧ್ಯವಿಲ್ಲ. ಆದರೆ, ಮಾರ್ಕ್ಸ್ ಮತ್ತು ಅವರ ಚಿಂತನೆಗಳು ಮತ್ತೆಮತ್ತೆ ಅನುರಣಿಸಿ ಸಾರ್ವಜನಿಕರ ಗಮನವನ್ನು ಸೆಳೆಯುತ್ತಿವೆ. ಸಾಮಾಜಿಕ ಮತ್ತು ಐತಿಹಾಸಿಕ ಬದಲಾವಣೆಗಳಿಗೆ ಸಂಬಂಧಿಸಿದಂತೆ ಮಾರ್ಕ್ಸ್‌ರ ಚಿಂತನೆಗಳೇ ಇದಕ್ಕೆ ಕಾರಣ. ಅವು ಯಾವುದೇ ಕಾಲಕ್ಕೂ ಅಸಂಗತವಾಗುವಂತವುಗಳಲ್ಲ.

200 ವರ್ಷಗಳ ಹಿಂದೆ, 1818 ಮೇ 5ರಂದು ಕಾರ್ಲ್ ಮಾರ್ಕ್ಸ್ ಜನಿಸಿದರು. 1883 ಮಾರ್ಚ್ 14 ರಂದು ತಮ್ಮ 65ನೇ ವಯಸ್ಸಿನಲ್ಲಿ ಅವರು ನಿಧನರಾದರು. ಅವರ ವಯಸ್ಕ ಜೀವನಪೂರ್ತಿ ಹಲವಾರು ಕೃತಿಗಳನ್ನು ರಚಿಸಿದ್ದು, ಅವು ತಿರುಳಲ್ಲಿರುವುದು ಈಗ ಮಾರ್ಕ್ಸ್‌ವಾದಿ ಸಿದ್ಧಾಂತ ಎಂದು ಖ್ಯಾತವಾಗಿರುವುದರ ತಿರುಳಾಗಿದೆ.

ಮಾರ್ಕ್ಸ್ ಮತ್ತು ಅವರ ಒಡನಾಡಿ ಫ್ರೆಡರಿಕ್ ಏಂಗೆಲ್ಸ್, ಐತಿಹಾಸಿಕ ಭೌತವಾದ ಎಂದು ಖ್ಯಾತವಾಗಿರುವ ಇತಿಹಾಸದ ಭೌತವಾದಿ ಪರಿಕಲ್ಪನೆಯ ಸಂಸ್ಥಾಪಕರಾಗಿದ್ದಾರೆ. ಈ ಭೌತವಾದಿ ಕಣ್ಣೋಟವು ದ್ವಂದ್ವಮಾನತೆಯನ್ನು ಆಧರಿಸಿರುವುದರಿಂದ ಇತರೆ ಭೌತವಾದಿ ತತ್ವಶಾಸ್ತ್ರಗಳಿಗಿಂತ ಭಿನ್ನವಾಗಿತ್ತು.

ಐತಿಹಾಸಿಕ ಭೌತವಾದದ ಆಧಾರದ ಮೇಲೆ ಮಾರ್ಕ್ಸ್ ಮತ್ತು ಏಂಗೆಲ್ಸ್, ಸಮಾಜವು ಹೇಗೆ ರೂಪುಗೊಳ್ಳುತ್ತದೆ ಮತ್ತು ವಿವಿಧ ಉತ್ಪಾದನಾ ವಿಧಾನಗಳ ಮೂಲಕವಾಗಿ ಬದಲಾವಣೆಗೊಳ್ಳುತ್ತದೆ ಮತ್ತು ಪಾಳೇಗಾರಿ ವ್ಯವಸ್ಥೆಯು ಗರ್ಭದಿಂದ ಬಂಡವಾಳಶಾಹಿಯು ಹೇಗೆ ಮೇಲೆದ್ದು ಬರುತ್ತದೆ ಎನ್ನುವುದನ್ನು ತೋರಿಸಿಕೊಟ್ಟರು.

ತಮ್ಮ ಮಹಾಕೃತಿ 'ಬಂಡವಾಳ'ದಲ್ಲಿ ಬಂಡವಾಳಶಾಹಿಯು ಒಂದು ಉತ್ಪಾದನಾ ವಿಧಾನವಾಗಿ ಹೇಗೆ ಕೆಲಸ ಮಾಡುತ್ತದೆ ಎನ್ನುವ ಆಂತರಿಕ ಕಾರ್ಯವಿಧಾನವನ್ನು ಮಾರ್ಕ್ಸ್ ಬೆತ್ತಲೆಗೊಳಿಸಿದ್ದಾರೆ. ಮಿಗುತಾಯ ಮೌಲ್ಯವನ್ನು ಪಡೆಯಲು ಶ್ರಮವನ್ನು ಹೇಗೆ ಒಂದು ಸರಕಾಗಿ ಬಳಸಲಾಗುತ್ತದೆ ಎನ್ನುವುದನ್ನು ಅವರು ಬಹಿರಂಗಪಡಿಸಿದರು. ಬಂಡವಾಳಶಾಹಿಯು ಹೇಗೆ ಶೋಷಣೆಯ ಒಂದು ಜಾಗತಿಕ ವ್ಯವಸ್ಥೆಯಾಗಿ ರೂಪುಗೊಳ್ಳುತ್ತದೆ ಎನ್ನುವುದನ್ನು ಮುಂಗಂಡವರು ಮಾರ್ಕ್ಸ್; ಅವರ ಜೀವಿತಾವಧಿಯ ನಂತರ ಅದು ಸಾಮ್ರಾಜ್ಯಶಾಹಿಯಾಗಿ ಬೆಳೆಯಿತು. ತದನಂತರ, ಲೆನಿನ್ ಬಂಡವಾಳಶಾಹಿಯ ಈ ವಿಶ್ಲೇಷಣೆಯನ್ನು ಸಾಮ್ರಾಜ್ಯಶಾಹಿಯ ಹೊಸ ಹಂತಕ್ಕೆ ಮುಂದಕ್ಕೆ ಕೊಂಡೊಯ್ದರು.

ಇತಿಹಾಸ ಕುರಿತ ಮಾರ್ಕ್ಸ್ ಪರಿಕಲ್ಪನೆ ಸಾರತಃ ವರ್ಗ ಹೋರಾಟಗಳ ಇತಿಹಾಸವಾಗಿದೆ. ಮಾರ್ಕ್ಸ್ ಮತ್ತು ಏಂಗೆಲ್ಸ್ ವೈಜ್ಞಾನಿಕ ಸಮಾಜವಾದದ ಪ್ರತಿಪಾದಕರಾದರು. 1848ರಲ್ಲಿ ಪ್ರಕಟವಾದ ತಮ್ಮ ಅದ್ಭುತ ಕಮ್ಯೂನಿಸ್ಟ್ ಪ್ರಣಾಳಿಕೆಯಲ್ಲಿ ಅವರು ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರಿ ಹೋಗಲು ಹಾಗೂ ಒಂದು ವರ್ಗರಹಿತ ಸಮಾಜದತ್ತ ಅಂದರೆ ಕಮ್ಯೂನಿಸಮ್‌ನತ್ತ ಸಾಗಲು ಕ್ರಮಿಸಬೇಕಾದ ಕ್ರಾಂತಿಕಾರಿ ಮಾರ್ಗವನ್ನು ರೂಪಿಸಿದರು.

ಮಾರ್ಕ್ಸ್‌ರವರಿಗೆ, ಸಿದ್ಧಾಂತವು ಕ್ರಿಯೆಗೆ ಇರುವ ಒಂದು ಮಾರ್ಗಸೂಚಿಯಷ್ಟೆ. ಕಮ್ಯೂನಿಸ್ಟ್ ಪ್ರಣಾಳಿಕೆ ಮೂಲಕ ಕಾರ್ಮಿಕ ವರ್ಗಕ್ಕೆ ಬಂಡವಾಳಶಾಹಿ–ವಿರೋಧಿ ಕ್ರಾಂತಿಯ ನಾಯಕತ್ವವನ್ನು ವಹಿಸುವಂತೆ ಕರೆಯಿಂದ ಆರಂಭಿಸಿ ಕಾರ್ಲ್ ಮಾರ್ಕ್ಸ್ ಕಾರ್ಮಿಕರನ್ನು ಸಂಘಟಿಸುವ ಕೆಲಸದಲ್ಲಿ ತೊಡಗಿಸಿಕೊಂಡರು. 1864ರಲ್ಲಿ ಸ್ಥಾಪನೆಯಾದ 'ಇಂಟರ್‌ನ್ಯಾಶನಲ್ ವರ್ಕಿಂಗ್ ಮೆನ್ಸ್ ಅಸೋಸಿಯೇಷನ್'(ಅಂತಾರಾಷ್ಟ್ರೀಯ ದುಡಿಮೆಗಾರರ ಸಂಘ) ಅವರ ಶ್ರಮದ ಫಲವೇ ಆಗಿದೆ.

ಲೆನಿನ್ ಮಾಡಿದ ಮಾರ್ಕ್ಸ್‌ವಾದಿ ಸಿದ್ಧಾಂತದ ಸೃಜನಾತ್ಮಕ ಬೆಳವಣಿಗೆ 1917ರ ಅಕ್ಟೋಬರ್ ಕ್ರಾಂತಿಯ ಚಾಲಕಶಕ್ತಿಯಾಗಿತ್ತು. ಅಂದಿನಿಂದ ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಆಚರಣೆಯ ಮೂಲದಿಂದ ಅನೇಕಾನೇಕ ಕ್ರಾಂತಿಗಳು ನಡೆದಿವೆ ಹಾಗೂ ಕ್ರಾಂತಿಕಾರಿ ಚಳವಳಿಗಳು ಹೊಮ್ಮಿವೆ. ಯಾವುದೇ ಒಂದು ನಿರ್ದಿಷ್ಟ ಕ್ರಾಂತಿಯ ವೈಫಲ್ಯ, ಅಥವಾ ಅದು ಹಳಿ ತಪ್ಪಿದ್ದು ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಬಾಧಿಸಿಲ್ಲ. ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಆಚರಣೆಯನ್ನು ವಿರೂಪಗೊಳಿಸಿದ್ದು ಮತ್ತು ದುರ್ಬಲಗೊಳಿಸಿದ್ದೇ ವೈಫಲ್ಯಕ್ಕೆ ಕಾರಣವಾಗಿದೆ.

ತಮ್ಮ ಅಭಿಪ್ರಾಯಗಳು ಮತ್ತು ಸಿದ್ಧಾಂತಗಳು ಸರ್ವಶಕ್ತ ಮತ್ತು ಸಾರ್ವಕಾಲಿಕ ಎಂದು ಮಾರ್ಕ್ಸ್ ಯಾವತ್ತೂ ಪರಿಗಣಿಸಿರಲಿಲ್ಲ. ಸಮಾಜವನ್ನು ಗ್ರಹಿಸಿಕೊಳ್ಳುವುದು ಮತ್ತು ಅದರಲ್ಲಿ ಹೇಗೆ ಬದಲಾವಣೆ ಬಹುದು ಎಂಬುದಕ್ಕೆ ಒಂದು ವಿಧಾನವನ್ನಷ್ಟೇ ಅವರು ಜಗತ್ತಿನ ಮುಂದಿಟ್ಟರು. ಈ ವಿಚಾರದಲ್ಲಿ ಲೆನಿನ್ ಹೇಳಿದ್ದನ್ನು ನಾವು ಸದಾ ನೆನಪಿಸಿಕೊಳ್ಳಬೇಕು:

"ಮಾರ್ಕ್ಸ್ ಸಿದ್ಧಾಂತವು ಪೂರ್ಣಗೊಂಡಿದೆ ಹಾಗೂ ಅನುಲ್ಲಂಘನೀಯ ಎಂದು ನಾವು ಪರಿಗಣಿಸುವುದಿಲ್ಲ. ಬದಲಾಗಿ, ಅದು ಸಮಾಜವಾದಿಗಳು ಜೀವನದೊಂದಿಗೆ ಹೆಜ್ಜೆ ಹಾಕಲು ಬಯಸುವುದಾದರೆ ಎಲ್ಲಾ ದಿಕ್ಕುಗಳಲ್ಲಿ ಅಭಿವೃದ್ಧಿ ಪಡಿಸಬೇಕಾದ ವಿಜ್ಞಾನದ ಅಡಿಗಲ್ಲನ್ನು ಇಟ್ಟಿದೆಯಷ್ಟೇ ಎಂದು ನಮಗೆ ಮನವರಿಕೆಯಾಗಿದೆ."

ಮಾರ್ಕ್ಸ್ ಸಿದ್ಧಾಂತವನ್ನು ಜ್ಞಾನದ ಎಲ್ಲಾ ರಂಗಗಳಲ್ಲಿ ಅಭಿವೃದ್ಧಿಪಡಿಸುವುದು ಹಾಗೂ ಸಮಕಾಲಿಕ ಗೊಳಿಸುವುದು ಮಾರ್ಕ್ಸ್‌ವಾದಿಗಳ ಕರ್ತವ್ಯವಾಗಿದೆ. ಇಂಥ ಸಾಹಸಗಳ ಮೂಲಕ ಮಾತ್ರವೇ ಸಾಮಾಜಿಕ ಪರಿವರ್ತನೆಯ ಗುರಿಯತ್ತ ನಾವು ಯಶಸ್ವಿಯಾಗಿ ಮುನ್ನಡೆಯ ಬಹುದಾಗಿದೆ.

ಕಾರ್ಲ್ ಮಾರ್ಕ್ಸ್ ಚಿಂತನೆಗಳನ್ನು ಪ್ರಚುರಪಡಿಸಲು ಹಾಗೂ ಮಾರ್ಕ್ಸ್‌ವಾದವನ್ನು ಜನರತ್ತ ಕೊಂಡೊಯ್ಯಲು ಒಂದು ವರ್ಷ ಕಾಲ ಕಾರ್ಯಕ್ರಮಗಳನ್ನು ನಡೆಸುವಂತೆ ಸಿಪಿಐ (ಎಂ)ನ 22ನೇ ಮಹಾಧಿವೇಶನ ಕರೆ ನೀಡಿದೆ. ಇದನ್ನು ವಿಚಾರ ಸಂಕಿರಣಗಳು, ಸಾರ್ವಜನಿಕ ಚರ್ಚೆಗಳು, ಭಾರತೀಯ ಭಾಷೆಗಳಲ್ಲಿ ಮಾರ್ಕ್ಸ್‌ವಾದಿ ಕೃತಿಗಳ ಪ್ರಕಟಣೆ ಮತ್ತು ಮಾರ್ಕ್ಸ್‌ವಾದಿ ವಿಚಾರಗಳ ಮೇಲೆ ಅಧ್ಯಯನ ವೃತ್ತಗಳನನು ನಡೆಸುವ ಮಾಡಬೇಕಾಗಿದೆ. ಇದುವೇ ಭಾರತ ಮತ್ತು ಜಗತ್ತನ್ನು ಬದಲಾಯಿಸುವ ಹೋರಾಟವನ್ನು ಕೈಗೊಳ್ಳಲು ನಮ್ಮನ್ನು ನಾವು ಸನ್ನದ್ಧಗೊಳಿಸಿಕೊಳ್ಳುವ ಮಾರ್ಗವಾಗಿದೆ.

ಅನು: ವಿಶ್ವ

ಕಾರ್ಮಿಕ ವರ್ಗ ಮತ್ತು ಶ್ರಮಿಕ ಜನಸಮೂಹಗಳಿಗೆ ಆಳವಾದ ಬದ್ಧತೆ ಹೊಂದಿದ್ದ ಅರ್ಥಶಾಸ್ತ್ರಜ್ಞ

ಡಾ.ಅಶೋಕ ಮಿತ್ರ ಅವರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮತ್ತು ಸಿಐಟಿಯು ಶ್ರದ್ಧಾಂಜಲಿ



ಪ್ರಖ್ಯಾತ ಆರ್ಥಶಾಸ್ತ್ರಜ್ಞ ಮತ್ತು ಎಡ ಚಿಂತಕ, ಡಾ.ಅಶೋಕ ಮಿತ್ರ ಮೇ 1 ರಂದು ನಿಧನರಾಗಿದ್ದಾರೆ. ಅವರಿಗೆ 90 ತುಂಬಿತ್ತು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ನಿಧನಕ್ಕೆ ಆಳವಾದ ಸಂತಾಪವನ್ನು ವ್ಯಕ್ತಪಡಿಸಿದೆ.

ಅಶೋಕ ಮಿತ್ರ ಪಶ್ಚಿಮ ಬಂಗಾಲದ ಜ್ಯೋತಿ ಬಸು ನೇತೃತ್ವದ ಮೊದಲ ಮತ್ತು ಎರಡನೇ ಎಡರಂಗ ಸರಕಾರದಲ್ಲಿ ಹಣಕಾಸು ಮಂತ್ರಿಗಳಾಗಿದ್ದರು. ರಾಜ್ಯಸಭೆಯಲ್ಲೂ ಅವರು ಸಿಪಿಐ(ಎಂ)ನ್ನು ಪ್ರತಿನಿಧಿಸಿದರು. ಕೆಲವು ಕಾಲ ಅವರು ಪಕ್ಷದ ಪಶ್ಚಿಮ ಬಂಗಾಲ ರಾಜ್ಯಸಮಿತಿಯ ಸದಸ್ಯರೂ ಆಗಿದ್ದರು.

ದೇಶದ ಕಾರ್ಮಿಕ ವರ್ಗ ಮತ್ತು ಶ್ರಮಿಕ ಜನಸಮೂಹಗಳಿಗೆ ಅವರ ಬದ್ಧತೆ ಬಹಳ ಆಳವಾಗಿತ್ತು ಭಾರತ ಸರಕಾರಕ್ಕೆ ಮುಖ್ಯ ಆರ್ಥಿಕ ಸಲಹೆಗಾರರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ಒಬ್ಬ ನಿರರ್ಗಳ ಲೇಖಕರಾಗಿದ್ದ ಅವರು ವಿವಿಧ ದೈನಿಕಗಳಿಗೆ, ಪತ್ರಿಕೆಗಳಿಗೆ ನಿಯಮಿತವಾಗಿ ಬರೆಯುತ್ತಿದ್ದರು. ಅವರ ಲೇಖನಗಳು ಕೇವಲ ಅರ್ಥಶಾಸ್ತ್ರ ಮತ್ತು ರಾಜಕೀಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಇತ್ತೀಚೆಗೆ ಅವರು ಬಂಗಾಲೀ ಪತ್ರಿಕೆ 'ಆರೆಕ್ ರಕಂ'ನ ಸಂಪಾದಕರಾಗಿಯೂ ಕೆಲಸ ಮಾಡಿದರು.

ಅಶೋಕ ಮಿತ್ರ ಅವರ ನಿಧನದಿಂದಾಗಿರುವ ನಷ್ಟವನ್ನು ನೆನೆಸಿಕೊಂಡು ಶ್ರದ್ಧಾಂಜಲಿ ಸಲ್ಲಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ಕುಟುಂಬದವರಿಗೆ ಮತ್ತು ಅವರ ಅಭಿಮಾನಿಗಳ ದೊಡ್ಡ ಬಳಗಕ್ಕೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.

ಸಿಐಟಿಯು ಶ್ರದ್ಧಾಂಜಲಿ

ದೇಶದ ಒಂದು ಪ್ರಮುಖ ಕಾರ್ಮಿಕ ಸಂಘಟನೆಯಾದ ಸಿಐಟಿಯು ದೇಶದ ಈ ಸುವಿಖ್ಯಾತ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞರಿಗೆ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತ ರಾಜ್ಯಸಭಾ ಸದಸ್ಯರಾಗಿದ್ದಾಗ ಅವರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಂಸದೀಯ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿದ್ದರು ಮತ್ತು ಭಾರತ ಸರಕಾರದ ಕೃಷಿ ಬೆಲೆಗಳ ಆಯೋಗದ ಅಧ್ಯಕ್ಷರೂ ಆಗಿದ್ದರು ಎಂಬುದನ್ನು ನೆನಪಿಸಿಕೊಂಡಿದೆ. ಈ ಮಾರ್ಕ್ಸ್‌ವಾದಿ ಆರ್ಥಿಕ ಸಿದ್ಧಾಂತಿ, ವಿದ್ವಾಂಸ, ಲೇಖಕ, ಅಂಕಣಗಾರ ಮತ್ತು ಬೋಧಕ ಕಾರ್ಮಿಕ ವರ್ಗ ಮತ್ತು ದಮನಕ್ಕೊಳಗಾಗಿರುವವರ ಹಿತಸಾಧನೆಗೆ ಆಳವಾಗಿ ಬದ್ಧರಾಗಿದ್ದವರು ಬಂಗಾಲೀ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳಿಗಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಅವರು ಪಡೆದಿದ್ದರು. ನವ–ಉದಾರವಾದದ ಕಟ್ಟಾ ವಿರೋಧಿಗಳೂ, ಅದರ ವಿರುದ್ಧದ ದೊಡ್ಡ ಹೋರಾಟಗಾರರೂ ಆಗಿದ್ದ ಅವರ ನಿಧನದಿಂದ ದೇಶದ ಕಾರ್ಮಿಕ ಆಂದೋಲನಕ್ಕೆ ನಷ್ಟವಾಗಿದೆ, ಅವರನ್ನು ಕಾರ್ಮಿಕ ವರ್ಗ ನವ–ಉದಾರವಾದಿ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ನೀಡಿರುವ ಅಪಾರ ರಾಜಕೀಯ ಮತ್ತು ಸೈದ್ಧಾಂತಿಕ ಕೊಡುಗೆಗಳಿಗಾಗಿ ಸದಾ ನೆನಪಿಸಿಕೊಳ್ಳುತ್ತದೆ ಎನ್ನುತ್ತ ಸಿಐಟಿಯು ಡಾ. ಅಶೋಕ ಮಿತ್ರ ಅವರ ಕುಟುಂಬಕ್ಕೆ ಮತ್ತು ಸಂಗಾತಿಗಳಿಗೆ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

ದುಡಿಯುವ ಜನಗಳ ಹಿತವೇ ಸರ್ವಪ್ರಥಮವಾಗಿದ್ದ ಮಹಾನ್ ವ್ಯಕ್ತಿತ್ವ –ಪ್ರೊ, ಪಟ್ನಾಯಕ್ ಶ್ರದ್ಧಾಂಜಲಿ

ಡಾ. ಅಶೋಕ ಮಿತ್ರ ನವೋದಯ ಯುಗದ ಬಹುಮುಖ ಪ್ರತಿಭೆ ಎಂದು ದೇಶದ ಇನ್ನೊಬ್ಬ ಹಿರಿಯ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ವರ್ಣಿಸಿದ್ದಾರೆ. ಅವರ ಎರಡು ಅನನ್ಯ ಕೃತಿಗಳೆಂದರೆ ರಾಷ್ಟ್ರೀಯ ಆದಾಯದಲ್ಲಿ ವೇತನಗಳ ಪಾಲು ಮತ್ತು ವ್ಯಾಪಾರ ಶರತ್ತುಗಳು ಹಾಗೂ ವರ್ಗ ಸಂಬಂಧಗಳು–ಕಾಲದ ಒರೆಯಲ್ಲಿ ನಿಲ್ಲುವ ಕೃತಿಗಳು ಎಂದು ಅವರು ಹೇಳಿದ್ದಾರೆ.

ಆಜೀವನ ಕಮ್ಯುನಿಸ್ಟರಾಗಿದ್ದ ಅವರು ಎಂದೂ ತಮ್ಮ ತತ್ವಸಿದ್ಧಾಂತವನ್ನು ಮರೆಮಾಚಲಿಲ್ಲ. ಅವರು ವರಿಷ್ಠ ಎಡ ಪಂಥಿಯ ಚಿಂತಕರಾಗಿದ್ದರಷ್ಟೇ ಅಲ್ಲ, ಮೊದಲ ಎಡರಂಗ ಸರಕಾರದಲ್ಲಿ ಹಣಕಾಸು, ಅಭಿವೃದ್ಧಿ ಮತ್ತು ಯೋಜನೆಯ ಇಲಾಖೆಗಳ ಮಂತ್ರಿಯಾಗಿಯೂ 1977ರಿಂದ 1986 ರವರೆಗೆ ಸೇವೆ ಸಲ್ಲಿಸಿದರು. ಅವಧಿಯಲ್ಲಿ ಪಶ್ಚಿಮ ಬಂಗಾಲದಲ್ಲಿ ನಡೆದ ಆಪರೇಶನ್ ಬರ್ಗ ಮತ್ತು ಪಂಚಾಯತುಗಳಿಗೆ ಹಣಕಾಸು ಕೂಡ ಸೇರಿದಂತೆ ಅಧಿಕಾರಗಳ ವಿಕೇಂದ್ರೀಕರಣ ಅಲ್ಲಿ ಗ್ರಾಮೀಣ ದೃಶ್ಯವನ್ನೇ ಬದಲಿಸಿದವು ಈ ಮೂರು ರಂಗಗಳಲ್ಲಿ ಅವರ ಸಾಧನೆಗಳು ಅವರನ್ನು ನಿಜವಾಗಿಯೂ ಸ್ವಾತಂತ್ರ್ಯೋತ್ತರ ಭಾರತದ ಅಸಾಮಾನ್ಯ ವ್ಯಕ್ತಿಗಳಲ್ಲೊಬ್ಬರಾಗಿಸಿದೆ ಎಂದು ಪ್ರೊ. ಪಟ್ನಾಯಕ್ ನೆನಪಿಸಿಕೊಳ್ಳುತ್ತಾರೆ. ಅವರನ್ನು ರಾಜ್ಯಗಳ ಹಕ್ಕುಗಳ ಒಬ್ಬ ಪ್ರಬಲ ಪ್ರತಿಪಾದಕ ಎಂದೂ ನೆನಪಿಸಿಕೊಳ್ಳಬೇಕು. ಒಕ್ಕೂಟತತ್ವಕ್ಕೆ ಸಂಪೂರ್ಣ ಬದ್ಧರಾಗಿದ್ದ ಅವರು ಜಿಎಸ್‌ಟಿ ಯ ಪ್ರಬಲ ವಿರೋಧಿಯಾಗಿದ್ದರು.

ಡಾ.ಅಶೋಕ ಮಿತ್ರರವರ ಸಾವಿನಿಂದ ದೇಶ ದುಡಿಯುವ ಜನಗಳ ಹಿತವೇ ಸರ್ವಪ್ರಥಮವಾಗಿದ್ದ ಮಹಾನ್ ಜಾಣ್ಮೆ ಹೊಂದಿದ್ದ ಒಬ್ಬ ವ್ಯಕ್ತಿಯನ್ನು ಕಳಕೊಂಡಿದೆ ಎಂದು ಪ್ರೊ. ಪ್ರಭಾತ್ ಪಟ್ನಾಯಕ್ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ಸಿಪಿಐ(ಎಂ) ಚುನಾವಣಾ ಭಾಷಣ

ಬಿಜೆಪಿ ಸೋಲಿಸಿ !! ವಿಧಾನಸಭೆಯಲ್ಲಿ ದುಡಿಯುವ ಜನರ ದನಿ ಮೊಳಗಲಿ !

ರಾಷ್ಟ್ರೀಯ ಮಾನ್ಯತೆ ಪಡೆದ ಪಕ್ಷಗಳಿಗೆ ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ನಿಗದಿತ ಅವಧಿಯ ಭಾಷಣಗಳನ್ನು ಮಾಡುವ ಅವಕಾಶ ಕೊಡುವ ವ್ಯವಸ್ಥೆ ಇದೆ. ಮೇ 1 ರಿಂದ 9 ರವರೆಗೆ ಪ್ರಸಾರವಾಗಲಿರುವ ಈ ಭಾಷಣಗಳ ಪೂರ್ಣಪಾಠ ಇಲ್ಲಿ ಕೊಡಲಾಗಿದೆ.

ಮಾನ್ಯ ಮತದಾರ ಬಂಧುಗಳೇ,

ಮೇ–12 ರಂದು ನಡೆಯುವ ಕರ್ನಾಟಕ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ರಾಜ್ಯದ ಸೌಹಾರ್ದತೆಯನ್ನು ಉಳಿಸಿ, ಬೆಳೆಸಲು ಹಾಗೂ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ಮತ್ತು ದುಡಿಯುವ ಜನತೆಯ ತಲಾ ಆದಾಯವನ್ನು ಹೆಚ್ಚಿಸುವ ನೈಜ ಅಭಿವೃದ್ಧಿಯೆಡೆಗೆ ರಾಜ್ಯವನ್ನು ಕೊಂಡೊಯ್ಯಲು ಮತ ಚಲಾಯಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ)ಯ ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ರಾಜ್ಯದ ಸಮಸ್ತ ಮತದಾರರಲ್ಲಿ ಮನವಿ ಮಾಡುವೆನು.

ಈ ಕಾರಣದಿಂದ ಮತದಾರರ ಬಂಧುಗಳು ಈ ಚುನಾವಣೆಯಲ್ಲಿ

1) ಮತಾಂಧ ಮತ್ತು ಸರ್ವಾಧಿಕಾರಿ ಬಿಜೆಪಿಯನ್ನು ಆದ್ಯತೆಯ ಮೇರೆಗೆ ಸೋಲಿಸಬೇಕು
2) ವಿಧಾನಸಭೆಯಲ್ಲಿ ಜನರ ಧ್ವನಿಯನ್ನು ಮೊಳಗಿಸಲು ಸಿಪಿಐ(ಎಂ) ಪಕ್ಷದ ಎಲ್ಲಾ ಅಭ್ಯರ್ಥಿಗಳನ್ನು ಗೆಲ್ಲಿಸಲು ನೆರವಾಗಬೇಕು.
3) ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಿ, ದುಡಿಯುವ ಜನರ ತಲಾ ಆದಾಯವನ್ನು ಹೆಚ್ಚಿಸುವ ನೈಜ ಅಭಿವೃದ್ಧಿಯೆಡೆಗೆ ರಾಜ್ಯವನ್ನು ಕೊಂಡೊಯ್ಯಲು ವ್ಯಾಪಕವಾದ ಜನ ಚಳುವಳಿಯಲ್ಲಿ ತೊಡಗಲು ವಿನಂತಿಸುವೆನು.

ಮಾನ್ಯ ಮತದಾರ ಬಂಧುಗಳೇ,

ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಂದ ಇದುವರೆಗೆ ರಚಿಸಲ್ಪಟ್ಟ ಎಲ್ಲಾ ರಾಜ್ಯ ಸರಕಾರಗಳು ಮತ್ತು ಅವುಗಳು ಹಿಡಿದ ಬಹುರಾಷ್ಟ್ರೀಯ ಸಂಸ್ಥೆಗಳು ಹಾಗೂ ಬಂಡವಾಳಶಾಹಿ–ಭೂಮಾಲಕರ ಪರವಾದ ಲೂಟಿಕೋರ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ದಾರಿಯು, ರಾಜ್ಯವನ್ನು ಒಂದು ಗಂಭೀರವಾದ ಬಿಕ್ಕಟ್ಟಿಗೆ ದೂಡಿದೆ.

ಈ ಬಿಕ್ಕಟ್ಟಿನ ಪರಿಣಾಮವಾಗಿ, ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳು ನಲುಗಿ ಹೋಗಿದೆ. ಸಂಕಷ್ಟದಲ್ಲಿರುವ ಜನತೆಯ ಆದಾಯವನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳುವ ಬದಲು, ಗಾಯದ ಮೇಲೆ ಬರೆ ಎಳೆದಂತೆ ಅಗತ್ಯ ವಸ್ತುಗಳ ಬೆಲೆಗಳನ್ನು ಹೆಚ್ಚಿಸುವ ಮೂಲಕ ಮತ್ತು ಇರುವ ಕನಿಷ್ಟ ಆದಾಯವೂ ಇಲ್ಲದಂತೆ ಮಾಡಲು ಅವರ ಉದ್ಯೋಗಗಳ ಮೇಲೆ ತೀವ್ರ ದಾಳಿಗಳನ್ನು ಮಾಡಲಾಗುತ್ತದೆ. ದೇಶಕ್ಕೆ ಅನ್ನ ನೀಡುವ ರೈತರು, ಕೃಷಿಕೂಲಿಕಾರರು, ಕಸುಬುದಾರರು ಅನ್ನಕ್ಕಾಗಿ ಬಾಯ್ಬಿಡುವ ಯಾತನಾಮಯ ಹಾಗೂ ಅತ್ಯಂತ ಸಂಕಷ್ಟದ ಜೀವನ ನಡೆಸುತ್ತಿದ್ದಾರೆ.

ರೈತರು, ಅವರು ಬೆಳೆದ ಯಾವುದೇ ಬೆಳೆಗೆ ನ್ಯಾಯವಾದ ಬೆಲೆಯನ್ನು ಪಡೆಯಲಾಗದೇ ಸಾಲಗಾರರಾಗುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ರೈತರ ಬೆಳೆಗೆ ವೈಜ್ಞಾನಿಕವಾಗಿ ಬೆಲೆ ನಿಗದಿಸುವ ಕೆಲಸವನ್ನು ಉದ್ದೇಶ ಪೂರ್ವಕವಾಗಿಯೇ ಮಾಡುತ್ತಿಲ್ಲ. ಕೃಷಿ ಉತ್ಪನ್ನಗಳ ಒಟ್ಟು ಖರ್ಚಿಗೆ ಶೇ 50ರಷ್ಟು ಲಾಭಾಂಶ ಸೇರಿಸಿ, ಬೆಂಬಲ ಬೆಲೆ ನಿಗದಿಸಬೇಕೆಂದು ಸರಕಾರಗಳಿಗೆ ಡಾ. ಎಂ ಎಸ್ ಸ್ವಾಮಿನಾಥನ್‌ರವರ ಕೃಷಿ ಆಯೋಗ ಸಲಹೆ ನೀಡಿ, ಒಂದು ದಶಕ ಕಳೆಯುತ್ತಿದ್ದರೂ, ಈ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಳುತ್ತಿಲ್ಲ. ಮಾತ್ರವಲ್ಲಾ, ಅ ರೀತಿ ನಿಗದಿಸಲಾಗುವ ಬೆಂಬಲಬೆಲೆಯನ್ನು ಖಾತರಿಯಾಗಿ ನೀಡಲು ಅಗತ್ಯ ಕ್ರಮಗಳನ್ನು ವಹಿಸುತ್ತಿಲ್ಲ. ಹಲವು ಬಾರಿ ಬೆಂಬಲ ಬೆಲೆಯ ಖಾತರಿ ಕಾಯ್ದೆಯನ್ನು ರೂಪಿಸಲು ಜನತೆ ಒತ್ತಾಯಿಸುತ್ತಿದ್ದರೂ, ಈ ಕುರಿತು ಗಮನ ಹರಿಸುತ್ತಿಲ್ಲ. ಅದೇ ರೀತಿ, ಕಡಿಮೆ ಬೆಲೆಯ ವಿದೇಶಿ ಕೃಷಿ ಉತ್ಪನ್ನಗಳನ್ನು ದೇಶದೊಳಗೆ ಆಮದು ಮಾಡದಂತೆ ನಿಯಂತ್ರಿಸಲು ಅಗತ್ಯ ಕ್ರಮಗಳನ್ನು ವಹಿಸುತ್ತಿಲ್ಲ.

ಇದರೊಂದಿಗೆ ಕರ್ನಾಟಕವನ್ನು ನಿರಂತರವಾಗಿ ಬಾಧಿಸುತ್ತಿರುವ ಬರಗಾಲಗಳು ಗ್ರಾಮೀಣ ಜನರ ಆದಾಯಗಳ ಮೇಲೆ ಬಲವಾದ ಪ್ರಹಾರಗಳನ್ನು ನೀಡಿವೆ. ಫಸಲ್ ವಿಮಾ ಯೋಜನೆಗಳು ಬರಪೀಡಿತ ರೈತರ ಸಂರಕ್ಷಣೆಗೆ ಬಾರದೇ, ಖಾಸಗೀ ವಿಮಾ ಕಂಪೆನಿಗಳ ಲೂಟಿಗೆ ನೆರವಾಗುತ್ತಿವೆ.

ಬೀಜ, ರಸಾಯನಿಕ ಗೊಬ್ಬರ, ಕ್ರಿಮಿನಾಶಕ, ಪೆಟ್ರೋಲ್, ಡೀಸೆಲ್ ಬೆಲೆಗಳು, ಟ್ರಾಕ್ಟರ್, ಟಿಲ್ಲರ್ ಮತ್ತು ಲಾರಿ ಬಾಡಿಗೆಗಳು ದಿನೇ ದಿನೇ ದುಬಾರಿಯಾಗುತ್ತಲೇ ಇವೆ. ಇದರಿಂದಾಗಿ, ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚವು ಬೆಳೆಯುತ್ತಲೇ ಇದೆ. ಕೃಷಿ ಉತ್ಪನ್ನಗಳಿಗೆ ಸಮರ್ಪಕವಾದ ಬೆಲೆಗಳು ಬಹುತೇಕ ದೊರೆಯದೆ ಇರುವುದರಿಂದ ಹಳೆಯ ಬಾಕಿ ತೀರಿಸಲಾಗದ ರೈತರಿಗೆ ಬ್ಯಾಂಕುಗಳು/ ಸಹಕಾರಿ ಸಂಘಗಳು ಹೊಸ ಸಾಲ ನೀಡುತ್ತಿಲ್ಲ. ಪರಿಣಾಮವಾಗಿ, ವ್ಯವಸಾಯವನ್ನು ಮುಂದುವರೆಸಲು ಖಾಸಗೀ ಬಡ್ಡಿ ವ್ಯಾಪಾರಿಗಳ/ ಗೊಬ್ಬರದ ಅಂಗಡಿಗಳ ಮಾಲೀಕರ ಹತ್ತಿರ ಪಡೆದ ದುಬಾರಿ ಬಡ್ಡಿ ಸಾಲಗಳು ರೈತ ಕುಟುಂಬಗಳ ಭವಿಷ್ಯತ್ತಿಗೆ ಮಾರಕವಾಗುತ್ತಿವೆ. ಸಾಲ ನೀಡಿದವರ ದೌರ್ಜನ್ಯಗಳು ವ್ಯಾಪಕಗೊಳ್ಳುತ್ತಿರುವುದರಿಂದ ಮತ್ತು ಮುಂಬರುವ ಬದುಕಿನ ಭರವಸೆಯಿಲ್ಲದಿರುವುದರಿಂದ ಸಾಲಬಾಧಿತರು ದೊಡ್ಡ ಪ್ರಮಾಣದಲ್ಲಿ ಆತ್ಮಹತ್ಯೆಯೆಡೆಗೆ ತಳ್ಳಲ್ಪಡುತ್ತಿದ್ದಾರೆ. ಈ ಅವಧಿಯಲ್ಲಿ 3,000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗಳೆಂಬ ಸರಕಾರಿ ಪ್ರಾಯೋಜಿತ ಈ ಕಗ್ಗೊಲೆಗಳನ್ನು ತಡೆಯುವಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರಗಳು ಘೋರವಾಗಿ ವಿಫಲವಾಗಿವೆ. ಅನ್ನದಾತ ರೈತನ ಸಾಲ ಮನ್ನಾ ಮಾಡುವ ಬದಲು, ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ದೊಡ್ಡ ದೊಡ್ಡ ಕಂಪನಿಗಳ ಲಕ್ಷಾಂತರ ಕೋಟಿ ರೂಗಳ ಸಾಲವನ್ನು ಮನ್ನಾಮಾಡುತ್ತದೆ.

ಇಂತಹ ರೈತರ ಆತ್ಮಹತ್ಯೆಗಳನ್ನು ಯಶಸ್ವಿಯಾಗಿ ತಡೆಯಲು ಕೇರಳದ ಸಿಪಿಐ(ಎಂ) ನೇತೃತ್ವದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಸರಕಾರ ಜಾರಿಗೆ ತಂದ ಋಣಮುಕ್ತ ಕಾಯ್ದೆಯನ್ನು ಕರ್ನಾಟಕದಲ್ಲಿ ಮತ್ತು ದೇಶದಲ್ಲಿ ಜಾರಿಗೆ ತರುತ್ತಿಲ್ಲ.

ಆಧುನಿಕ ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಉದ್ಯೋಗ ಕಳೆದುಕೊಳ್ಳುತ್ತಿರುವ ಕಸುಬುದಾರರು ಮತ್ತು ದಿವಾಳಿಯಾಗುತ್ತಿರುವ ರೈತ ಕುಟುಂಬಗಳು ಕೂಲಿಕಾರರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿವೆ. ಈ ಹೆಚ್ಚಳ ಮತ್ತು ವ್ಯವಸಾಯದಲ್ಲಿ ಕೂಲಿಕೆಲಸದ ಅವಕಾಶಗಳು ಕಡಿತಗೊಳ್ಳುತ್ತಿರುವುದರಿಂದ, ಈ ಎಲ್ಲರೂ ಗಂಭಿರವಾದ ಆದಾಯದ ಕೊರತೆಯನ್ನು ಎದುರಿಸುವಂತಾಗಿದೆ. ಈ ಎಲ್ಲ ಕುಟುಂಬಗಳಲ್ಲಿ ಅಪೌಷ್ಟಿಕತೆಯ ಸಾವುಗಳು ಬೆಳೆಯುತ್ತಿವೆ.

ಮಹಾತ್ಮಗಾಂದಿ ಉದ್ಯೋಗ ಖಾತ್ರಿ ಯೋಜನೆಯು ವರ್ಷದಲ್ಲಿ ಕನಿಷ್ಟ 100 ದಿನಗಳ ಮತ್ತು ಬರಗಾಲಗಳಲ್ಲಿ ಅದು 150 ದಿನಗಳ ಕಾಲ ಉದ್ಯೋಗ ಒದಗಿಸಲಾಗುವುದೆಂದು ಹೇಳುತ್ತಿದ್ದರೂ, ಇದುವರೆಗೆ ಉದ್ಯೋಗ ಖಾತ್ರಿ ಕೆಲಸವೂ ಸರಾಸರಿ ಶೇ 60 ರಷ್ಟು ಉದ್ಯೋಗವನ್ನು ಒದಗಿಸಿಲ್ಲ. ಕೊಟ್ಟಿರುವುದರಲ್ಲೂ ಭ್ರಷ್ಟರ ಪಾಲು ದೊಡ್ಡದಿದೆ.

ಈ ಎಲ್ಲ ಹೊಡೆತಗಳ ಕಾರಣಗಳಿಂದಾಗಿ ಇವರೆಲ್ಲರ ಬಳಿ ಇದ್ದ ಬದ್ದ ಆಸ್ತಿ–ಪಾಸ್ತಿಗಳೆಲ್ಲ ಕರಗಿ ಭೂಮಾಲಕರ/ಬಡ್ಡಿ ವ್ಯಾಪಾರಿಗಳ ಕೈ ಸೇರುತ್ತಿವೆ. ಇದೆಲ್ಲಾ ಗ್ರಾಮೀಣ ಪ್ರದೇಶದಲ್ಲಿ ಒಂದುಕಡೆ ಭೂಮಾಲಕ–ಬಂಡವಾಳಿಗರ ಭಾರೀ ಶ್ರೀಮಂತರನ್ನು ಮತ್ತು ಇನ್ನೊಂದು ಕಡೆ ಸಾಲಬಾಧಿತ ರೈತರ ಹಾಗೂ ಉದ್ಯೋಗ ಕ್ಷೀಣಗೊಂಡ ಕೃಷಿ ಕೂಲಿಕಾರ–





ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದ ಗುಡಿಬಂಡೆಯಲ್ಲಿ ಮೇ 4 ರಂದು ಸಿಪಿಐಎಂ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಪಕ್ಷದ ಅಭ್ಯರ್ಥಿ ಜಿ.ವಿ.ಶ್ರೀರಾಮರೆಡ್ಡಿ, ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ, ಪಕ್ಷದ ಜಿಲ್ಲಾ ಕಾರ್ಯದರ್ಶಿ ಜಯರಾಮರೆಡ್ಡಿ, ಗುಡಿಬಂಡೆ ತಾಲ್ಲೂಕು ಕಾರ್ಯದರ್ಶಿ ಹೆಚ್.ಪಿ.ಲಕ್ಷ್ಮಿನಾರಾಯಣ, ಬಾಗೇಪಲ್ಲಿ ತಾಲ್ಲೂಕು ಕಾರ್ಯದರ್ಶಿ ಚನ್ನರಾಯಪ್ಪ, ರೈತ ಮುಖಂಡರಾದ ಪಿ.ಮಂಜುನಾಥ್ ರೆಡ್ಡಿ ಮುಂತಾದವರು ಇದ್ದರು.






ಬೈಂದೂರು ರೋಡ್ ಶೋ


ಗೌರಿಬಿದನೂರು ಪ್ರಚಾರ

ಕಸುಬುದಾರರ ಭಾರೀ ಬಡವರ ವೃಂದಗಳನ್ನು ನಿರ್ಮಿಸಿದೆ. ಈ ಅಸಮತೋಲನವು ದಲಿತರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ವ್ಯಾಪಕವಾಗಿ ಹೆಚ್ಚಿಸಿವೆ.

ಇದೆಲ್ಲವೂ, ಗ್ರಾಮೀಣ ಪ್ರದೇಶವನ್ನು ಬಹುರಾಷ್ಟ್ರೀಯ ಸಂಸ್ಥೆಗಳ ವಶಕ್ಕೆ ಒಪ್ಪಿಸುವ ನವ ಉದಾರೀಕರಣದ ಭಾಗವಾಗಿಯೇ ನಡೆಯುತ್ತಿದೆ. ವ್ಯವಸಾಯವನ್ನು ರೈತರು ಕೂಲಿಕಾರರ ಕೈಗಳಿಂದ ಕಿತ್ತುಕೊಂಡು ಕಾರ್ಪೋರೇಟ್ ಕಂಪೆನಿಗಳ ಕೈಗೆ, ಕಾರ್ಪೋರೇಟ್ ಕೃಷಿಗೆ ಒಪ್ಪಿಸುವ ದುರುದ್ದೇಶದಿಂದಲೇ ನಡೆಸಲಾಗುತ್ತಿದೆ. ಅದಕ್ಕಾಗಿಯೇ ಗ್ರಾಮೀಣ ಪ್ರದೇಶದಲ್ಲಿ ಸಂಕಷ್ಟಗಳನ್ನು ಹೆಚ್ಚಿಸಲಾಗುತ್ತಿದೆ.

ಮತದಾದ ಬಂಧುಗಳೇ

ನಗರ ಪ್ರದೇಶಗಳ ಕಾರ್ಮಿಕರ ಮತ್ತು ಬಡವರ ಪರಿಸ್ತಿತಿಯೂ ಗ್ರಾಮೀಣ ಪ್ರದೇಶದ ಜನರಿಗಿಂತ ಭಿನ್ನವಾಗಿಯೇನೂ ಇಲ್ಲ. ಅಗತ್ಯ ವಸ್ತುಗಳ ಗಂಭೀರವಾದ ಬೆಲೆ ಏರಿಕೆಯ ಈ ಸಂದರ್ಭದಲ್ಲಿ ಕಾರ್ಮಿಕರ ಹಲವು ಒತ್ತಾಯ ಮತ್ತು ಪ್ರತಿಭಟನೆಗಳ ನಡುವೆಯು, ಅಸಂಘಟಿತ ಕಾರ್ಮಿಕರ ಕನಿಷ್ಟ ವೇತನವನ್ನು 18,000 ರೂಗಳಿಗೆ ಹೆಚ್ಚಿಸುತ್ತಿಲ್ಲ. ಗುತ್ತಿಗೆ ಪದ್ದತಿ ತಗೆದು ಹಾಕಿ ಕಾರ್ಮಿಕರನ್ನು ಖಾಯಂ ಮಾಡುತ್ತಿಲ್ಲ. ಸರಕಾರಗಳೇ ಹಲವು ಅಂಗನವಾಡಿ, ಬಿಸಿಯೂಟ ಆಶಾ ಮುಂತಾದ ಯೋಜನೆಗಳಲ್ಲಿ ಗೌರವಧನಕ್ಕೆ ಮತ್ತು ಇತರೆಡೆ ಹೊರ ಗುತ್ತಿಗೆಯಾಧಾರದಲ್ಲಿ ಕಾರ್ಮಿಕರನ್ನು ಅತ್ಯಂತ ಕಡಿಮೆ ಕೂಲಿಗೆ ದುಡಿಸುತ್ತಿವೆ. ಇದೀಗ ಆ ಸೇವೆಗಳನ್ನು ಕಿತ್ತುಕೊಳ್ಳುವ ಕೆಲಸವನ್ನು ಮಾಡಲಾಗುತ್ತಿದೆ. ಇದರಿಂದ ಲಕ್ಷಾಂತರ ಬಡ ಕುಟುಂಬಗಳು ಆತಂಕದಲ್ಲಿವೆ. ಕಾರ್ಮಿಕರ ಸಂಘಟನೆಯ ಹಾಗೂ ಚೌಕಾಸಿಯ ಹಕ್ಕುಗಳನ್ನು ಬಲಪಡಿಸುವ ಬದಲು ದುರ್ಬಲಗೊಳಿಸಲಾಗುತ್ತಿದೆ. ಕಾರ್ಮಿಕರನ್ನು ತಮ್ಮ ಇಚ್ಛಾನುಸಾರ ನೇಮಿಸಿಕೊಳ್ಳಲು ಮತ್ತು ಉದ್ಯೋಗದಿಂದ ತೆಗೆದು ಹಾಕಲು ಮಾತ್ರವಲ್ಲ ಖಾಯಂ ಕೆಲಸಗಾರರನ್ನು ಕಡಿತಗೊಳಿಸಿಕೊಳ್ಳಲು ಅಗತ್ಯ ಅನುಕೂಲಗಳನ್ನು ಮಾಲೀಕರಿಗೆ ಮಾಡಿಕೊಡಲಾಗುತ್ತದೆ.

ವಿದೇಶಿ ಕೈಗಾರಿಕಾ ಉತ್ಪನ್ನಗಳ ವ್ಯಾಪಕ ಆಮದುಗಳಿಂದಾಗಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚುತ್ತಿವೆ. ದೊಡ್ಡ ಪ್ರಮಾಣದಲ್ಲಿ ಇಲ್ಲಿನ ಕಾರ್ಮಿಕರು ಉದ್ಯೋಗಗಳನ್ನು ಕಳೆದುಕೊಳ್ಳುತ್ತಿದ್ದಾರೆ.

ಉದ್ಯೋಗ ನಿರ್ಮಾಣವೂ ನಿರುದ್ಯೋಗದ ಪ್ರಮಾಣದ ಹೆಚ್ಚಳಕ್ಕೆ ಹೋಲಿಸಿದರೆ ಏನೇನೂ ಅಲ್ಲವಾಗಿದೆ. ಪ್ರತಿವರ್ಷ ಎರಡು ಕೋಟಿ ಉದ್ಯೋಗ ನೀಡುವುದಾಗಿ ಹೇಳಿದ್ದ ಭರವಸೆ ಕೇವಲ ಭರವಸೆಯಾಗುಳಿದಿದೆ. ನಿರುದ್ಯೋಗಿ ಯುವಜನರು ಹಲವು ಸಾಮಾಜಿಕ ಸಂಕಷ್ಟಗಳನ್ನೆದುರಿಸುತ್ತಿದ್ದಾರೆ.

ಶ್ರೀಮಂತರ ಮೇಲಿನ ತೆರಿಗೆಗಳನ್ನು ತ್ರೀವ್ರವಾಗಿ ಕಡಿತಗೊಳಿಸುತ್ತಿರುವಾಗಲೇ, ದುಡಿಯುವ ಜನರ ಮೇಲೆ ಅತಿ ಹೆಚ್ಚಿನ ತೆರಿಗೆಗಳನ್ನು ಹೇರಲಾಗುತ್ತಿದೆ. ಇವೆಲ್ಲವು ರಾಜ್ಯದ ಎಲ್ಲ ದುಡಿಯುವ ಜನರ ಹಾಗೂ ಕಾರ್ಮಿಕರ ಕುಟುಂಬಗಳನ್ನು ತೀವ್ರ ಸಂಕಷ್ಟಕ್ಕೆ ಈಡು ಮಾಡಿವೆ. ಇದೇ ಕಾರಣಗಳಿಂದಾಗಿ, ಮಾಲಿಕರ ಅಥವಾ ಬಂಡವಾಳದಾರರ ಆಸ್ತಿಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಳಗೊಂಡಿವೆ.

ಸರಕಾರಗಳು ದುಡಿಯುವ ಜನತೆಯ ಸಂಕಷ್ಠಗಳನ್ನು ಹೆಚ್ಚಿಸುತ್ತಾ ದುಡಿಸಿಕೊಳ್ಳುವವರ ಆಸ್ತಿಗಳನ್ನು ಬೆಳೆಸುತ್ತಿರುವಾಗಲೇ, ಪ್ರಾಕೃತಿಕ ಸಂಪನ್ಮೂಲಗಳಾದ ಭೂಮಿ, ನೀರು, ಅರಣ್ಯ, ಗಣಿ ಮುಂತಾದವುಗಳಲ್ಲದೇ, ಬ್ಯಾಂಕುಗಳ ಹಾಗೂ ಬಜೆಟಿನ ಹಣಕಾಸು ಸಂಪನ್ಮೂಲಗಳನ್ನು, ದೇಶದ ಹಾಗೂ ಸಾಮಾನ್ಯ ಜನರ ಅಭಿವೃದ್ಧಿಗೆ ಬಳಸದೇ, ದೊಡ್ಡ ಬಂಡವಾಳದಾರರಿಗೆ/ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಗೆ ಬಿಟ್ಟು ಕೊಟ್ಟಿವೆ. ಇದಲ್ಲದೇ, ರೈತರ ಜಮೀನುಗಳನ್ನು ಬಲವಂತವಾಗಿ ಸ್ವಾಧೀನ ಮಾಡಲಾಗುತ್ತಿದೆ ಮಾತ್ರವಲ್ಲಾ ಬಡವರಿಗೆ, ದಲಿತರಿಗೆ ನೀಡಬೇಕಾದ ಸರಕಾರಿ ಜಮೀನುಗಳನ್ನು ಇವರು ಕಬಳಿಸಲು ಬಿಡಲಾಗಿದೆ.

ಈ ಎಲ್ಲಾ ಲೂಟಿಯ ಕಾರಣಗಳಿಂದ ರಾಜ್ಯದಲ್ಲಿ ಭ್ರಷ್ಟಾಚಾರವೂ ಅದರ ಪರಾಕಾಷ್ಠತೆಯನ್ನು ಕಾಣುವಂತಾಗಿದೆ.

ಮತದಾರ ಬಂಧುಗಳೇ

ತೀವ್ರತೆರನಾದ ಈ ಜನವಿರೋಧಿ ವಾತಾವರಣದಿಂದ ಕಂಗೆಟ್ಟ ಜನತೆ ರಾಜ್ಯ ಮತ್ತು ದೇಶದಲ್ಲಿ ವ್ಯಾಪಕವಾದ ಚಳುವಳಿಗಳಲ್ಲಿ ತೊಡಗುತ್ತಿರುವುದರಿಂದ, ಹೆದರಿದ ಈ ಲೂಟಿಕೋರ ಶಕ್ತಿಗಳು, ಜನತೆಯ ಪ್ರತಿರೋಧಗಳನ್ನು ನೇರವಾಗಿ ಹತ್ತಿಕ್ಕಲು ಮತ್ತು ವಿಭಜಿಸಿ ಆಳಲು ಮುಂದಾಗುತ್ತಿವೆ.

ಈ ಕಾರಣದಿಂದ ರಾಜ್ಯದಲ್ಲಿ ಮತಾಂಧ ಶಕ್ತಿಗಳು ವಿಜೃಂಭಿಸುತ್ತಿವೆ. ಮುಖ್ಯವಾಗಿ ಬಿಜೆಪಿ ಮತ್ತು ಸಂಘ ಪರಿವಾರದ ಮತಾಂಧ ಶಕ್ತಿಗಳು ಕರಾವಳಿ ಮತ್ತು ಮಲೆನಾಡು ಹಾಗೂ ಉತ್ತರ ಒಳನಾಡಿನ ಕೆಲವು ಪ್ರದೇಶಗಳನ್ನು ತಮ್ಮ ಪ್ರಯೋಗ ಶಾಲೆಗಳನ್ನಾಗಿ ಮಾಡಿಕೊಂಡಿವೆ. ಗೋರಕ್ಷಣೆಯ ಹೆಸರಿನಲ್ಲಿ ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ಕ್ರಿಮಿನಲ್ ದಾಳಿಗಳನ್ನು ಸಂಘಟಿಸುತ್ತಿವೆ. ಅದೇ ರೀತಿ ಕೊಲೆಗಳನ್ನು ಸಂಘಟಿಸುತ್ತಿವೆ. ಅವರ ಧಾರ್ಮಿಕ ಸಂಸ್ತೆಗಳ ಮೇಲೆ ದಾಳಿಗಳನ್ನು ನಡೆಸುತ್ತಿವೆ. ದೇಶದ ಸಂವಿಧಾನ ಕೊಡ ಮಾಡಿದ ಮತಾಂತರದ ಹಕ್ಕು, ಬದುಕುವ ಹಕ್ಕು, ಆಹಾರದ ಹಕ್ಕು, ವೈವಾಹಿಕ ಹಕ್ಕು, ಸಮಾನತೆಯ ಹಕ್ಕು, ಮೀಸಲಾತಿಯ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳ ಮೇಲೆ ಗಂಭೀರ ದಾಳಿಗಳನ್ನು ಹರಿ ಬಿಡಲಾಗಿದೆ.

ಮತಾಂಧತೆಯನ್ನು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿಗಳನ್ನು ಪ್ರಶ್ನಿಸಿದ ಪ್ರಗತಿಪರ ಸಾಹಿತಿಗಳ ಮೇಲೆ ಹಲ್ಲೆಗಳನ್ನು, ಬೆದರಿಕೆಗಳನ್ನು ಹರಿ ಬಿಡಲಾಗಿದೆ. ಈಗಾಗಲೇ ಇಬ್ಬರು ಗಣ್ಯರನ್ನು ಕೊಲೆ ಗೈಯ್ಯಲಾಗಿದೆ. ಗಣ್ಯರ ಮೂರ್ತಿಗಳನ್ನು ಕಡಿದು ಹಾಕಲಾಗುತ್ತಿದೆ. ಇಂತಹ ದಾಳಿಗಳನ್ನು ಯಾವುದೇ ಮುಜುಗರವಿಲ್ಲದೇ ಸಮರ್ಥಿಸಿಕೊಳ್ಳಲಾಗುತ್ತಿದೆ. ಈ ಎಲ್ಲದರಿಂದ ಕರ್ನಾಟಕದ ಸೌಹಾರ್ದ ವಾತಾವರಣ ಕದಡಲ್ಪಟ್ಟಿದೆ.

ಇದಲ್ಲದೇ ಪ್ರತ್ಯೇಕವಾಗಿ, ಬಿಜೆಪಿ ನೇತೃತ್ವದ ಕೇಂದ್ರ ಸರಕಾರ, ಜಾಗತಿಕ ಶೋಷಣೆಗೆ ಕಾರಣವಾದ ಸಾಮ್ರಾಜ್ಯವಾದಿ ಶಕ್ತಿಗಳ ಅಡಿಯಾಳಾಗುವ ಮೂಲಕ ನಮ್ಮ ಸ್ವತಂತ್ರ ಅಲಿಪ್ತ ವಿದೇಶಾಂಗ ನೀತಿಗೆ ಹಾನಿ ಎಸಗಿ, ದೇಶದ ಜನತೆಯ ತೀವ್ರ ಶೋಷಣೆಗೆ ಕಾರಣವಾಗುತ್ತಿದೆ. ರಾಷ್ಟ್ರದ ಆದಾಯಕ್ಕೆ ದೊಡ್ಡ ಕೊಡುಗೆ ನೀಡುವ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣಕ್ಕೆ ಮುಂದಾಗಿದೆ. ಮಾತ್ರವಲ್ಲಾ, ಎಲ್ಲ ನಾಗರೀಕರು ಒಕ್ಕರಲಿನಿಂದ ವಿರೋಧಿಸಬೇಕಿರುವ ಅತ್ಯಂತ ಅಪಾಯಕಾರಿ ಕ್ರಮವಾದ ವಿರೋಧ-ಮುಕ್ತ ಸರ್ವಾಧಿಕಾರಿ ಭಾರತದ ರಚನೆಗೆ ಕ್ರಮವಹಿಸುತ್ತಿದೆ.

ಆಳುವ ಕಾಂಗ್ರೆಸ್ ಪಕ್ಷ ಮತ್ತು ರಾಜ್ಯ ಸರಕಾರಗಳು ಇವುಗಳನ್ನು ನಿಗ್ರಹಿಸಿ ರಾಜ್ಯದ ಸೌಹಾರ್ದತೆಯನ್ನು ರಕ್ಷಿಸಲು ಕ್ರಮಗಳನ್ನು ವಹಿಸುವಲ್ಲಿ ವಿಫಲವಾಗಿದೆ. ಮಾತ್ರವಲ್ಲಾ, ಈ ಕುರಿತು ಮೃದು ಧೋರಣೆ ತಾಳುತ್ತಿದೆ. ಇದರಲ್ಲಿ ದಲಿತರು ಮತ್ತು ಅಲ್ಪಸಂಖ್ಯಾತರ ಮತಗಳಿಕೆಯ ಲಾಭದ ಲೆಕ್ಕಾಚಾರ ಮಾಡುತಿವೆ.

ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಗಳು ರಾಜ್ಯ ಹಾಗೂ ಕೇಂದ್ರ ಸರಕಾರಗಳ ಆಡಳಿತದಲ್ಲಿದ್ದು, ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಭೂಮಾಲಕ -ಬಂಡವಾಳದಾರರ ಪರವಾದ ನೀತಿಗಳನ್ನು ಜಾರಿ ಮಾಡಲು ತೊಡಗಿ ರಾಜ್ಯದ ನೈಜ ಅಭಿವೃದ್ದಿಯ ಕಡು ವಿರೋಧಿಯಾಗಿವೆ.

ಆದರೇ ಈ ಕುರಿತು ಗಂಭಿರವಾಗಿ ಪರಿಗಣಿಸಿದ ಸಿಪಿಐ(ಎಂ) ಸೌಹಾರ್ದತೆಯ ರಕ್ಷಣೆಗಾಗಿ, ಅಲ್ಪಸಂಖ್ಯಾತರು ಮತ್ತು ದಲಿತರ ಹಾಗೂ ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ, ತಾರತಮ್ಯದ ಹಾಗೂ ಜಾತಿ ಹಾಗೂ ಲಿಂಗ ದೌರ್ಜನ್ಯದ ವಿರುದ್ದ ಚಳುವಳಿಯಲ್ಲಿ ತೊಡಗಿಸಿಕೊಂಡಿದೆ. ಅದೇ ರೀತಿ, ಸೌಹಾರ್ದ ಕರ್ನಾಟಕವು ರಾಜ್ಯದಾದ್ಯಂತ ಸಂಘಟಿಸಿದ ಮಾನವ ಸರಪಳಿಯ ಯಶಸ್ವಿಗೆ ಸಕ್ರಿಯವಾಗಿ ದುಡಿದಿದೆ. ಮಾತ್ರವಲ್ಲಾ, ದುಡಿಯುವ ಜನರ ಹಾಗೂ ರಾಜ್ಯದ ನೈಜ ಅಭಿವೃದ್ದಿಗಾಗಿ, ಕನಿಷ್ಠ ವೇತನಕ್ಕಾಗಿ, ದಲಿತರು ಹಾಗೂ ಕೃಷಿಯಲ್ಲಿ ಆಸಕ್ತಿ ಹೊಂದಿದ ಎಲ್ಲರಿಗೆ ತಲಾ 5 ಎಕರೆ ಜಮೀನಿಗಾಗಿ, ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ, ಎಲ್ಲಾ ಬಡವರಿಗೆ ಹಿತ್ತಲು ಸಹಿತ ಉಚಿತ ಮನೆಗಾಗಿ, ವಿದ್ಯಾರ್ಥಿ- ಯುವಜನರ ಸಮಸ್ಯೆಗಳ ಪರಿಹಾರಕ್ಕಾಗಿ, ನಗರದ ನಾಗರೀಕ ಸೌಲಭ್ಯಗಳಿಗಾಗಿ, ಜನವಿರೋಧಿ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ವಿರುದ್ದ ರಾಜ್ಯದಾದ್ಯಂತ ಚಳುವಳಿಯಲ್ಲಿ ತೊಡಗಿ ಜನಪರವಾಗಿ ನಿಂತಿದೆ.

ಮತದಾರ ಬಂಧುಗಳೇ,

ಈ ಹಿನ್ನೆಲೆಯಲ್ಲಿ, ಬಹುರಾಷ್ಟ್ರೀಯ ಸಂಸ್ಥೆಗಳ ಮತ್ತು ಭೂಮಾಲಕ-ಬಂಡವಾಳದಾರರ ಪರವಾದ ಮತ್ತು ಎಲ್ಲ ದುಡಿಯುವ ಜನರ ಹಾಗೂ ರಾಜ್ಯದ ನೈಜ ಅಭಿವೃದ್ಧಿಯ ವಿರೋಧಿಯಾಗಿರುವ, ಜಾಗತೀಕರಣದ ನೀತಿಗಳನ್ನೇ ಜಾರಿಗೊಳಿಸುವ ಉದ್ದೇಶ ಹೊಂದಿರುವ ಕಾಂಗ್ರೆಸ್, ಬಿಜೆಪಿ, ಹಾಗೂ ಜೆಡಿಎಸ್ ಪಕ್ಷಗಳೇ ಈ ಚುನಾವಣೆಯಲ್ಲೂ ಪ್ರಮುಖ ರಾಜಕೀಯ ಶಕ್ತಿಗಳಾಗಿ ಜನರ ಮುಂದಿವೆ. ಜನಪರವಾದ ಪರ್ಯಾಯ ನೀತಿಗಳನ್ನು ಜಾರಿಗೊಳಿಸುವ ಉದ್ದೇಶ ಹೊಂದಿದ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಪರ್ಯಾಯ ರಾಜಕೀಯ ಶಕ್ತಿ ರಾಜ್ಯದಲ್ಲಿ ದುರ್ಬಲವಾಗಿರುವುದರಿಂದ, ಜನವಿರೋಧಿ ರಾಜಕೀಯ ಶಕ್ತಿಗಳಲ್ಲಿಯೇ ಆಯ್ಕೆ ಮಾಡಿಕೊಳ್ಳುವ ಕೆಟ್ಟ ಸ್ಥಿತಿ ಈ ಚುನಾವಣೆಯಲ್ಲಿ ನಮ್ಮ ಮತದಾರರ ಮುಂದಿರುವುದು ಖೇದಕರವಾಗಿದೆ. ಜನ ವಿರೋಧಿ ಪಕ್ಷಗಳಲ್ಲಿಯೇ ಅತ್ಯಂತ ಜನವಿರೋಧಿಯಾದ, ಮತಾಂಧ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿ ಮಾಡುತ್ತಿರುವ ಬಿಜೆಪಿಯನ್ನು ಸೋಲಿಸುವುದು ನಮ್ಮ ಮುಂದಿರುವ ತುರ್ತಾದ ಪ್ರಮುಖ ಕರ್ತವ್ಯವಾಗಿದೆ.

ಅದೇ ರೀತಿ, ಸಿಪಿಐ(ಎಂ) ಎಡ ಮತ್ತು ಪ್ರಗತಿಪರ ಶಕ್ತಿಗಳು ಜಾಗತೀಕರಣದ ಜನ ವಿರೋಧಿ ನೀತಿಗಳ ವಿರುದ್ಧ ತೀವ್ರ ಚಳುವಳಿಗಳನ್ನು ಸಂಘಟಿಸಲು ರಾಜ್ಯದಲ್ಲಿ ಮುಂಚೂಣಿಯಲ್ಲಿದ್ದರೂ ಅವುಗಳ ಧ್ವನಿಯೂ ವಿಧಾನ ಸೌಧದಲ್ಲಿ ಕೇಳಿ ಬರುತ್ತಿಲ್ಲ. ಯಾಕೆಂದರೆ ಅವುಗಳಿಗೆ ಅಲ್ಲಿ ಸ್ಥಾನಗಳಿಲ್ಲವಾಗಿವೆ. ಹೀಗಾಗಿ ಈ ಕೊರತೆಯನ್ನು ನೀಗಿಸಲು ಮತದಾರರು, ಸೌಹಾರ್ದತೆಯ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಮತ್ತು ಜನಪರ ಆರ್ಥಿಕ ಪರ್ಯಾಯ ನೀತಿಗಳಿಗಾಗಿನ ಹೋರಾಟವನ್ನು ಬಲಗೊಳಿಸುವ ಉದ್ದೇಶದಿಂದ, ವಿಧಾನ ಸೌಧದಲ್ಲಿ ಜನಪರ ಧ್ವನಿ ಮೊಳಗಿಸಲು ರಾಜ್ಯದಾದ್ಯಂತ ಒಟ್ಟು 19 ಸಿಪಿಐ(ಎಂ) ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಿದೆ.

ಈ ಎರಡು ರಾಜಕೀಯ ಕರ್ತವ್ಯಗಳನ್ನು ಪೂರೈಸುವಂತೆ ನಾನು ತಮ್ಮಲ್ಲಿ ಮನವಿ ಮಾಡುವಾಗಲೇ ಬಿಜೆಪಿಯನ್ನು ಸೋಲಿಸುವುದು ಮತ್ತು ಸಿಪಿಐ(ಎಂ)ನ್ನು ಗೆಲ್ಲಿಸುವುದು ಅಷ್ಟು ಮಾತ್ರವೇ ಅಲ್ಲಾ ಮುಂಬರುವ ಸರಕಾರಗಳ ಜನ ವಿರೋಧಿ ಜಾಗತೀಕರಣದ ನೀತಿಗಳನ್ನು ವ್ಯಾಪಕವಾಗಿ ಪ್ರತಿರೋಧಿಸಿ, ಹಿಮ್ಮೆಟ್ಟಿಸಲು, ಮತದಾರರು ದೊಡ್ಡ ಪ್ರಮಾಣದಲ್ಲಿ ಜನ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಪರವಾಗಿ ಮನವಿ ಮಾಡಿಕೊಳುತ್ತೇನೆ.


ಶ್ರೀನಿವಾಸಪುರ ಪ್ರಚಾರ


ಮಂಗಳೂರು- ಉಳ್ಳಾಲ ಪ್ರಚಾರ

ಹಗರಿಬೊಮ್ಮನಹಳ್ಳಿ : ಹೋರಾಟಗಾರ್ತಿ ಬಿ. ಮಾಳಮ್ಮ ಸ್ಪರ್ಧೆ

ಭ್ರಷ್ಟ ರಾಜಕೀಯದ ನಡುವೆ ವಿಶ್ವಾಸದ ಅಲೆ

ರಂಗಪ್ಪ ದಾಸರ್, ಎಸ್.ವೈ.ಗುರುಶಾಂತ್

ಬಳ್ಳಾರಿ ಜಿಲ್ಲೆಯ, 89–ಹಗರಿಬೊಮ್ಮನಹಳ್ಳಿ (ಮೀಸಲು) ವಿಧಾನ ಸಭಾ ಕ್ಷೇತ್ರ ಭ್ರಷ್ಟ ರಾಜಕೀಯ ಪಕ್ಷಗಳ ನಾಯಕರ ಜಿದ್ದಾಜಿದ್ದಿಯಲ್ಲಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ದಲಿತ ಮಹಿಳೆ ಬಿ. ಮಾಳಮ್ಮ ಹೋರಾಟಗಾರ್ತಿಯಾಗಿ ಈಗ ಕ್ಷೇತ್ರದಲ್ಲಿ ಕುತೂಹಲ ಸೃಷ್ಟಿಸಿದ್ದಾರೆ.

ಜನತಾದಳಲ್ಲಿ ಗೆದ್ದು ನಡುವೆ ಕಾಂಗ್ರೆಸ್ ಸೇರಿ, ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಭೀಮಾನಾಯಕ, ಬಿಜೆಪಿಯಿಂದ ನೇಮಿರಾಜ್ ನಾಯಕ, ಜನತಾದಳದಿಂದ ಕೃಷ್ಣನಾಯಕ, ಎಸ್.ಸಿ ಮೀಸಲಾಗಿರುವ ಈ ಕ್ಷೇತ್ರದಲ್ಲಿ ಈ ಮೂವರು ಸ್ಪರ್ದಾಳುಗಳು ಲಂಬಾಣಿ ಸಮೂಹಕ್ಕೆ ಸೇರಿದವರಾಗಿದ್ದಾರೆ. ಕಾಂಗ್ರೆಸ್ ಇಲ್ಲಿ ಅಸ್ಪೃಶ್ಯರಾದವರಿಗೆ ಅವಕಾಶ ನೀಡುವುದಾಗಿ ಭರವಸೆ ನೀಡಿತ್ತು. ಈಗ ಇದು ಸುಳ್ಳಾಗಿದೆ. ಅಸ್ಪೃಶ್ಯ, ದಲಿತ ಮಹಿಳೆಯಾಗಿರುವ ಕಾಂ.ಬಿ.ಮಾಳಮ್ಮನವರಿಗೆ ಸಿಪಿಎಂ ಅವಕಾಶ ನೀಡಿರುವ ವಿಷಯ ರಾಜಕೀಯ ವಲಯದಲ್ಲಿ ಚರ್ಚೆ ಹುಟ್ಟು ಹಾಕಿದೆ. ಕಾಂಗ್ರೆಸ್, ಬಿಜೆಪಿ, ಜೆಡಿ ಎಸ್ ಪಕ್ಷಗಳ ವರ್ತನೆ ದಲಿತರಲ್ಲಿ ತೀವ್ರ ಅತೃಪ್ತಿಯನ್ನುಂಟು ಮಾಡಿದೆ.



ಕ್ಷೇತ್ರದ ಪರಿಸ್ಥಿತಿ

ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರ ತುಂಗಾಭದ್ರ ನದಿಯ ಹಿಂಬಾಗದಲ್ಲಿರುವ ತಾಲೂಕು ಪ್ರದೇಶವಾಗಿದೆ. ಹಿಂದೆ ತುಂಗಭದ್ರಾ ನದಿಗೆ ಆಣೆಕಟ್ಟು ಕಟ್ಟುವಾಗ ಆ ಭಾಗದಲ್ಲಿ ಮುಳುಗಡೆಯಾದ ಕೆಲವು ಹಳ್ಳಿಗಳನ್ನು ಎತ್ತಂಗಡಿ ಮಾಡಿ ಪುನರ್ ವಸತಿ ಕಲ್ಪಿಸಿದ ಪ್ರದೇಶವಿದು. ಅಕ್ಕ ಪಕ್ಕದಲ್ಲಿ ಅಪಾರ ನೀರಿದ್ದರೂ ವ್ಯವಸಾಯಕ್ಕೆ ನೀರಿಲ್ಲ. ಬಹುತೇಕ ಕ್ಷೇತ್ರ ಮಳೆಯಾವಲಂಬಿತ ಪ್ರದೇಶವಾಗಿದೆ. ಬಹುತೇಕವಾಗಿ ರೈತರು ಅದರಲ್ಲಿ ಪ್ರಮುಖವಾಗಿ ಬಡರೈತರು, ಕೂಲಿಕಾರರು ಇರುವ ಪ್ರದೇಶವಾಗಿದೆ. 2 ಲಕ್ಷದಷ್ಟಿರುವ ಮತದಾರರನ್ನು ಹೊಂದಿರುವ ಈ ಕ್ಷೇತ್ರ, ಈಗಲೂ ನೀರಾವರಿ ಪ್ರದೇಶವಾಗದೇ ಯಾವುದೇ ಕೈಗಾರಿಕೆಗಳಿಲ್ಲದೆ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ದೊಡ್ಡ ಊರುಗಳೆಂದರೆ ತಾಲೂಕಾಗಿರುವ ಐತಿಹಾಸಿಕ ಕೊಟ್ಟೂರು ಪಟ್ಟಣ, ಮರಿಯಮ್ಮನಹಳ್ಳಿ, ತಂಬ್ರಹಳ್ಳಿ, ಭೂಹೀನರು ಅಧಿಕವಿದ್ದಾರೆ. ಇವರು ಲಮಾಣಿ, ದಲಿತರು ಹಾಗೂ ವಾಲ್ಮೀಕಿ ಸಮುದಾಯಕ್ಕೆ ಸೇರಿದವರು ಹೆಚ್ಚು. ಸಾಮಾಜಿಕವಾಗಿ ಜಾತಿ ಹಿನ್ನೆಲೆಯನ್ನು ನೋಡುವುದಾದರೆ, ಒಂದು ಅಂದಾಜಿನಂತೆ ದಲಿತರು ಎಸ್.ಸಿ– 40,000, ಎಸ್.ಟಿ–ವಾಲ್ಮಿಕಿ–35,000, ಕುರುಬರು–30,000, ಲಮಾಣಿ–16,000 ಅಲ್ಪಸಂಖ್ಯಾತರು–16000, ಲಿಂಗಾಯತರು 26,000 ಇದ್ದಾರೆಂಬ ಅಂದಾಜಿದೆ.

ಹೈದ್ರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶಗಳ ಪಟ್ಟಿಗೆ ಸೇರಿರುವ ಈ ತಾಲೂಕು, ತುಂಗಭದ್ರ ಹಿನ್ನೀರನ್ನು ಸಮರ್ಪಕವಾಗಿ ಬಳಸಲಾಗಿಲ್ಲ ಎಂಬ ಖೇದವನ್ನು ಡಾ.ನಂಜುಂಡಪ್ಪ ಅಧ್ಯಯನ ವರದಿಯಲ್ಲಿ ತಿಳಿಸಲಾಗಿದೆ. ಹಿನ್ನೀರಿನ ಬಳಕೆಗೆ ಸಾಕಷ್ಟು ಏತ ನೀರಾವರಿಗಳನ್ನು ಬಳಸಲು ಅವಕಾಶವಿದ್ದರೂ ಮಾಡಲಾಗಲಿಲ್ಲ. ಇರುವ 2–3 ಏತ ನೀರಾವರಿಗಳಿದ್ದರೂ ಇವು ಕೂಡ ನೆನೆಗುದಿಗೆ ಬಿದ್ದು ಹೆಸರುಗಳು ಮಾತ್ರ ಚಾಲ್ತಿಯಲ್ಲಿದೆ. 2887 ಎಕರೆ ಭೂಮಿಗೆ ನೀರುಣಿಸುವ ಮಾಲವಿ ಜಲಾಶಯ ಶಾಶ್ವತ ನೀರಾವರಿ ಯೋಜನೆ, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಸಿಪಿಐ(ಎಂ) ಪಕ್ಷದ ಹೋರಾಟದಿಂದಾಗಿ ಮುಂಚೂಣಿಗೆ ಬಂದಿದೆ. ಸತತ 30 ವರ್ಷಗಳಿಂದ ಇದನ್ನೇ ಇಟ್ಟುಕೊಂಡು ರಾಜಕಾರಣ ಮಾಡಿ ಶಾಸಕರಾದವರು ಇಲ್ಲಿಯವರೆಗೂ ಈ ಯೋಜನೆಯನ್ನು ಜಾರಿ ಮಾಡಲೇ ಇಲ್ಲ. ಈ ಬಾರಿಯ ಬಜೆಟ್‌ನಲ್ಲಿ 150 ಕೋಟಿ ರೂಗಳನ್ನು ಮೀಸಲಿಡಿಸಿದರೂ ಕಾಮಗಾರಿ ಪ್ರಾರಂಭವಾಗಿಲ್ಲ.

ಈ ಭಾಗದಲ್ಲಿ ಕೃಷಿ ಚಟುವಟಿಕೆಗಳೇ ಪ್ರಧಾನ. ಜೋಳ, ಶೇಂಗಾ, ಸೂರ್ಯಕಾಂತಿ, ಅಕ್ಕಡಿ ಕಾಳು, ಕಬ್ಬು, ಭತ್ತ ಇತ್ಯಾದಿ ಬಿಟ್ಟರೆ ಇತ್ತೀಚಿನ ವರುಷಗಳಲ್ಲಿ ತೋಟಗಳ ಅಭಿವೃದ್ದಿಯೂ ಅಲ್ಲಲ್ಲಿ ನಡೆದಿದೆ. ವಿಶೇಷವಾಗಿ, ಮಲ್ಲಿಗೆ, ಗುಲಾಬಿ ಹೂಗಳಲ್ಲದೇ ದಾಳಿಂಬೆ ಹಣ್ಣಿನ ಬೆಳೆಯುತ್ತಲೂ ಕೆಲ ರೈತರು ಗಮನ ಹರಿಸಿದ್ದಾರೆ. ರೇಷ್ಮೆ ಬೆಳೆ ಆರಂಭವಾಗಿದೆ. ತರಕಾರಿ ಸಾಮಾನ್ಯ. ಕೃಷಿ ಫಸಲಿನ ಆಧಾರಿತ ಮಾರುಕಟ್ಟೆ ಹಿಂದಿನಂತೆ ಈಗಿಲ್ಲ. ಇಲ್ಲಿ ಕೈಗಾರಿಕೆಗಳೆಂದರೆ ಇದ್ದದ್ದೇ ಅಡಿಗೆ ಎಣ್ಣೆ ಉತ್ಪಾದಿಸುತ್ತಿದ್ದ ಮಿಲ್‌ಗಳು. ಮಂಡಾಳು ಬಟ್ಟಿಗಳು. ಉದಾರೀಕರಣದ ಪ್ರಕ್ರಿಯೆಯಲ್ಲಿ ಆಯಿಲ್ ಮಿಲ್‌ಗಳೆಲ್ಲಾ ಮುಚ್ಚಿ ಹೋದವು. ವ್ಯಾಪಾರ ವಹಿವಾಟು ಕುಸಿದಿದೆ. ಹೀಗಾಗಿ ಕೃಷಿ ರಂಗವೇ ಉದ್ಯೋಗದಾತ. ಇಲ್ಲವಾದಲ್ಲಿ ಉದ್ಯೋಗ ಹುಡುಕಿ ಗುಳೇ ಹೋಗುವುದೊಂದೇ ದಾರಿ.

ಈ ನಡುವೆ ಹಗರಿಬೊಮ್ಮನಹಳ್ಳಿ ತಾಲೂಕನ್ನು ಕೈಗಾರಿಕಾ ವಲಯವಾಗಿ ಅಭಿವೃದ್ಧಿ ಪಡಿಸುವುದಾಗಿ ಘೋಷಿಸಿದ್ದರೂ ಒಂದು ಸಣ್ಣ ಸ್ಟೀಲ್ ಫ್ಯಾಕ್ಟರಿ ಬಿಟ್ಟರೆ ಅದರಲ್ಲಿ ಪ್ರಗತಿ ಇಲ್ಲ. ಈ ಕ್ಷೇತ್ರಕ್ಕೆ ಸಂಬಂಧಿಸಿದ ಮರಿಯಮ್ಮನಹಳ್ಳಿಯ ಡಣಾಪುರದಲ್ಲಿ ಸ್ಟೀಲ್ ಕಾರ್ಖಾನೆ ಆರಂಭಗೊಂಡಿದೆ. ಇದು ಹೊಸಪೇಟೆಗೆ ಹತ್ತಿರದ ಪ್ರದೇಶ. ತಾಲೂಕು ಪ್ರದೇಶಕ್ಕೆ ಸಾವಯವ ಸಂಬಂಧಗಳು ಕಡಿಮೆ.



ಹೀಗಾಗಿ, ಹ.ಬೊ. ಅತ್ಯಂತ ಹಿಂದುಳಿದ ಈ ಕ್ಷೇತ್ರ ಪಾಳೇಗಾರಿ ಮೌಲ್ಯಗಳನ್ನು ತಬ್ಬಿಕೊಂಡು, ಜಾತಿ ಪದ್ದತಿ, ದೇವದಾಸಿಯಂತಹ ಅನಿಷ್ಟ ಪದ್ದತಿಗಳನ್ನು ಮೈಗೂಡಿಸಿಕೊಂಡಿದೆ. ಪರಿಶಿಷ್ಟ ಜಾತಿಗೆ ಸೇರಿದ ದಲಿತರೇ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಇವರು ಆರ್ಥಿಕವಾಗಿ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದ್ದಾರೆ. ಅಸ್ಪೃಶ್ಯತೆ ತಾಲೂಕಿನಲ್ಲಿ ವಿವಿಧ ಸ್ವರೂಪದಲ್ಲಿ ಜೀವಂತವಾಗಿದೆ. ಕ್ಷೇತ್ರದಲ್ಲಿ ಸುಮಾರು 2000 ದೇವದಾಸಿ ಮಹಿಳೆಯರು ಇದ್ದಾರೆ. ದಲಿತರಿಗೆ ಭೂಮಿ ಇಲ್ಲ. ಸುಮಾರು 3000 ದಷ್ಟು ದಲಿತ ಕುಟುಂಬಗಳು ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಪಟ್ಟಕ್ಕಾಗಿ ಕಾಯುತ್ತಿದ್ದಾರೆ.

ಬದಲಾವಣೆಯ ಹೋರಾಟಗಳು

ಈ ಭಾಗದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಪಿಎಂ ಪಕ್ಷ ರೈತರು, ದಲಿತರ ನಡುವೆ ಗಂಭೀರ ಪ್ರಶ್ನೆಗಳನ್ನೆತ್ತಿಕೊಂಡು ಹೋರಾಟ ಮಾಡಿವೆ. ದೇವದಾಸಿ ಮಹಿಳೆಯರ ಸಂಘಟನೆ ಅತ್ಯಂತ ಪ್ರಬಲವಾಗಿ ಕೆಲಸ ಮಾಡುತ್ತಿದೆ. ದೇವದಾಸಿಯರೇ ಇಲ್ಲವೆನ್ನುವ ಸರಕಾರದ ಸುಳ್ಳನ್ನು ಸಂಘವು ಬಯಲು ಮಾಡಿತು. ದೇವದಾಸಿ ಮಹಿಳೆಯರನ್ನು ಪಟ್ಟಿಯಲ್ಲಿ ಸೇರಿಸಲು ನಿರಂತರ ಹೋರಾಟಗಳನ್ನು ನಡೆಸಲಾಯಿತು. ಇವರ ಹೋರಾಟ ಪೆನ್ಷನ್ ಜಾರಿಯಾಗಲು ಸಾಧ್ಯವಾಗಿದೆ. ಪ್ರಾರಂಭದಲ್ಲಿ 300 ರೂಪಾಯಿಗಳಿದ್ದ ಪೆನ್ಷನ್ ಈಗ 1500 ರೂ. ಗಳಾಗಿವೆ. 1350 ಮನೆಗಳನ್ನು ಮುಂಜೂರು ಮಾಡಿಸುವಲ್ಲಿ ಯಶಸ್ವಿಯಾಗಿದೆ. ಇದು ಸಂಘಟನೆಯ ಹೋರಾಟದ ಪ್ರತಿಫಲ ಎಂಬುದು ಪ್ರತಿ ದೇವದಾಸಿ ಮಹಿಳೆಯರಿಗೆ ಗೊತ್ತಿರುವ ವಿಚಾರವಾಗಿದೆ. ದೇವದಾಸಿ ಮಹಿಳೆಯರ ಮಕ್ಕಳನ್ನು ಸಂಘಟಿಸಿ ಭೂಮಿ, ಉದ್ಯೋಗ ಪ್ರಶ್ನೆಯನ್ನು ಕೈಗೆತ್ತಿಕೊಂಡು ಹೋರಾಟ ನಡೆಸಲಾಗಿದೆ. ಅದರಲ್ಲಿ ಪ್ರಮುಖವಾಗಿ ಸರ್ಕಾರಿ ಜಮೀನು ಸಾಗುವಳಿ ಮಾಡುತ್ತಿರುವ ದಲಿತರಿಗೆ ಪಟ್ಟ ನೀಡಬೇಕೆಂಬುದು ಪ್ರಮುಖ ಬೇಡಿಕೆಯಾಗಿದೆ.

ಚಿಲವಾರು ಬಂಡಿ ಏತ ನೀರಾವರಿ ಪ್ರಾತ ರೈತ ಸಂಘ ಮತ್ತು ಇತರೆ ಹಲವರು ಸಾಮೂಹಿಕ ಸಂಘಟನೆಗಳ ಹೋರಾಟದ ಪ್ರತಿಫಲ. ಕಟ್ಟಡ ಕಾರ್ಮಿಕರು, ಅಂಗನವಾಡಿ ನೌಕರರು, ಬಿಸಿಯೂಟ ನೌಕರರು, ರಸ್ತೆ ಬದಿಯ ವ್ಯಾಪಾರಸ್ಥರು, ಪಂಚಾಯ್ತಿ ನೌಕರರ ನಡುವೆ ಹೋರಾಟಗಳನ್ನು ನಡೆಸಲಾಗಿದೆ. ಉದ್ಯೋಗ ಖಾತ್ರಿ ಕೂಲಿಯ ಪ್ರಶ್ನೆಯನ್ನು ತಾಲೂಕಿನಲ್ಲಿ ಪ್ರಮುಖವಾಗಿ ಮುಂಚೂಣಿಗೆ ತಂದಿದ್ದು ಸಿಪಿಎಂ ಪಕ್ಷ, ಸಾವಿರಾರು ಕೂಲಿಕಾರರಿಗೆ ತಾಲೂಕಿನಲ್ಲಿ ಕೆಲಸ ಕೊಡಿಸಲು ಸಾಧ್ಯವಾಗಿದೆ.

ದುಡಿಯುವ ವರ್ಗದ ರಾಜಕಾರಣ

ಇಲ್ಲಿ 1980 ರ ದಶಕದಿಂದಲೇ ಎಸ್.ಎಫ್.ಐ, ಕರ್ನಾಟಕ ಪ್ರಾಂತ ರೈತ ಸಂಘ, ಬಂಡಾಯ ಸಾಹಿತ್ಯ ಸಂಘಟನೆಗಳ ಮೂಲಕ ಚಟುವಟಿಕೆಗಳು ಆರಂಭವಾದವು. ಶೈಕ್ಷಣಿಕ ಸಮಸ್ಯೆಗಳು, ಭೂಮಿ, ನಿವೇಶನ, ರಸ್ತೆ, ನೀರಾವರಿ, ವಿದ್ಯುತ್ ಸಂಬಂಧಿತವಾದ ಹಲವಾರು ಚಟುವಟಿಕೆ, ರೈತರ ಬೃಹತ್ ಹೋರಾಟಗಳನ್ನು ಸಂಘಟಿಸಿದ ಇತಿಹಾಸವಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಕೆಳ ಸ್ಥರದ ಸಮುದಾಯಗಳ ಸಂಕಷ್ಟಗಳು, ನೋವುಗಳಿಗೆ ಮಿಡಿದು, ಹೋರಾಡಿದ ಪರಿಣಾಮ ನೆಲೆಯನ್ನು ರೂಪಿಸಲು ಸಾಧ್ಯವಾಗಿದೆ. ಇಂತಹ ಚಟುವಟಿಕೆಗಳ ಮೂಲಕ ಸಿಪಿಎಂ ಪಕ್ಷ ದುಡಿಯುವ ಜನರ ಪಕ್ಷವಾಗಿ ಗುರ್ತಿಸಿಕೊಂಡಿದೆ. ಪಕ್ಷದ ಬಗ್ಗೆ ದುಡಿಯುವ ಜನರಲ್ಲಿ ಅಭಿಮಾನ ಇದೆ.

ಇಂತಹ ಹಲವಾರು ಹೋರಾಟಗಳ ಹಿನ್ನೆಲೆಯಲ್ಲಿ 1994 ರಲ್ಲಿ ಸಿಪಿಐ(ಎಂ) ಪಕ್ಷವು ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಲ್ಲಿ ಅಭ್ಯರ್ಥಿಯನ್ನು (ಜಿ.ಎಂ.ವೀರಸಂಗಯ್ಯ) ಕಣಕ್ಕಿಳಿಸಿತ್ತು. 6999 ಮತಗಳನ್ನು ಪಡೆದು ಠೇವಣಿ ಉಳಿಸಿಕೊಂಡು ಮೂರನೆಯ ಸ್ಥಾನವನ್ನು ಪಡೆದು ಜನತೆಯ ಗಮನ ಸೆಳೆದಿತ್ತು.

ಇಂದಿನ ಸ್ಥಿತಿ

2008 ರಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆಯಾದಾಗ ಹ.ಬೊ.ಹಳ್ಳಿ ಕ್ಷೇತ್ರ ರಚಿತವಾಯಿತು. ಕಳೆದ ಚುನಾವಣೆಯಲ್ಲಿ ಒಟ್ಟು ಮತದಾರರು 1,79,885. ಪು–91,794, ಮ–88,084. ಚಲಾಯಿಸಿದ್ದು 1,44,826 (ಶೇ.80.51). ಜೆಡಿ–ಎಸ್ ನ ಅಭ್ಯರ್ಥಿಯಾಗಿದ್ದ ಭೀಮಾನಾಯ್ಕ ಚುನಾಯಿತರಾದರು. ಗಮನಿಸಬೇಕಾದ ಅಂಶವೆಂದರೆ ಇಲ್ಲಿ ಜೆಡಿ–ಎಸ್ ಕೂದಲೆಳೆಯ ಅಂತರದಲ್ಲಿ ಗೆದ್ದಿದೆ. ಜೆಡಿ ಎಸ್–51,972 (35.89 %) ಮತಗಳನ್ನು ಪಡೆದರೆ ಬಿಜೆಪಿಯ ನೇಮಿರಾಜ ನಾಯ್ಕ–51,847 (35.8 %). ಆಗ ಬಿಜೆಪಿ ಯಿಂದ ಸಿಡಿದು ಹೋದ ಕೆಜೆಪಿ–5,836 (4.03 %), ಬಿ.ಎಸ್.ಆರ್. ಪಕ್ಷ–2,555 (1.7 %) ಕಾಂಗ್ರೆಸ್ –23,860 (16.49 %) ಪಡೆದಿದ್ದವು. ಈ ಬಾರಿ ಬಿಜೆಪಿ ಬಣಗಳು ಒಂದಾಗಿವೆ.

ಈ ಬಾರಿ ಕಣದಲ್ಲಿ ಬಿಜೆಪಿ–ನೇಮಿರಾಜನಾಯ್ಕ, ಕಾಂಗ್ರೆಸ್–ಭೀಮಾ ನಾಯ್ಕ, ಜೆ.ಡಿ. ಎಸ್ ನಿಂದ– ಕೃಷ್ಣಾ ನಾಯ್ಕ, ಸಿಪಿಐ(ಎಂ) ನಿಂದ ಕಾಂ.ಬಿ, ಮಾಳಮ್ಮ ಅವರ ಸ್ಪರ್ದೆ ಪ್ರಮುಖವಾಗಿದೆ. ಅಲ್ಲದೇ ಸಿಪಿಐ (ಎಂ–ಎಲ್) ಲಿಬರೇಷನ್, ಫಾರ್ವರ್ಡ್ ಬ್ಲಾಕ್, ಆರ್.ಪಿ.ಐ, ಮಹಿಳಾ ಎಂಪವರ್ ಪಕ್ಷಗಳೂ ಸ್ಪರ್ದಿಸಿವೆ.

ಬಿಜೆಪಿ ಪಕ್ಷದ ಹಿಂದೆ ಆರ್‌ಎಸ್‌ಎಸ್ ಅತ್ಯಂತ ಕ್ರಿಯಾಶೀಲವಾಗಿದೆ. ಬಳ್ಳಾರಿ ಜಿಲ್ಲೆಯಲ್ಲೇ ಹಗರಿಬೊಮ್ಮನಹಳ್ಳಿ ಹಿಂದಿನಿಂದಲೂ ಆರ್.ಎಸ್.ಎಸ್. ನ ಪ್ರಮುಖ ಕೇಂದ್ರ. ಅದಕ್ಕೆ ಇದ್ದದ್ದು ಬ್ರಾಹ್ಮಣರ ಜೊತೆ ವಣಿಕ ಸಮುದಾಯದ ಗಟ್ಟಿ ಬೆಂಬಲ. ಇತ್ತೀಚಿನ ದಶಕಗಳಲ್ಲಿ ಅದು ತನ್ನ ಸಾಮಾಜಿಕ ನೆಲೆಯನ್ನೂ ವಿಸ್ತರಿಸಿಕೊಳ್ಳುತ್ತಿದೆ. ಇಲ್ಲಿ ಆರೆಸ್ಸೆಸ್‌ನ ರಾಜ್ಯ, ರಾಷ್ಟ್ರ ಮಟ್ಟದ, ತರಬೇತಿ ಶಿಬಿರಗಳು ನಡೆಯುತ್ತವೆ. ತುಂಬಾ ಹೆಸರಿರುವ ರಾಷ್ಟ್ರೋತ್ಥಾನ ಶಾಲೆಯೂ ಸಹ ವಿದ್ಯಾರ್ಥಿಗಳನ್ನು ಆರೆಸ್ಸೆಸ್‌ನ ಕಾರ್ಯಕರ್ತರನ್ನಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ವಿಶೇಷವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನೂ, ಲಿಂಗಾಯತರನ್ನೂ ಇದು ಗುರಿಯಾಗಿಸಿಕೊಂಡು ಪ್ರಭಾವಿಸುತ್ತಿದೆ. ಪೋಷಕರೂ ಸಹ ಇದರ ಪ್ರಭಾವಕ್ಕೆ ಒಳಗಾಗುತ್ತಾರೆ. ಇಲ್ಲಿಯೂ ಬಿಜೆಪಿ ಪಕ್ಷದ ಬೆಳವಣಿಗೆಗೆ ಅಗತ್ಯವಾದ ವಾತಾವರಣ ಸೃಷ್ಟಿಸಲು ಸಂಘಪರಿವಾರ ಅನೇಕ ಪ್ರಯತ್ನಗಳನ್ನು ನಡೆಸುತ್ತಾ ಬಂದಿದೆ. ಈ ಹಿಂದೆ ಹಿಂದು–ಮುಸ್ಲಿಂ ಹುಡುಗ ಹುಡುಗಿಯ ಪ್ರೀತಿಯ ವಿಚಾರವನ್ನು ಮುಂಚೂಣಿಗೆ ತಂದು ತಾಲೂಕಿನಲ್ಲಿ ಕೋಮುಗಲಭೆಗಳನ್ನು ಹರಡುವಲ್ಲಿ ಯಶಸ್ವಿಯಾಗಿದೆ.

ಪುಟ 15 ಕ್ಕೆ

ಪೆಟ್ರೋಲ್–ಡೀಸೆಲ್ ಬೆಲೆಗಳ ಹೊರೆ ಹೆಚ್ಚಿಸುತ್ತ ಬಂದ ನಾಲ್ಕು ವರ್ಷಗಳ ಅಬಕಾರಿ ಸುಂಕ ಏರಿಕೆಗಳು



ವ್ಯಂಗ್ಯಚಿತ್ರ: ಜಯಂತೊ, ಹಿಂದುಸ್ತಾನ್ ಟೈಮ್ಸ್

ನಾವು ಪೆಟ್ರೋಲ್ ಮತ್ತು ಡೀಸೆಲ್‌ಗೆ ವಿಪರೀತ ಬೆಲೆ ತೆರುತ್ತಿರುವುದು ಕೇಂದ್ರ ಸರಕಾರ ತನ್ನ ಆದಾಯ ಹೆಚ್ಚಿಸಿಕೊಳ್ಳಲು ಅಬಕಾರಿ ಸುಂಕಗಳನ್ನು ವಿಪರೀತವಾಗಿ ಏರಿಸಿರುವುದರಿಂದಾಗಿಯೇ ಎಂಬ ಬಗ್ಗೆ ಯಾವ ಸಂದೇಹವೂ ಉಳಿದಿಲ್ಲ. ಆದ್ದರಿಂದ ಈ ಸರಕಾರ ಕಳೆದ ನಾಲ್ಕು ವರ್ಷಗಳಲ್ಲಿ ಏರಿಸಿದ ತೆರಿಗೆಗಳನ್ನಾದರೂ ಹಿಂತೆಗೆದುಕೊಳ್ಳಬೇಕು ಎಂಬುದು ನಮ್ಮ ಸಹಜ ಬೇಡಿಕೆಯಾಗುತ್ತದೆ. ಇದೊಂದು ಸಹಜ ಬೇಡಿಕೆ ಎಂಬುದನ್ನು ಈ ಸರಕಾರವೂ ಒಪ್ಪಿಕೊಂಡಿತ್ತು. ಏರಿಕೆಗೆ ಅನುಗುಣವಾಗಿ ತೆರಿಗೆಗಳನ್ನು ಇಳಿಸುವುದಾಗಿ ಭರವಸೆ ನೀಡಲಾಗಿತ್ತು. ಅದು ಕೂಡ ಈ ಸರಕಾರದ 'ಜಿಮ್ಲಾ'ಗಳ ದೊಡ್ಡ ಪಟ್ಟಿಗೆ ಸೇರಲು ಬಿಡಲಾಗದು.

ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಮಾರಾಟ ಬೆಲೆಗಳಲ್ಲಿ ತೀವ್ರ ಏರಿಕೆ ಈ ದೇಶದ ಸಾಮಾನ್ಯ ಜನರ ಬೆನ್ನು ಮುರಿಯುವ ಹೊರೆಯಾಗುತ್ತಿದೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು, ಅದರಲ್ಲೂ ಡೀಸೆಲ್ ಬೆಲೆ ದೈನಂದಿನ ಬದುಕಿಗೆ ಜನಸಾಮಾನ್ಯರು ಬಳಸುವ ಅಗತ್ಯ ಸರಕುಗಳ ಮೇಲೆಯೂ ಪರಿಣಾಮ ಬೀರುತ್ತವೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಆದರೆ ಇವನ್ನು ಇಳಿಸುವುದು ತಮ್ಮ ಕೈಗಳಲ್ಲಿಲ್ಲ ಎನ್ನುವುದು ನಮ್ಮ ದೇಶದ ಆಳುವ ಮಂದಿ ಬಹಳ ವರ್ಷಗಳಿಂದ ಹೇಳುತ್ತಿರುವ ಸಂಗತಿ. ಏಕೆಂದರೆ ನಮ್ಮ ಪೆಟ್ರೋಲಿಯಂ ಉತ್ಪನ್ನಗಳಿಗೆ ಬೇಕಾಗುವ ಕಚ್ಚಾ ತೈಲದಲ್ಲಿ 70%ವನ್ನು ಆಮದು ಮಾಡಬೇಕಾಗುತ್ತದೆ. ಆದ್ದರಿಂದ ಈ ಉತ್ಪನ್ನಗಳ ಬೆಲೆಗಳು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಗಳ ಮೇಲೆ ಅವಲಂಬಿಸಬೇಕಾಗಿದೆ ಎಂದು ಅವರು ಪಶ್ಚಿಮದತ್ತ ಕೈತೋರಿಸಿಕೊಂಡು ಬಂದಿದ್ದರು. ಆದರೂ ಭಾರತದಲ್ಲಿನ ಪೆಟ್ರೋಲ್, ಡೀಸೆಲ್ ಚಿಲ್ಲರೆ ಮಾರಾಟ ಬೆಲೆಗಳು ದಕ್ಷಿಣ ಏಶ್ಯಾದಲ್ಲೇ ಅತಿ ಹೆಚ್ಚು. ಏಕೆ ಎಂಬುದಕ್ಕೆ ಉತ್ತರ ಸಿಕ್ಕಿಲ್ಲ.

ಕಳೆದ ನಾಲ್ಕು ವರ್ಷಗಳಲ್ಲಂತೂ ಇದೊಂದು ವಂಚನೆ ಎಂಬುದು ಸ್ಪಷ್ಟವಾಗಿ ಬಯಲಿಗೆ ಬಂದಿದೆ. ಏಕೆಂದರೆ ಜೂನ್ 2014ರಿಂದ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಗಳಲ್ಲಿ ಕುಸಿತ ಎನ್ನುವಷ್ಟು ತೀವ್ರ ಇಳಿಕೆ ಆರಂಭವಾಗಿತ್ತು. ಮೇ 2014ರಲ್ಲಿ ಬ್ಯಾರಲ್‌ಗೆ 106.85 ಡಾಲರ್ ಇದ್ದದ್ದು ಸತತವಾಗಿ ಇಳಿಯುತ್ತ ಬಂದು ಫೆಬ್ರುವರಿ 2016ರಲ್ಲಿ 30 ಡಾಲರ್‌ಗೆ ಇಳಿದಿತ್ತು.

ಆದರೂ ಕಚ್ಚಾ ತೈಲಗಳ ಬೆಲೆ ಮೂರನೇ ಒಂದು ಮಟ್ಟಕ್ಕಿಳಿದ ಈ ಅವಧಿಯಲ್ಲೂ ನಮ್ಮ ದೇಶದಲ್ಲಿ ಪೆಟ್ರೋಲ್–ಡೀಸೆಲ್ ಬೆಲೆಗಳ ಹೊರೆ ಅನುಭವಕ್ಕೆ ಕಡಿಮೆಯಾಗಲಿಲ್ಲ.

ಈಗ ಕಚ್ಚಾತೈಲದ ಬೆಲೆಗಳಲ್ಲಿ ಏರಿಕೆ ಅರಂಭವಾಗಿದೆ. ಆದರೂ ಮೋದಿ ಸರಕಾರ ಅಧಿಕಾರ ವಹಿಸಿಕೊಂಡಾಗ ಇದ್ದ ಬೆಲೆಗಳ 70% ಮಟ್ಟಕ್ಕೂ ಬಂದಿಲ್ಲವಾದರೂ ಕಳೆದ ನಾಲ್ಕು ವರ್ಷಗಳಲ್ಲೇ ಅತಿ ಹೆಚ್ಚು ಬೆಲೆಗಳನ್ನು ಜನಸಾಮಾನ್ಯರು ತೆರಬೇಕಾಗಿದೆ.

ಕೆಳಗಿನ ಕೋಷ್ಟಕ 1 ಮತ್ತು 2ರಲ್ಲಿ ಕಾಣುವಂತೆ ಕಚ್ಚಾತೈಲದ ಬೆಲೆ ಮೇ 2014ರಿಂದ ಸತತವಾಗಿ ಇಳಿಯುತ್ತ 2015–16ರ ನಂತರ ತುಸು ಏರಿಕೆ ಕಂಡರೂ ಈಗಲೂ ಅದು ಮೇ 2014ರಲ್ಲಿ ಇದ್ದುದರ ಅರ್ಧಕ್ಕಿಂತಲೂ ಕೆಳಗಿನ ಮಟ್ಟದಲ್ಲಿ ಇದೆ. ಆದರೆ ಪೆಟ್ರೋಲ್–ಡೀಸೆಲ್ ಬೆಲೆಗಳು ಮತ್ರ ಎಪ್ರಿಲ್2014ರಲ್ಲಿ ಇದ್ದುದಕ್ಕಿಂತಲೂ ಮೇಲೆ ಹೋಗಿವೆ.

ಏಕೆ? ಇಲ್ಲೇ ಇರುವುದು ನಮ್ಮ ಆಳುವ ಮಂದಿ, ಅದರಲ್ಲೂ ವಿಶೇಷವಾಗಿ 'ಅಚ್ಚೇದಿನ್' ಕನಸನ್ನು ತೋರಿದ ಮಂದಿಯ ಕೈಚಳಕ.

ಈ ಹಿಂದೆ, ದೇಶದ ಆರ್ಥಿಕದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ನಿರ್ಣಾಯಕ ಪಾತ್ರವನ್ನು ಮನಗಂಡು, ಜನಗಳ ಮೇಲೇ ನೇರವಾಗಿ ಅದರ ಹೊರೆ ಬೀಳದಂತೆ ನೋಡಿಕೊಳ್ಳಲು ಈ ಉತ್ಪನ್ನಗಳ ಬೆಲೆಗಳನ್ನು ಸರಕಾರವೇ ನಿಗದಿ ಮಾಡುತ್ತಿತ್ತು. ಆದ್ದರಿಂದ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಕಚ್ಚಾ ತೈಲ ಬೆಲೆಗಳ ಏರುಪೇರು ಜನಗಳನ್ನು ತೀವ್ರವಾಗಿ ಬಾಧಿಸುತ್ತಿರಲಿಲ್ಲ. ಸಬ್ಸಿಡಿಗಳ ಮೂಲಕ ಅದರಿಂದ ರಕ್ಷಣೆ ಮಾಡುವ ಪ್ರಯತ್ನ ಮಾಡಲಾಗುತ್ತಿತ್ತು.

ಆದರೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ–ಪ್ರೇರಿತ ನವ–ಉದಾರವಾದಿ ಧೋರಣೆಗಳನ್ನು ನಮ್ಮ ಆಳುವ ಸರಕಾರಗಳು ಹೆಚ್ಚೆಚ್ಚು ಗಟ್ಟಿಯಾಗಿ ಅನುಸರಿಸಲಾರಂಭಿಸಿದಂತೆ ಈ ಸಬ್ಸಿಡಿಗಳು ಆರ್ಥಿಕಕ್ಕೆ ಭಾರೀ ಹೊರೆಯಾಗುತ್ತವೆ ಎಂದು 2010ರಲ್ಲಿ ಮೊದಲಿಗೆ ಪೆಟ್ರೋಲ್ ಮೇಲಿನ ಸಬ್ಸಿಡಿಯನ್ನು ನಿಲ್ಲಿಸಲಾಯಿತು.

ಆಗಲೂ ಡೀಸೆಲ್ ಬೆಲೆಗಳು ದಿನನಿತ್ಯದ ಬದುಕಿನ ಆವಶ್ಯಕ ಸರಕುಗಳ ಮೇಲೆ ಹೊಂದಿರುವ ಪ್ರಭಾವದಿಂದಾಗಿ ಅದರ ಮೇಲಿನ ಸಬ್ಸಿಡಿಯನ್ನು ನಿಲ್ಲಿಸಲಿಲ್ಲವಾದರೆ ನವ–ಉದಾರವಾದದ ತರ್ಕಕ್ಕೆ ಅನುಗುಣವಾಗಿ ಕ್ರಮೇಣ ಅದನ್ನೂ ಕಡಿಮೆ ಮಾಡಿಕೊಳ್ಳುವ ಪ್ರಕ್ರಿಯೆ ಆರಂಭವಾಯಿತು. 'ಅಚ್ಚೇದಿನ್' ಸರಕಾರ ಬಂದ ಮೇಲೆ ಅದನ್ನೂ ಸಂಪೂರ್ಣವಾಗಿ ನಿಲ್ಲಿಸಲಾಯಿತು.

ಈ ಸಂದರ್ಭದಲ್ಲಿ, ಅದೃಷ್ಟವಶಾತ್ ಕಚ್ಚಾ ತೈಲಬೆಲೆಗಳು ತೀವ್ರವಾಗಿ ಇಳಿಯಲಾರಂಭಿಸಿದ್ದು, ಆರಂಭದಲ್ಲಿ ಪೆಟ್ರೋಲ್ –ಡೀಸೆಲ್ ಬೆಲೆಗಳಲ್ಲೂ ಸ್ವಲ್ಪ ಮಟ್ಟಿನ ಇಳಿಕೆ ಕಂಡಿತು. ಇದನ್ನು ಕೋಷ್ಟಕ–1 ಮತ್ತು 2ರಲ್ಲಿ ಕಾಣಬಹುದು. ಆದರೆ ಮೋದಿ ಸರಕಾರ ತನ್ನ 'ಅದೃಷ್ಟ'ದ ಪ್ರಯೋಜನ ಜನಸಾಮಾನ್ಯರಿಗೆ ಪೂರ್ಣವಾಗಿ ದಕ್ಕದಂತೆ ಮಾಡಿತು ಎಂಬುದನ್ನು ಈ ಅವಧಿಯಲ್ಲಿ ಈ ಕೆಳಗಿನ ಕೋಷ್ಟಕದಲ್ಲಿನ ಕಚ್ಚಾ ತೈಲ ಬೆಲೆಗಳ ಇಳಿಕೆಯ ಪ್ರಮಾಣ ಸ್ಪಷ್ಟವಾಗಿ ತೋರಿಸುತ್ತದೆ.

ಮೋದಿ ಸರಕಾರ ಈ 'ಮ್ಯಾಜಿಕ್' ಸಾಧಿಸಿದ್ದು ಹೇಗೆ? ವಾಸ್ತವವಾಗಿ ಇದು ಮೋದಿಯವರ 56" ಮ್ಯಾಜಿಕ್ ಖಂಡಿತ ಅಲ್ಲ, ಹಿಂದಿನ ಪ್ರಧಾನ ಮಂತ್ರಿಗಳೂ, ಸರಕಾರಗಲೂ ಇಂತಹದೇ 'ಮ್ಯಾಜಿಕ್' ತಂತ್ರ ಅನುಸರಿಸಿದ್ದರು. ಅದೆಂದರೆ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ವಿಪರೀತ ಅಬಕಾರಿ ಸುಂಕಗಳನ್ನು ಹೇರುವುದು. ವಾಸ್ತವವಾಗಿ ಸಬ್ಸಿಡಿ ವ್ಯವಸ್ಥೆ ಸರಕಾರಗಳಿಗೆ ಹೊರೆ ಯಾಗುತ್ತದೆ ಎನ್ನುತ್ತಿದ್ದಾಗಲೂ ಒಂದೆಡೆ ಸಬ್ಸಿಡಿಯ ಉದಾರತೆಯನ್ನು ಪ್ರದರ್ಶಿಸುತ್ತಿದ್ದ ಸರಕಾರಗಳು ಇನ್ನೊಂದೆಡೆಯಲ್ಲಿ ತೆರಿಗೆಗಳ ಮೂಲಕ ಅದನ್ನು ಕಿತ್ತುಕೊಳ್ಳಲಾಗುತ್ತಿದೆ ಎಂಬುದನ್ನು ಮರೆಮಾಚುತ್ತಿದ್ದವು.

ಈ ಸರಕಾರವಂತೂ, ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾತೈಲದ ಬೆಲೆ ತೀವ್ರವಾಗಿ ಕುಸಿಯಲಾರಂಭಿಸಿದಾಗ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕಗಳನ್ನು ಒಂದಲ್ಲ, ಎರಡಲ್ಲ, ಐದು ಬಾರಿ ಹೆಚ್ಚಿಸಿ ಹೆಚ್ಚಿಸಿ ಈ ಬೆಲೆ ಕುಸಿತದ ಪ್ರಯೋಜನ ಜನಸಾಮಾನ್ಯರಿಗೆ ತಲುಪದೆ ಪೂರ್ಣವಾಗಿ ಸರಕಾರದ ಖಜಾನೆಗೆ, ಆ ಮೂಲಕ ಕಾರ್ಪೊರೇಟ್‌ಗಳಿಗೆ, ಶ್ರೀಮಂತರಿಗೆ ಆರ್ಥಿಕವನ್ನು ಬೆಳಸಲು 'ಪ್ರೋತ್ಸಾಹ'ದ ಹೆಸರಲ್ಲಿ ಲಕ್ಷ ಕೋಟಿ ರೂ.ಗಳಷ್ಟು ತೆರಿಗೆ ರಿಯಾಯ್ತಿ/ ವಿನಾಯ್ತಿಗಳನ್ನು ಕೊಡಮಾಡಲಿಕ್ಕಾಗಿ ಸಿಗುವಂತಹ 'ಮ್ಯಾಜಿಕ್' ಮಾಡಿತು.

ಎಪ್ರಿಲ್ 1, 2014ರಲ್ಲಿ ಪೆಟ್ರೋಲಿನ ಮೇಲೆ ಅಬಕಾರಿ ಸುಂಕ ಲೀಟರಿಗೆ 9.48ರೂ.ಇತ್ತು. ಈಗ ಅದು 19.48ರೂ.ಗೆ ಏರಿದೆ.

ಅಂದರೆ 105% ಏರಿಕೆ. ಚಿಲ್ಲರೆ ಬೆಲೆಯ 47.4% ಸರಕಾರದ ತೆರಿಗೆ ಆದಾಯ ಸಂಗ್ರಹಕ್ಕೆ ಹೋಗುತ್ತದೆ.

ಅದೇ ರೀತಿ ಡೀಸೆಲ್ ಮೇಲಿನ ಸುಂಕ ಲೀಟರಿಗೆ 3.56 ರೂ.ನಿಂದ 15.33ರೂ.ಗೆ ಏರಿದೆ. ಅಂದರೆ 330% ಏರಿಕೆ. ಇದರ ಚಿಲ್ಲರೆ ಬಲೆಯ 38.09% ತೆರಿಗೆಗಳಿಗೇ ಹೋಗುತ್ತದೆ.

ಈ ಕೆಳಗಿನ ಲೆಕ್ಕಾಚಾರ ನೋಡಿ:

ಎಪ್ರಿಲ್ 8, 2018ರಂದು ನಾವು ನೇರವಾಗಿಯೋ, ಪರೋಕ್ಷವಾಗೊಇಯೋ ಬಳಸುವ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಮೂಲಕ ಯಾರ್‍ಯಾರು ಎಷ್ಟೆಷ್ಟು ವಸೂಲಿ ಮಾಡಿಕೊಳ್ಳುತ್ತಾರೆ ನೋಡಿ

	ಪೆಟ್ರೋಲ್	ಡೀಸೆಲ್
ಮೂಲ ಬೆಲೆ	**ರೂ.35.21**	**37.24**
ಕೇಂದ್ರ ಅಬಕಾರಿ ಸುಂಕ	19.48	15.33
ಡೀಲರ್ ಕಮಿಶನ್	3.60	2.52
ರಾಜ್ಯ ವ್ಯಾಟ್	15.74	9.57
ನಾವು ತೆರುವ ಬೆಲೆ	**ರೂ.74.03**	**64.96**
ಮೂಲ ಬೆಲೆಯ ಎಷ್ಟು ಪಟ್ಟು	**210%**	**174.4%**

ಈಗ ಇನ್ನೂ ಹೆಚ್ಚು ತೆರುತ್ತಿದ್ದೇವೆ. ಕರ್ನಾಟಕದಲ್ಲಿ ಚುನಾವಣೆಗಳಿಂದಾಗಿ ಮತ್ತಷ್ಟು ಏರಿಕೆ ಸದ್ಯಕ್ಕೆ ಇರುವುದಿಲ್ಲ ಎಂದೂ ವರದಿಯಾಗಿದೆ. ಆದರೆ ಅವು ಮೇ 15ರ ನಂತರ ಒಟ್ಟಾಗಿ ಜನಸಾಮಾನ್ಯರ ತಲೆಯ ಎರಗುತ್ತವೆ ಎಂಬುದು ಇದುವರೆಗಿನ ಸಾಮಾನ್ಯ ಅನುಭವ.

ಕೋಷ್ಟಕ –3 ನಮ್ಮ ಮೇಲಿನ ಹೊರೆಗಳನ್ನು ಹೆಚ್ಚಿಸಿ ಈ ಸರಕಾರ ಎಷ್ಟು ದೊಡ್ಡ ಮೊತ್ತವನ್ನು ಬಾಚಿಕೊಂಡಿದೆ ಎಂಬುದನ್ನು ತೋರಿಸುತ್ತದೆ.

ಹಿಂದಿನ ಕೆಂದ್ರ ಸರಕಾರಕ್ಕೆ ನಮ್ಮಿಂದ ಒಂದು ಲೀಟರ್ ಪೆಟ್ರೋಲಿನಲ್ಲಿ 10.38 ರೂ. ಕೊಡುತ್ತಿದ್ದರೆ, ಈಗಿನ ಸರಕಾರ ಐದು ಬಾರಿ ತೆರಿಗೆಗಳನ್ನು ಹೆಚ್ಚಿಸಿ ಅದರ ದುಪ್ಪಟ್ಟು 20.06ರೂ. ಕಿತ್ತುಕೊಳ್ಳುತ್ತಿದೆ. 1ಲೀ. ಡೀಸೆಲ್‌ನಲ್ಲಂತೂ ಸರಕಾರ ಕಿತ್ತುಕೊಳ್ಳುತ್ತಿರುವ ಮೊತ್ತ 4.52 ರೂ.ನಿಂದ 15.92ರೂ.ಗೆ, ಅಂದರೆ ಮೂರು ಪಟ್ಟಿಗಿಂತಲೂ ಹೆಚ್ಚಾಗಿದೆ.

ಜನಸಾಮಾನ್ಯರ ಬೆನ್ನು ಮುರಿಯುವ ಪೆಟ್ರೋಲ್–ಡೀಸೆಲ್ ಮೇಲಿನ ಈ ಹೊರೆಗಳಿಂದ ಅಚ್ಚೇ ದಿನ್ ಸರಕಾರದ ಆದಾಯ 1.53ಲಕ್ಷ ಕೋಟಿರೂ.ಗಳಿಂದ ಕಳೆದ ವರ್ಷ 3.35 ಲಕ್ಷ ಕೊಟಿ ರೂ.ಗೇರಿದೆ. ಅಂದರೆ ಎರಡು ಪಟ್ಟಿಗಿಂತಲೂ ಹೆಚ್ಚು. ಇತ್ತೀಚೆಗಷ್ಟೇ ಮುಗಿದ ಹಣಕಾಸು ವರ್ಷದ ಮೊದಲ 9 ತಿಂಗಳಲ್ಲೇ ಅದು 2.3ಲಕ್ಷ ಕೋಟಿ ರೂ.ಗಳನ್ನು ದಾಟಿತ್ತು. ನಂತರದ ಮಾಹಿತಿ ಇನ್ನೂ ಲಭ್ಯವಾಗಿಲ್ಲ.

ಇದರಿಂದಾಗಿ ನಾವು ಪೆಟ್ರೋಲ್ ಮತ್ತು ಡೀಸೆಲ್‌ಗೆ ವಿಪರೀತ ಬೆಲೆ ತೆರುತ್ತಿರುವುದು ಕೇಂದ್ರ ಸರಕಾರ ತನ್ನ ಆದಾಯ ಹೆಚ್ಚಿಸಿಕೊಳ್ಳಲು ಅಬಕಾರಿ ಸುಂಕಗಳನ್ನು ವಿಪರೀತಬಾಗಿ ಏರಿಸಿರುವುದರಿಂದಾಗಿಯೇ ಎಂಬ ಬಗ್ಗೆ ಯಾವ ಸಂದೇಹವೂ ಉಳಿಯುವುದಿಲ್ಲ.

ಆದ್ದರಿಂದ ಈ ಸರಕಾರ ಕಳೆದ ನಾಲ್ಕು ವರ್ಷಗಳಲ್ಲಿ ಏರಿಸಿದ ತೆರಿಗೆಗಳನ್ನಾದರೂ ಹಿಂತೆಗೆದುಕೊಳ್ಳಬೇಕು ಎಂಬುದು ನಮ್ಮ ಸಹಜ ಬೇಡಿಕೆಯಾಗುತ್ತದೆ. ಇದೊಂದು ಸಹಜ ಬೇಡಿಕೆ ಎಂಬುದನ್ನು ಈ ಸರಕಾರವೂ ಒಪ್ಪಿಕೊಂಡಿತ್ತು. 2016ರ ಕೊನೆಯಲ್ಲಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ, ಅದರೊಂದಿಗೆ ಸರಕಾರದ ಪಾಲು ಏರಿಸಿದ ತೆರಿಗೆ ದರದಿಂದಿಂದಾಗಿ ಇನ್ನಷ್ಟು ಏರಲಾರಂಭಿಸಿದಾಗ, ಏರಿಕೆಗೆ ಅನುಗುಣವಾಗಿ ತೆರಿಗೆಗಳನ್ನು ಇಳಿಸುವುದಾಗಿ ಭರವಸೆ ನೀಡಲಾಗಿತ್ತು.

ಆದರೆ ಅದೀಗ ಎಲ್ಲರ ಖಾತೆಗಳಲ್ಲೂ 15 ಲಕ್ಷ ರೂ. ಜಮಾ, ವರ್ಷಕ್ಕೆ 2 ಕೋಟಿ ಉದ್ಯೋಗ, ರೈತರ ಆದಾಯ ಇಮ್ಮಡಿ ಮುಂತಾದ ಈ ಸರಕಾರದ 'ಜುಮ್ಲಾ'(ಅಂದರೆ ಬೊಗಳೆ)ಗಳ ಸಾಲಿಗೆ ಸೇರಿದೆ. ಏಕೆಂದರೆ ತೆರಿಗೆಗಗಳನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂದು ಸರಕಾರದ ವಕ್ತಾರರು ಸಾರಿರುವುದಾಗಿ ವರದಿಯಾಗಿದೆ.

ಸರಕಾರಕ್ಕೆ ಆದಾಯ ಹೆಚ್ಚಾದರೆ ಅದು ಜನತೆಯ ಕಲ್ಯಾಣಕ್ಕೇ ತಾನೇ ಎಂದು ಕೇಳಬಹುದು. ದೊಡ್ಡ–ದೊಡ್ಡ ಕಾರ್ಪೊರೇಟ್ ಕುಳಗಳು ಸಾಲಮರುಪಾವತಿ ಮಾಡದೆ, ಹಗರಣಗಳನ್ನೇ ಸೃಷ್ಟಿಸಿದರೂ, ಅವರನ್ನು ಅದಕ್ಕೆ ಹೊಣೆ ಮಾಡುವ ಬದಲು, ಅವರಿಂದ ವಸೂಲಿ ಮಾಡುವ ಬದಲು ಸಾರ್ವಜನಿಕ ವಲಯದ ಬ್ಯಾಂಕುಗಳು ಅವನ್ನು ತಮ್ಮ ಲೆಕ್ಕಪುಸ್ತಕಗಳಿಂದ ತೆಗೆಯಬೇಕು ಎಂದೋ, ಅಥವ ದಿವಾಳಿ ಪ್ರಕ್ರಿಯೆಯ ಮೂಲಕ ಕೆಲವು ಶೇಕಡಾಗಳಷ್ಟು (ಪ್ರಾಮಾಣಿಕ ಖಾತೆದಾರರ ವೆಚ್ಚದಲ್ಲಿ) 'ಹೇರ್‌ಕಟ್' (ಚೌರ?) ಮಾಡಿಕೊಳ್ಳಲು, ಅಂದರೆ ಕಳಕೊಳ್ಳಲು ಸಿದ್ಧವಾಗಬೇಕು ಎಂದೋ ಹೇಳುವ ಸರಕಾರದಿಂದ ಇಂತಹ ನಿರೀಕ್ಷೆ ಇನ್ನೂ ಉಳಿದಿದೆಯೇ? ತಮ್ಮ ಬೆಳೆಗಳಿಗೆ ಸರಿಯಾದ ಬೆಲೆಗಳು ದೊರೆಯದೆ ಹತಾಶರಾಗಿ ಒಂದು ಬಾರಿ ಸಾಲಮನ್ನಾದ ಕೋಟ್ಯಂತರ ರೈತರ ಆಗ್ರಹದ ಬಗ್ಗೆ ಈ ಸರಕಾರದ ನಿಲುವು ಈ ನಿಟ್ಟಿನಲ್ಲಿ ಯಾವ ವಿಶ್ವಾಸವನ್ನಾದರೂ ಉಳಿಸಿದೆಯೇ?

ಆದ್ದರಿಂದ ಕಳೆದ ನಾಲ್ಕು ವರ್ಷಗಳಲ್ಲಿ ಏರಿಸಿದ ಪೆಟ್ರೊಲ್–ಡೀಸೆಲ್ ತೆರಿಗೆಗಳನ್ನು ಹಿಂತೆಗೆದುಕೊಳ್ಳಿ ಎಂಬ ಆಗ್ರಹ ನ್ಯಾಯಬದ್ಧ ಮತ್ತು ತರ್ಕಬದ್ಧ.

ಕೋಷ್ಟಕ – 1

ವರ್ಷ	ಪೆಟ್ರೋಲ್	ಡೀಸೆಲ್
	ರೂ. ಪ್ರತಿ ಲೀಟರಿಗೆ	
ಎಪ್ರಿಲ್. 2014	72.26	55.48
ಮೇ 2014	71.41	55.49
ಎ. 2015	60.49	49.71
ಎ. 2016	59.68	48.33
ಎ. 2017	68.07	56.83
ಎ. 2018	74.14	65.93

ಕೋಷ್ಟಕ – 2

ವರ್ಷ	ಸರಾಸರಿ ಕಚ್ಚಾ ತೈಲ ದರ ಡಾಲರ್ ಪ್ರತಿ ಬ್ಯಾರಲ್‌ಗೆ
2013–14	105.50
ಮೇ 2014	106.85
2014–15	84.20
2015–16	46.19
2016–17	47.56
2017–18	55.71

ಕೋಷ್ಟಕ – 3

ತೆರಿಗೆಗಳಿಂದ ಕೇಂದ್ರ ಸರಕಾರಕ್ಕೆ ಆದಾಯ(ರೂ.ಗಳಲ್ಲಿ)		
1ಲೀ.ಪೆಟ್ರೋಲಿನಿಂದ	1ಲೀ.ಡೀಸೆಲಿನಿಂದ	ಒಟ್ಟು ಆದಾಯ
10.38	4.52	1,52,900 ಕೋಟಿ
18.14	10.91	1,72,066 "
19.56	11.16	2,58,443 "
21.99	17.83	3,34,534 "
20.06	15.92	2,30,807 "
	(ಅಂದಾಜು)	(ಎಪ್ರಿಲ್ –ಡಿಸೆಂ.17)

‘ಪಕೋಡಾ ಉದ್ಯೋಗ’ದಿಂದ ‘ಪಾನ್–ಬೀಡಾ ಉದ್ಯೋಗ’ದ ವರೆಗೆ –ನಡುವೆ ಉದ್ಯೋಗ ಸೃಷ್ಟಿಯ ಬದಲು ಉದ್ಯೋಗ ಮಾಹಿತಿ ಸೃಷ್ಟಿಯ ಕಸರತ್ತು!



ವೇದರಾಜ ಎನ್ ಕೆ.

“ತ್ರಿಪುರಾದ ಯುವಜನ ನಿರುದ್ಯೋಗಿಗಳಾಗಿದ್ದಾರೆ. ಬಿಜೆಪಿ ಸರಕಾರ ಪ್ರತಿ ಮನೆಯಲ್ಲಿ ಒಬ್ಬರಿಗೆ ಉದ್ಯೋಗ ಕೊಡಿಸುತ್ತದೆ” ಇದು ಪ್ರಧಾನ ಮಂತ್ರಿಗಳು ತ್ರಿಪುರಾದ ಯುವಜನರಿಗೆ ವಿಧಾನಸಭಾ ಚುನಾವಣೆಗಳ ಪ್ರಚಾರದಲ್ಲಿ ನೀಡಿದ್ದ ಭರವಸೆ. 2014ರ ಪ್ರತಿವರ್ಷ 2ಕೋಟಿ ಉದ್ಯೋಗಾವಕಾಶಗಳ ಆಶ್ವಾಸನೆ ‘ಪಕೋಡಾ ಉದ್ಯೋಗ’ದೊಂದಿಗೆ ‘ಜುಮ್ಲಾ’ಗಳ ಪಟ್ಟಿಗೆ ಸೇರಿದರೇನಂತೆ. ತ್ರಿಪುರಾದ ಯುವಜನ ನಂಬಿ ಆರಿಸಿದರು. ಈಗ ಹೊಸ ಮುಖ್ಯಮಂತ್ರಿಗಳು ಅದೇ ಪಕೋಡಾ ಲಾಜಿಕ್ ಬಳಸಿದ್ದಾರೆ. ಉದ್ಯೋಗಕ್ಕಾಗಿ ನಮ್ಮ ಬಾಲ ಹಿಡಿಯಬೇಡಿ, ಪಾನ್–ಬೀಡಾ ಶಾಪ್ ಹಾಕಿದ್ದರೆ ಈ ವೇಳೆಗೆ ನಿಮ್ಮ ಖಾತೆಯಲ್ಲಿ 5ಲಕ್ಷ ರೂ. ಇರುತ್ತಿತ್ತು ಎನ್ನುತ್ತ ತಮ್ಮ ನಾಯಕನ ಹೆಜ್ಜೆ ಗುರುತುಗಳ ಜಾಡು ಹಿಡಿದು ಸಾಗಿದ್ದಾರೆ. ಜತೆಗೆ ಹಸು–ಜಾನುವಾರು ಸಾಕಿ, ತಮ್ಮ ಸರಕಾರ ಕೊಡಿಸಬಹುದಾದ ಉದ್ಯೋಗ ಇದೇ ಎಂದು ಪರೋಕ್ಷವಾಗಿ ಹೇಳಿದ್ದಾರೆ. ತ್ರಿಪುರಾದ ಯುವಜನತೆಯ ಪ್ರತಿಕ್ರಿಯೆ ಏನು ಎಂದು ಇನ್ನೂ ತಿಳಿದು ಬಂದಿಲ್ಲ.

***

ಈ ನಡುವೆ ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಪ್ರತಿಷ್ಠಿತ ಸದಸ್ಯರಲ್ಲಿ ಒಬ್ಬರಾದ ಸುರ್ಜಿತ್ ಭಲ್ಲಾ 2017 ರಲ್ಲಿ 1.5 ಕೋಟಿ ಉದ್ಯೋಗಗಳ ಸೃಷ್ಟಿಯಾಗಿದೆ, ಇದು ಫೇಕ್ ನ್ಯೂಸ್ ಖಂಡಿತಾ ಅಲ್ಲ ಎಂದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ಲೇಖನ ಬರೆದಿದ್ದರು(ಎಪ್ರಿಲ್ 28).

ಇದಕ್ಕೆ ತಕ್ಷಣ ಪ್ರತಿಕ್ರಿಯಿಸಿರುವ ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಇಕಾನಮಿ(ಸಿಎಂಐಇ–ಭಾರತೀಯ ಆರ್ಥಿಕದ ನಿಗಾ ಸಂಸ್ಥೆ)ಯ ಮುಖ್ಯಸ್ಥರಾಗಿರುವ ಮಹೇಶ ವ್ಯಾಸ್ ಇದು ಸುರ್ಜಿತ್ ಭಲ್ಲಾರವರು ‘ಆವಿಷ್ಕರಿಸಿರುವ’ ಅಂಕಿ–ಅಂಶ ಎಂದು ಕಟುವಾಗಿ ಟೀಕಿಸಿದ್ದಾರೆ (ದಿವೈರ್.ಇನ್, ಎ.29)

ಈ ಸಿಎಂಐಇ ಕೂಡ ಒಂದು ಪ್ರತಿಷ್ಠಿತ ಸಂಸ್ಥೆ. ಇದು ಪ್ರತಿತಿಂಗಳು 5 ಲಕ್ಷ ಮಂದಿಯನ್ನು ತಲುಪುವ ದೇಶದಲ್ಲೇ ಅತಿ ದೊಡ್ಡದು ಎನ್ನಲಾದ ಉದ್ಯೋಗ ಸರ್ವೆ ಮಾಡುತ್ತದೆ.

ಭಲ್ಲಾ ಅವರು ಈ ಸರ್ವೆಯ ಆಧಾರದಲ್ಲೇ 1.5 ಕೋಟಿ ಉದ್ಯೋಗ ನಿರ್ಮಾಣವಾಗಿದೆ ಎಂದಿರುವುದು. ಆದರೆ ಅವರು ಸರ್ವೇಯಲ್ಲಿ ತಮ್ಮ ‘ಸೃಷ್ಟಿ’ಗೆ ಅನುಕೂಲವೆನಿಸಿದ್ದನ್ನು ಮಾತ್ರ ಆರಿಸಿಕೊಂಡು ಅದನ್ನು ನೌಕರರ ಭವಿಷ್ಯನಿಧಿ ಸಂಘಟನೆ(ಇಪಿಎಫ್‌ಒ)ದ ಮಾಹಿತಿಯೊಂದಿಗೆ ಬೆರೆಸಿ ಈ ‘ಆವಿಷ್ಕಾರ’ ಮಾಡಿದ್ದಾರೆ ಎಂದು ಸಿಎಂಐಇ ಮೂದಲಿಸಿದ್ದಾರೆ.

ವಾಸ್ತವವಾಗಿ ಸಿಎಂಐಇ ಸರ್ವೆ ಪ್ರಕಾರ ಉದ್ಯೋಗಾವಕಾಶ ಬೆಳವಣಿಗೆ 18 ಲಕ್ಷ ಮಾತ್ರ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಇಬ್ಬರು ಅರ್ಥಶಾಸ್ತ್ರಜ್ಞರು ಈ ಹೊಸ ಇಪಿಎಫ್‌ಒ ಸದಸ್ಯತ್ವ ಸಂಖ್ಯೆಯ ಮಾಹಿತಿಗಳನ್ನು ಉದ್ಯೋಗಾವಕಾಶ ನಿರ್ಮಾಣದ ಮಾಹಿತಿಯಾಗಿ ಬಳಸಿಕೊಳ್ಳುವ ಬಗ್ಗೆ ಇತ್ತೀಚೆಗೆ ಹೇಳಿದ್ದರು. ಆಗ ‘ನೀತಿ ಆಯೋಗ’ದ ಅಧ್ಯಕ್ಷ ಅರವಿಂದ ಪನಗರಿಯ ಅವರೇ ಇಪಿಎಫ್‌ಒ ಮಾಹಿತಿ ಹೊಸ ಉದ್ಯೋಗ ನಿರ್ಮಾಣದ ಬಗ್ಗೆ ಮಾಹಿತಿಗೆ ವಿಶ್ವಸನೀಯವಲ್ಲ ಎಂದಿದ್ದರು. ಎಂಬುದನ್ನು ಇಲ್ಲಿ ಗಮನಿಸಬಹುದು. ಇತರ ಕೆಲವು ಆರ್ಥಿಕ ತಜ್ಞರು ಕೂಡ ಇದನ್ನು ಒಪ್ಪಿದ್ದಾರೆ. ಇಪಿಎಫ್‌ಒದ ಹೊಸ ಸದಸ್ಯರ ಸಂಖ್ಯೆ ಹೊಸ ಉದ್ಯೋಗಗಳ ನಿರ್ಮಾಣವನ್ನು ಬಿಂಬಿಸುತ್ತದೆ ಎಂಬುದು ಇದನ್ನು ಬಳಸಬಹುದೆಂದು ಸಮರ್ಥಿಸುವವರ ತರ್ಕ. ಆದರೆ ಈ ಹೊಸ ಸದಸ್ಯರೆಲ್ಲರೂ ಹೊಸದಾಗಿ ಉದ್ಯೋಗಕ್ಕೆ ಸೇರಿದವರೇ ಆಗಬೇಕಿಲ್ಲ. ಉದಾ: 20ಕ್ಕಿಂತ ಕಡಿಮೆ ಕಾರ್ಮಿಕರರಿರುವ ಉದ್ದಿಮೆಗಳಿಗೆ ಇಪಿಎಫ್‌ಒ ಕಡ್ಡಾಯವಲ್ಲ. ಕಳೆದ ವರ್ಷ 19 ಕಾರ್ಮಿಕರಿದ್ದ ಒಂದು ಉದ್ದಿಮೆಯ ಕಾರ್ಮಿಕರ ಸಂಖ್ಯೆ ಈಗ 20 ಆದರೆ ಆ ಉದ್ದಿಮೆಯ 20 ಕಾರ್ಮಿಕರು ಈಗ ಇಪಿಎಫ್‌ಒ ಸದಸ್ಯರಾಗುತ್ತಾರೆ. ಇವರು ಇಪಿಎಫ್‌ಒ ಗೆ ಹೊಸ ಸದಸ್ಯರಾದರೂ ವಾಸ್ತವವಾಗಿ ಹೊಸದಾಗಿ ಉದ್ಯೋಗ ಪಡೆದವರಲ್ಲ, ಅಂತವರ ಸಂಖ್ಯೆ ಇಲ್ಲಿ ಕೇವಲ 1. ಆದರೆ ಭಲ್ಲಾರಂತಹ ಇಪಿಎಫ್‌ಒ ಮಾಹಿತಿ ಬಳಸುವವರು ಇದನ್ನು 20 ಎಂದೇ ತಗೊಳ್ಳುತ್ತಾರೆ. ಇದು ತಪ್ಪು ಮಾಹಿತಿ ಎಂಬುದು ಸ್ವಯಂವೇದ್ಯ.

ಆದರೂ ಸ್ವತಃ ಪ್ರಧಾನಿಗಳೇ ತಮ್ಮ ನೀತಿ ಆಯೋಗದ ಅಧ್ಯಕ್ಷರ ಎಚ್ಚರಿಕೆಯನ್ನು ಪರಿಗಣಿಸದೆ ಇದೇ ಇಪಿಎಫ್‌ಒ ಮಾಹಿತಿಯ ಆಧಾರದಲ್ಲಿ 2017 ರಲ್ಲಿ 70 ಲಕ್ಷ ಉದ್ಯೋಗ ನಿರ್ಮಾಣವಾಗಿದೆ ಎಂದು ಹೇಳಿಕೊಳ್ಳಲು ಹಿಂಜರಿದಿಲ್ಲ.

***

ಇತ್ತೀಚೆಗೆ ಉದ್ಯೋಗ ಕುರಿತ ಸರಕಾರೀ ಸರ್ವೆಯ ಫಲಿತಾಂಶಗಳೂ ಪ್ರಕಟವಾಗಿವೆ. ಇದು ಭಾರತ ಸರಕಾರದ ಲೇಬರ್ ಬ್ಯುರೊ ನಡೆಸುವ ತ್ರೈಮಾಸಿಕ ಉದ್ಯೋಗ ಸರ್ವೆ(ಕ್ಯುಇಎಸ್)ಯ ಇತ್ತೀಚಿನ ವರದಿಯಲ್ಲಿದೆ. ಇದು ಜುಲೈನಿಂದ ಅಕ್ಟೋಬರ್ 2017ರ ವರೆಗಿನ ಉದ್ಯೋಗ ಸರ್ವೆ. ಇದು ಮತ್ತುಇದರ ಹಿಂದಿನ ಏಳು ತ್ರೈಮಾಸಿಕ ಸರ್ವೆಗಳ ಮಾಹಿತಿಗಳನ್ನು ಕಲೆ ಹಾಕಿದಾಗ ಎಪ್ರಿಲ್ 2016ರಿಂದ ಅಕ್ಟೋಬರ್2017ರ ವರೆಗಿನ 18 ತಿಂಗಳಲ್ಲಿ ಸೇರಿದ ಹೊಸ ಉದ್ಯೋಗಗಳ ಸಂಖ್ಯೆ 5.56 ಲಕ್ಷ. ಎಪ್ರಿಲ್ 2016ರಲ್ಲಿ ಎಂಟು ಉದ್ದಿಮೆ ವಲಯಗಳಲ್ಲಿ ಇದ್ದ ಒಟ್ಟು ಉದ್ಯೋಗಗಳ ಸಂಖ್ಯೆ 205.22 ಲಕ್ಷ, ಅಂದರೆ ವಾರ್ಷಿಕ ಉದ್ಯೋಗಾವಕಾಶ ನಿರ್ಮಾಣ ದರ ಕೇವಲ 1.8% ಆಗುತ್ತದೆ.

***

ಈ ವಾರ ಬಂದ ಮತ್ತೊಂದು ವರದಿಯ ಪ್ರಕಾರ ವಿವಿಧ ಮೊಬೈಲ್ ಸೇವೆ ಒದಗಿಸುವ ಕಂಪನಿಗಳು ವಿಲೀನಗೊಳ್ಳುವ, ಮುಚ್ಚುವ ಪ್ರಕ್ರಿಯೆ ಆರಂಭವಾಗಿರುವುದರಿಂದ ಈ ವಲಯದಲ್ಲಿ ಮುಂದಿನ ಮೂರು –ನಾಲ್ಕು ತ್ರೈಮಾಸಿಕಗಳಲ್ಲಿ ಸುಮಾರು 80ರಿಂದ 90 ಸಾವಿರ ಉದ್ಯೋಗಗಳು ಇಲ್ಲವಾಗಬಹುದು ಎಂದು ಅಂದಾಜು ಮಾಡಲಾಗಿದೆ(ಪ್ರಣವ್ ಮುಕುಲ್, ದಿ ಇಂಡಿಯನ್ ಎಕ್ಸ್‌ಪ್ರೆಸ್, ಎ.29). ಕಳೆದ ವರ್ಷ ಸುಮಾರು 40ಸಾವಿರ ಉದ್ಯೋಗಗಳು ಈ ವಲಯದಲ್ಲಿ ಇಲ್ಲವಾದವು.

***

ಉದ್ಯೋಗಾವಕಾಶ ನಿರ್ಮಾಣ ಕುರಿತ ಈ ಎಲ್ಲ ವರದಿಗಳು ವರ್ಷಕ್ಕೆ 2 ಕೋಟಿ ಉದ್ಯೋಗಗಳ ನಿರ್ಮಾಣದ ಆಶ್ವಾಸನೆಯನ್ನು ಮತ್ತೆ–ಮತ್ತೆ ನೆನಪಿಸುತ್ತಿರುವುದು ‘ಅಚ್ಛೇ ದಿನ್’ ಸರಕಾರಕ್ಕೆ 2019 ಸಮೀಪಿಸುತ್ತಿರುವಂತೆ ತಲೆ ನೋವು ತರುತ್ತಿರುವಂತೆ ಕಾಣುತ್ತಿದೆ. ಮೇಲೆ ಹೇಳಿದ ಲೇಬರ್ ಬ್ಯುರೊದ ತ್ರೈಮಾಸಿಕ ಸರ್ವೆಗಳನ್ನು ನಿಲ್ಲಿಸಿ ಇಪಿಎಫ್‌ಒ, ಇಎಸ್‌ಐ ಮತ್ತು ಪಿಎಫ್‌ಆರ್‌ಡಿಎ(ಪೆನ್ಶನ್ ಫಂಡ್ ನಿಯಂತ್ರಣ ಪ್ರಾಧಿಕಾರ)ದ ಮಾಹಿತಿಗಳನ್ನು ಆಧರಿಸಿದ ಮಾಸಿಕ ಉದ್ಯೋಗ ಮಾಹಿತಿಗಳನ್ನು ಬಿಡುಗಡೆ ಮಾಡಬಾರದೇಕೆ ಎಂದು ಗಂಭೀರ ಸಮಾಲೋಚನೆಗಳನ್ನು ಆರಂಭಿಸಲಾಗಿದೆಯಂತೆ(ಸೋಮೇಶ್ ಝಾ, ಬಿಸಿನೆಸ್ ಸ್ಟಾಂಡರ್ಡ್, ಎ.29)

ಅಂದರೆ ಇನ್ನು ಐದನೇ ವರ್ಷದಲ್ಲಿ ಉದ್ಯೋಗ ನಿರ್ಮಾಣದ ಬದಲು ಉದ್ಯೋಗ ಮಾಹಿತಿ ನಿರ್ಮಾಣದ ಬಗ್ಗೆಯಷ್ಟೇ ಹೆಚ್ಚು ತಲೆಕಡಿಸಿಕೊಳ್ಳುವ ‘ಅಚ್ಛೇದಿನ್’ಗಳು!

2014ರ ನಂತರ ಗ್ರಾಮೀಣ ಆದಾಯಗಳು ತೀವ್ರವಾಗಿ ಇಳಿದಿವೆ: ರಿಝರ್ವ್ ಬ್ಯಾಂಕ್ ಪ್ರಬಂಧ

ಐದು ವರ್ಷಗಳಲ್ಲಿ ಗ್ರಾಮೀಣ ಜನಗಳ ಆದಾಯವನ್ನು ಇಮ್ಮಡಿ ಮಾಡುತ್ತೇವೆ ಎಂದು ಪ್ರಧಾನ ಮಂತ್ರಿಗಳು ಹೇಳುತ್ತ ಬಂದಿದ್ದಾರೆ. ಆದರೆ ಈ ನಾಲ್ಕು ವರ್ಷಗಳಲ್ಲಿ ಗ್ರಾಮೀಣ ಕೂಲಿ ಆದಾಯಗಳಲ್ಲಿ ತೀವ್ರ ಇಳಿಕೆಯಾಗಿದೆ ಎಂದು ಆರ್‌ಬಿಐ ಸಿದ್ಧಪಡಿಸಿರುವ ಪ್ರಬಂಧವೊಂದು ಹೇಳಿರುವುದಾಗಿ ವರದಿಯಾಗಿದೆ. (ಜಿ.ನಾಗಶ್ರೀಧರ್, ಬಿಸಿನೆಸ್‌ಲೈನ್, ಮೇ1)

ಹಣಕಾಸು ವರ್ಷ 2008ರಿಂದ ಹಣಕಾಸು ವರ್ಷ 2013 ರ ವರೆಗೆ ಗ್ರಾಮಿಣ ಆದಾಯಗಳಲ್ಲಿ ಉನ್ನತ ಬೆಳವಣಿಗೆ ಕಾಣ ಬಂದಿತ್ತು. ಆದರೆ 2014ರ ನಂತರ ಅದು ಇಳಿಯುತ್ತಿದೆ ಎಂದು ಈ ಪ್ರಬಂಧ ಮಾಡಿರುವ ವಿಶ್ಲೇಷಣೆ ಹೇಳುತ್ತಿದೆಯಂತೆ. ಕೃಷಿ ಕೂಲಿಕಾರರ ಕೂಲಿ 2014ರಲ್ಲಿ 38% ಬೆಳವಣಿಗೆ ತೋರಿಸುತ್ತಿತ್ತು, ಅದೀಗ ಸೊನ್ನೆಗೆ ಇಳಿದಿದೆ. ವಿಪರೀತ ಹಣದುಬ್ಬರದಿಂದಾಗಿ ನಿಜ ಕೂಲಿಗಳು ತುಸುವಾದರೂ ಏರುವ ಬದಲು ಮೊದಲಿಗಿಂತ ಕೆಳಮಟ್ಟಕ್ಕೆ ಇಳಿದಿವೆ ಎನ್ನುತ್ತದೆ ಈ ಪ್ರಬಂಧ.

2008–09ರಿಂದ 20011–12ರ ನಡುವೆ ಗ್ರಾಮೀಣ ಆದಾಯಗಳ ಏರಿಕೆಗೆ ಚಾಲಕ ಶಕ್ತಿಯಾಗಿದ್ದದ್ದು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ 2014 ರ ನಂತರ ಅದು ವೇಗ ಕಳಕೊಂಡಂತೆ ಕಾಣುತ್ತದೆ ಎಂದು ಈ ಪ್ರಬಂಧ ಗಮನಿಸಿದೆ. ಈ ಯೋಜನೆ ವರ್ಷದಲ್ಲಿ 100ದಿನಗಳ ಕೆಲಸದ ಖಾತ್ರಿ ಕೊಡುತ್ತದೆ. 2013ರಲ್ಲಿ ಅದು ಒದಗಿಸಿದ ಸರಾಸರಿ ಕೆಲಸದ ಅವಧಿ 45.9. 2014ರಲ್ಲಿ ಇದು 37.7ಕ್ಕೆ ಇಳಿಯಿತು. 2016ರಲ್ಲಿ 15.3ದಿನಗಳಿಗೆ ಇಳಿಯಿತು.

ಕಳೆದ ನಾಲ್ಕು ವರ್ಷಗಳಲ್ಲಿ ನಿಜ ಆದಾಯ ಮಟ್ಟ ಇಳಿಯಲು ಆಂತರಿಕ ಕಾರಣಗಳ ಜೊತೆಗೆ ಅಂತರ್ರಾಷ್ಟ್ರೀಯ ಕಾರಣಗಳೂ ಇದ್ದವು ಎಂದು ರಿಝರ್ವ್ ಬ್ಯಾಂಕಿಗಾಗಿ ಸಿದ್ಧಪಡಿಸಿರುವ ಈ ಪ್ರಬಂಧ ಹೇಳುತ್ತದೆ.

ಇವುಗಳಿಂದ ರಕ್ಷಣೆ ಕೊಡಲು ಅಚ್ಛೇದಿನ್ ಸರಕಾರ ಏನೂ ಮಾಡಲಿಲ್ಲ, ಮನರೇಗದ ಬಗ್ಗೆ ಅದರ ತಿರಸ್ಕಾರ, ಈ ಯೋಜನೆಯನ್ನು ದೇಶದಲ್ಲೇ ಅತ್ಯುತ್ತಮವಾಗಿ ಜಾರಿ ಮಾಡಿದ್ದ ತ್ರಿಪುರಾದ ಎಡರಂಗ ಸರಕಾರಕ್ಕೆ ಒಡ್ಡಿದ ಅಡೆ–ತಡೆಗಳು ಸರ್ವವಿದಿತ. ಆದರೂ ಕರ್ನಾಟಕದಲ್ಲಿ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಗ್ರಾಮೀಣ ಆದಾಯಗಳನ್ನು ಇಮ್ಮಡಿಗೊಳಿಸುವ ಅಬ್ಬರದ ಮಾತುಗಳು ಮತ್ತೆ ಯಾವುದೇ ಬೇಸರವಿಲ್ಲದೆ ಗಾಳಿಯಲ್ಲಿ ತೇಲಾಡುತ್ತಲೇ ಇವೆ.



ನಾವು ಪ್ರಯತ್ನಿಸಿದ್ದೆವು, ಆದರೆ ನಿಮ್ಮ ಮುನಿಸಿಪಲ್ ಅಧಿಕಾರಿಗಳು ಬಂದು ನಮ್ಮ ಪಾನ್‌ಶಾಪ್, ಮಿಲ್ಕ್‌ಬೂತ್‌ಗಳನ್ನೆಲ್ಲ ಕೆಡವಿ ಹಾಕಿದರು...

ವ್ಯಂಗ್ಯಚಿತ್ರ: ಶುಭನೀಲ್, ಡೆಕ್ಕನ್ ಕ್ರಾನಿಕಲ್

“ಮಾಣಿಕ್ಯವನ್ನು ಬಿಸಾಕಿ ಹೆಕ್ಕಿಕೊಂಡ ವಜ್ರ”......

ದೇಶದ ಪ್ರಧಾನಿಗಳು “ಮಾಣಿಕ್ಯವನ್ನೆಸೆದು ತ್ರಿಪರಾದ ಜನತೆಗೆ ಆಯ್ದು ಕೊಟ್ಟ ವಜ್ರ”ವಾದ ಈ ಪಾನ್ ಶಾಪ್ ‘ಖ್ಯಾತಿ’ಯ ಯುವ ಮುಖ್ಯಮಂತ್ರಿಯ ಮೊದಲ ಗಹನವಾದ ಉವಾಚವೆಂದರೆ ‘ಇಂಟರ್ನೆಟ್ ಮತ್ತು ಉಪಗ್ರಹ ಸಂಪರ್ಕ ತಮ್ಮ ತಂತ್ರಜ್ಞಾನ ಎನ್ನುತ್ತಾರೆ ಪಾಶ್ಚಿಮಾತ್ಯರು. ನಿಜವಾಗಿ ಅದು ನಮ್ಮ ತಂತ್ರಜ್ಞಾನ ಮಹಾಭಾರತ ಕಾಲದಲ್ಲೆ ಅದು ಇತ್ತು”.

ಎರಡನೆಯದು, ಎರಡು ದಶಕಗಳ ಹಿಂದೆ ವಿಶ್ವ ಸುಂದರಿಯಾಗಿ ಆಯ್ಕೆಯಾದ ಡಯಾನಾ ಹೆಡನ್ ಇನ್ನೊಬ್ಬ ವಿಶ್ವ ಸುಂದರಿ ಐಶ್ವರ್ಯಾ ರೈಯಂತೆ ಅದಕ್ಕೆ ತಕ್ಕವರಲ್ಲ ಎಂಬ ಟಿಪ್ಪಣಿ.

ಮೂರನೆಯದ್ದು ಸಿವಿಲ್ ಇಂಜಿನಿಯರ್‌ಗಳು ನಾಗರಿಕ ಸೇವೆಗಳನ್ನು ಸೇರಬೇಕು, ಮೆಕಾನಿಕಲ್ ಇಂಜಿನಿಯರುಗಳು ಹೋಗಬಾರದು ಎಂಬುದು.

ನಂತರ ಬಂದುದೇ ಮೇಲೆ ಹೇಳಿದ ಪಾನ್ ಶಾಪ್ ಉವಾಚ.

ಇಂತಹ ಗಹನ ಉವಾಚಗಳಿಂದಾಗಿ ಕೆಲವು ದಿನಗಳ ಹಿಂದೆ ಮಾಧ್ಯಮಗಳಿಗೆ ನಿಮ್ಮ ಹೇಳಿಕೆಗಳ ಮೂಲಕ ‘ಮಸಾಲಾ’ ಒದಗಿಸಬೇಡಿ ಎಂದು ಸಲಹೆ ಮಾಡಿದ್ದ ಪ್ರಧಾನಿಗಳಿಂದ ಅವರಿಗೆ ದಿಲ್ಲಿಗೆ ಬುಲಾವ್ ಬಂದಿದೆ ಎಂಬ ಸುದ್ದಿ ಬಂತು. ಇದರ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು “ಬುಲಾವ್ ಅಲ್ಲ. ಈ ಭೇಟಿ ಬಹಳ ಹಿಂದೆಯೇ ಯೋಜಿಸಿದ್ದು. ನಿಜ ಹೇಳಬೇಕೆಂದರೆ ಮೋದೀಜೀ ನನ್ನನ್ನು ಮಗನಂತೆ ಕಾಣುತ್ತಾರೆ. ನನ್ನನ್ನು ನೋಡಿದರೆ ಅವರಿಗೆ ಅವರದ್ದೇ ನೆನಪಾಗುತ್ತದಂತೆ” ಎಂದು ಟ್ವೀಟ್ ಮಾಡಿರವುದಾಗಿ ವರದಿಯಾಯಿತು.

ನಿಜ ತಾನೇ, ಪಾನ್ ಶಾಪ್ ಎಂದಾಗ ಪಕೋಡಾ ನೆನಪಾಗಲಿಲ್ಲವೇ?

ಆದರೆ ಇದು ಫೇಕ್ ಟ್ವೀಟ್ ಎಂದು ಆಮೇಲೆ ತಿಳಿಯಿತಂತೆ!

ಬಿಜೆಪಿ ಮುಖಂಡರುಗಳು ಇಂತಹ ಹೇಳಿಕೆಗಳನ್ನು ನೀಡುವುದು ಬುದ್ಧಿಗೇಡಿತನದಿಂದಲ್ಲ, ವಾಸ್ತವ ಪ್ರಶ್ನೆಗಳಿಂದ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಲಿಕ್ಕಾಗಿ ಎಂದೊಬ್ಬ ಹಿರಿಯ ಪತ್ರಕರ್ತರು ಟಿಪ್ಪಣಿ ಮಾಡಿದ್ದಾರೆ.



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ನ್ಯೂಸ್

ಏರ್ ಇಂಡಿಯಾ ಸಂಸ್ಥೆಯನ್ನು ತುಂಡು ತುಂಡಾಗಿ ಕತ್ತರಿಸಿ, ಲಾಭ ತರುವ ಭಾಗಗಳನ್ನು ಖಾಸಗಿಯವರಿಗೆ ಮಾರಲಾಗುವುದು. ಸಾಲದ 50% ಹೊಣೆಗಾರಿಕೆ ಮತ್ತಿತರ ಕೆಲವು ಚಟುವಟಿಕೆಗಳು ಸರ್ಕಾರದ ಬಳಿ ಉಳಿಯುತ್ತವೆ. ಇದರಿಂದ ರಾಷ್ಟ್ರದ ಖಜಾನೆಗೆ ಇನ್ನೂ ಹೆಚ್ಚಿನ ನಷ್ಟ ಉಂಟಾಗುತ್ತದೆ. ತುಂಡರಿಸಿದ ಏರ್ ಇಂಡಿಯಾ ಕೊಳ್ಳಲು ಮುಂದೆ ಬರುವ ಕಾರ್ಪೋರೇಟ್ ಉದ್ಯಮಪತಿಗಳು ಪಡೆದ ಸಾಲ ತೀರಿಸದ ಭೂಪತಿಗಳು. ಆದರೆ, ಏರ್ ಇಂಡಿಯಾ, ಸಾಲದ ಕಂತು ಕಟ್ಟುವಲ್ಲಿ ಈ ವರೆಗೂ ತಪ್ಪಿಲ್ಲ. ಆದರೂ ಅದನ್ನು ಮಾರಲಾಗುತ್ತಿದೆ. ರಾಷ್ಟ್ರದ ಆಸ್ತಿಗಳನ್ನು ಮತ್ತು ಕಾರ್ಯನಿರ್ವಹಿಸುತ್ತಿರುವ ಉದ್ದಿಮೆಗಳನ್ನು, ರಾಷ್ಟ್ರ ಹಿತಕ್ಕೆ ವಿರುದ್ಧವಾಗಿ, ಬಂಗಾರದ ತಟ್ಟೆಯಲ್ಲಿಟ್ಟು ಸಮರ್ಪಿಸುವುದೇ ಈಗ ಜಾರಿಯಲ್ಲಿರುವ ಖಾಸಗೀಕರಣ ನೀತಿ ಎಂಬುದನ್ನು ಇದು ತೋರಿಸುತ್ತಿದೆ.



ಏರ್ ಇಂಡಿಯಾ ಮಾರಾಟ: ಒಂದು ಸಾರ್ವಜನಿಕ ಉದ್ದಿಮೆಯನ್ನು ಮುಗಿಸಿದ ಕತೆ



ಪ್ರಣೀತಾ ಝಾ

**ಭಾವಾನುವಾದ:
ಕೆ.ಎಂ.ನಾಗರಾಜ್**

ಮೂಲ ಲೇಖನ ಮತ್ತು ಚಿತ್ರ: ನ್ಯೂಸ್‌ಕ್ಲಿಕ್

ಏರ್ ಇಂಡಿಯಾದಲ್ಲಿ ಹೂಡಿದ್ದ 76% ಬಂಡವಾಳವನ್ನು ಮತ್ತು ಅದರ 100% ಒಡೆತನದ ಅಂಗಸಂಸ್ಥೆಗಳನ್ನು ಮಾರುವುದಾಗಿ ಭಾಜಪ ಸರ್ಕಾರವು ಮಾರ್ಚ್ 28 ರಂದು ಘೋಷಿಸಿದೆ. 52,000 ಕೋಟಿ ರೂಪಾಯಿಗಳ ಸಾಲದ ಹೊರೆ ಮತ್ತು ಅದು ಅನುಭವಿಸುತ್ತಿರುವ ನಷ್ಟಗಳಿಂದಾಗಿ ಏರ್ ಇಂಡಿಯಾ ಮಾರುವ ಪರಿಸ್ಥಿತಿ ಒದಗಿದೆ ಎನ್ನುವ ಸರಕಾರದ ಕಾರಣವು ತೋರಿಕೆಯದಾಗಿ ಕಾಣುತ್ತದೆ. ಏಕೆಂದರೆ, ಕಳೆದ ಮೂರು ವರ್ಷಗಳಲ್ಲಿ ಏರ್ ಇಂಡಿಯಾ ಲಾಭ ಗಳಿಸಿದೆ (2016-17ರಲ್ಲಿ 298 ಕೋಟಿ ರೂ).

ಪ್ರಫುಲ್ ಪಟೇಲ್ ಯುಪಿಎ - 1 ಸರ್ಕಾರದಲ್ಲಿ ವಿಮಾನಯಾನ ಮಂತ್ರಿಯಾಗಿದ್ದ ಅವಧಿಯಲ್ಲಿ, ಅವಶ್ಯಕತೆಗಿಂತ ಹೆಚ್ಚಿನ ಸಂಖ್ಯೆಯ ವಿಮಾನಗಳನ್ನು ಕೊಂಡದ್ದರಿಂದ ಏರ್ ಇಂಡಿಯಾ 22,000 ಕೋಟಿ ರೂಗಳಷ್ಟು ಸಾಲ ಹೊರುವಂತಾಯಿತು. ಇದೇ ಸರ್ಕಾರದ ಕೆಲವು ಅವಿವೇಕದ ನೀತಿಗಳಿಂದಾಗಿ ಏರ್ ಇಂಡಿಯಾದ ನಷ್ಟಗಳು ಬೃಹದಾಕಾರವಾಗಿ ಬೆಳೆದವು. ಏರ್ ಇಂಡಿಯಾ ನಷ್ಟದಿಂದ ಹೊರಬರಲು ಅನುವಾಗುವಂತೆ 30,000 ಕೋಟಿ ರೂ ಗಳ ಒಂದು ಪಾರು ಯೋಜನೆಯನ್ನು ಯುಪಿಎ-2 ಸರ್ಕಾರವು 2012ರಲ್ಲಿ ರೂಪಿಸಿತ್ತು.

"ಈಗ, ಏರ್ ಇಂಡಿಯಾದ ಕಾರ್ಯಾಚರಣೆ ಲಾಭದಾಯಕವಾಗಿದೆ. ಅದರ ಆರ್ಥಿಕ ಪರಿಸ್ಥಿತಿ ಹಾಗೂ ಕಾರ್ಯಕ್ಷಮತೆಗಳು ಸತತವಾಗಿ ಸುಧಾರಿಸುತ್ತಿವೆ" ಎಂಬುದಾಗಿ ವಿಮಾನಯಾನ ಮಂತ್ರಿ ಜಯಂತ್ ಸಿನ್ಹಾ ಈ ವರ್ಷದ ಫೆಬ್ರವರಿಯಲ್ಲಿ ಲೋಕ ಸಭೆಗೆ ತಿಳಿಸಿದ್ದರು. ಅದರ ವಾರ್ಷಿಕ ಬಡ್ಡಿ ಹೊರೆ 4,000 ಕೋಟಿ ರೂ ಗಳಷ್ಟಿದ್ದರೂ ಈವರೆಗೂ ಅದು ಬಡ್ಡಿ ಕಟ್ಟುವುದನ್ನು ತಪ್ಪಿಸಿಲ್ಲ ಎಂಬ ಅಂಶವು ಇಂದಿನ ವಸೂಲಾಗದ ಸಾಲಗಳ ಸಂದರ್ಭದಲ್ಲಿ ಗಮನ ಸೆಳೆಯುವಂತಿದೆ.

ಕುರುಡು ಕಾಸಿಗೆ ಮಾರಾಟ

ವರದಿಗಳ ಪ್ರಕಾರ, ಏರ್ ಇಂಡಿಯಾ ಕುರುಡು ಕಾಸಿಗೆ ಮಾರಾಟವಾಗಲಿದೆ. ಕೊಳ್ಳುವವರಿಗೆ ಅನುಕೂಲವಾಗುವಂತೆ ಇಡೀ ವ್ಯವಹಾರಕ್ಕೆ ಸಿಹಿ ಲೇಪಿಸಿದೆ ಬಿಜೆಪಿ ಸರ್ಕಾರ - ದೇಶೀಯ ಅಥವಾ ವಿದೇಶಿ ಸರ್ಕಾರಿ ಸಂಸ್ಥೆಗಳು ಬಿಡ್ ಮಾಡುವಂತಿಲ್ಲ. 50% ಸಾಲವನ್ನು ಸರಕಾರ ವಹಿಸಿಕೊಳ್ಳುತ್ತದೆ. ವಿಮಾನಯಾನಕ್ಕೆ ನೇರವಾಗಿ ಸಂಬಂಧಿಸದ ಭೂಮಿ ಮತ್ತಿತರ ವ್ಯವಹಾರಗಳನ್ನು ಒಂದು ವಿಶೇಷ ವಾಹಕ ಸಂಸ್ಥೆಗೆ ವಹಿಸಲಾಗುವುದು. ಏರ್ ಇಂಡಿಯಾದ ಉದ್ಯಮ ಮೌಲ್ಯ 45,000 ಕೋಟಿ ರೂ ಎಂದು ಅಂದಾಜು ಮಾಡಲಾಗಿದೆ. ಸಾಲ ಮತ್ತಿತರ ಬಾಬ್ತುಗಳನ್ನು ಕಳೆದ ನಂತರ ಅದರ ಮೌಲ್ಯ ಕೇವಲ 5,000 ಕೋಟಿ ರೂ ಗಳಿಗೆ ಇಳಿಯುತ್ತದೆ. ಅದನ್ನು ಕೊಳ್ಳಲು ಬಿಡ್ ಮಾಡುವವರ ಆಸ್ತಿಯ ಕನಿಷ್ಠ ಮೌಲ್ಯ 5,000 ಕೋಟಿ ರೂ ಇರಬೇಕು ಹಾಗೂ ಹಿಂದಿನ ಮೂರು ವರ್ಷಗಳಲ್ಲಿ ಅವರು ಲಾಭ ಗಳಿಸಿರಬೇಕು ಎಂಬ ಶರತ್ತುಗಳಿವೆ. ಆದಾಗ್ಯೂ, ಒಂಟಿಯಾಗಿ ಅಥವಾ ಜಂಟಿಯಾಗಿ ಬಿಡ್ ಮಾಡುವ ಭಾರತೀಯ ಕಂಪೆನಿಗಳಿಗೆ ಕೆಲವು ನಿಯಮಗಳನ್ನು ಸಡಿಲಗೊಳಿಸಲಾಗಿದೆ.

ಏರ್ ಇಂಡಿಯಾವನ್ನು ಕೊಳ್ಳುವ ಅಪೇಕ್ಷೆಯನ್ನು ಬಹಿರಂಗಪಡಿಸಿರುವ ಇಂಡಿಗೋ ಏರ್‌ಲೈನ್ಸ್ ಒಂಟಿಯಾಗಿ ಬಿಡ್ ಮಾಡುವ ಅರ್ಹತೆ ಪಡೆದಿದೆ ಮತ್ತು ಅದರಲ್ಲಿ ಪ್ರಫುಲ್ ಪಟೇಲ್ ಪಾಲುದಾರರು ಎಂದೂ ಹೇಳಲಾಗುತ್ತಿದೆ.

ಏರ್ ಇಂಡಿಯಾ ಎಡವಿದ್ದೆಲ್ಲಿ?

ದೇಶದ ಹೆಮ್ಮೆಯ ವಿಮಾನಯಾನ ಸಂಸ್ಥೆಯನ್ನು ಮಂಡಿಯೂರುವಂತೆ ಮಾಡಿದ ವ್ಯಕ್ತಿ ಪ್ರಫುಲ್ ಪಟೇಲ್ ಎಂಬುದನ್ನು ಈಗ ಬಹುತೇಕ ಎಲ್ಲರೂ ಒಪ್ಪುತ್ತಾರೆ ಮತ್ತು ಅದನ್ನು ಹಾಳುಗೆಡವಿದ ಕೃತ್ಯಗಳಿಗೆ ಮೌನ ಒಪ್ಪಿಗೆ ಕೊಟ್ಟ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವೂ ಕ್ಷಮಾರ್ಹವಲ್ಲ. ಎನ್‌ಸಿಪಿ ಮುಖಂಡರೂ ಮತ್ತು ಅಖಿಲ ಭಾರತ ಫುಟ್ಬಾಲ್ ಫೆಡರೇಷನ್‌ನ ಹಾಲೀ ಅಧ್ಯಕ್ಷರೂ ಆಗಿರುವ ಪ್ರಫುಲ್ ಪಟೇಲ್, 2004ರಲ್ಲಿ ನಾಗರಿಕ ವಿಮಾನಯಾನ ಖಾತೆಯ ಮಂತ್ರಿಯಾದರು.

ಆಗ ಏರ್ ಇಂಡಿಯಾದ ಸಿಎಂಡಿ ಆಗಿದ್ದ ತುಳಸಿದಾಸ್, ಒಂದು ಸಂದರ್ಶನದಲ್ಲಿ (2005) ಹೀಗೆ ಹೇಳಿದ್ದರು: "ಹೊಸ ವಿಮಾನಗಳನ್ನು ಕೊಳ್ಳುವ ಏರ್ ಇಂಡಿಯಾದ ಯೋಜನೆಗಳಿಗೆ ಸರ್ಕಾರದ ಸಂಪೂರ್ಣ ಬೆಂಬಲವಿದೆ. ಏರ್ ಇಂಡಿಯಾ ಬೆಳೆಯಬೇಕೆಂದು ಸರ್ಕಾರ ಬಯಸುತ್ತದೆ. ಈ ಸಂಬಂಧವಾಗಿ, ಪ್ರಧಾನ ಮಂತ್ರಿಗಳು ಮತ್ತು ನಾಗರಿಕ ವಿಮಾನಯಾನ ಖಾತೆಯ ಮಂತ್ರಿಗಳು ನನಗೆ ನಿರ್ದೇಶನ ನೀಡಿದ್ದಾರೆ". "ಹಿಂದಿನ ಯೋಜನೆಯ ಪ್ರಕಾರ, ನಾವು 18 ಸಣ್ಣ ಮತ್ತು 10 ದೊಡ್ಡ ವಿಮಾನಗಳನ್ನು ಕೊಳ್ಳುವುದಾಗಿತ್ತು. ಈಗ ಅದು ಅಪ್ರಸ್ತುತ. ನಮ್ಮ ಸದ್ಯದ ಯೋಜನೆಯಂತೆ 68 ವಿಮಾನಗಳನ್ನು ಕೊಳ್ಳಬೇಕಾಗುತ್ತದೆ - 18 ಸಣ್ಣ ಮತ್ತು 50 ದೊಡ್ಡ ವಿಮಾನಗಳು".

ಏರ್ ಇಂಡಿಯಾದ ಸೇವೆಗಳ ವಿಸ್ತರಣೆಯ ಅಗತ್ಯ ಮತ್ತು ವಿಮಾನಯಾನ ಕ್ಷೇತ್ರದಲ್ಲಿರುವ ಪೈಪೋಟಿಯ ಬಗ್ಗೆ ಪ್ರಸ್ತಾಪಿಸಿದ ತುಳಸಿದಾಸ್ "ಇತರ ವಿಮಾನ ಕಂಪೆನಿಗಳ ಪೈಪೋಟಿಯನ್ನು ಎದುರಿಸಲಾಗದಿದ್ದರೆ ಈ ವ್ಯವಹಾರದಲ್ಲಿ ಮುಂದುವರಿಯುವ ಹಕ್ಕು ನಮಗಿಲ್ಲ" ಎಂದು ವೀರಾವೇಶದಿಂದ ಹೇಳಿದ್ದರು. ವಾಸ್ತವವಾಗಿ, ಸರ್ಕಾರ ಕೊಟ್ಟದ್ದು ಕೇವಲ ಬೆಂಬಲವಲ್ಲ, 50,000 ಕೋಟಿ ರೂ ಗಳ ವೆಚ್ಚದಲ್ಲಿ 68 ವಿಮಾನಗಳನ್ನು ಕೊಳ್ಳುವಂತೆ ಹೇರಿದ ಒತ್ತಾಯ. ಎಂತಹ ಸಂದರ್ಭದಲ್ಲಿ ಎಂದರೆ, ಏರ್ ಇಂಡಿಯಾದ ವಾರ್ಷಿಕ ವಹಿವಾಟು ಕೇವಲ 7,000 ಕೋಟಿ ಇದ್ದ ಪರಿಸ್ಥಿತಿಯಲ್ಲಿ! ಈ ಅಂಶವನ್ನು ಸಿಎಜಿಯವರ ವರದಿಯಲ್ಲಿ (2011) ಪ್ರಸ್ತಾಪಿಸಿ ಟೀಕಿಸಲಾಗಿದೆ.

ಎರಡು ವಿಮಾನ ಸಂಸ್ಥೆಗಳ ವಿಲೀನ

ನಂತರ, ಸರಕಾರ ತನ್ನ ಅಧೀನದ ಮತ್ತು ಲಾಭ ಗಳಿಸುತ್ತಿದ್ದ ಎರಡು ವಿಮಾನ ಸಂಸ್ಥೆಗಳನ್ನು - ಹೊರ ದೇಶಗಳಿಗೆ ಹಾರುತ್ತಿದ್ದ ಏರ್ ಇಂಡಿಯಾ ಮತ್ತು ದೇಶದೊಳಗೆ ಹಾರುತ್ತಿದ್ದ ಇಂಡಿಯನ್ ಏರ್‌ಲೈನ್ಸ್ - ಈ ಎರಡೂ ಸಂಸ್ಥೆಗಳ ವಿರೋಧವನ್ನೂ ಲೆಕ್ಕಿಸದೆ, ವಿಲೀನಗೊಳಿಸಿತು. ಆ ಸಮಯದಲ್ಲಿ, ಇಂಡಿಯನ್ ಏರ್‌ಲೈನ್ಸ್, ವಿಮಾನಯಾನ ಮಾರುಕಟ್ಟೆಯ ಮುಂಚೂಣಿಯಲ್ಲಿತ್ತು ಮತ್ತು ಅದರಲ್ಲಿ 42% ಪಾಲು ಹೊಂದಿತ್ತು. 2007ರಲ್ಲಿ ಜರುಗಿದ ಈ ಬೃಹತ್ ವಿಲೀನದಿಂದಾಗಿ ಅದು ಆರಂಭದ ವರ್ಷದಲ್ಲೇ 10,000 ಕೋಟಿ ರೂ ಗಳ ನಷ್ಟ ಅನುಭವಿಸಿತು.

ಈ ವಿಲೀನದ ಬಗ್ಗೆ ಏರ್ ಕಾರ್ಪೋರೇಷನ್ ಎಂಪ್ಲಾಯೀಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಜೆ.ಬಿ.ಕಡಿಯನ್ ವ್ಯಕ್ತಪಡಿಸಿದ ಪ್ರತಿಕ್ರಿಯೆ ಹೀಗಿದೆ: "ಈ ಎರಡು ವಿಮಾನಯಾನ ಸಂಸ್ಥೆಗಳ ವಿಲೀನವು ಏರ್ ಇಂಡಿಯಾದ ಶವ ಪೆಟ್ಟಿಗೆಗೆ ಹೊಡೆದ ಕೊನೆಯ ಮೊಳೆ". "ಇಂಡಿಯನ್ ಏರ್‌ಲೈನ್ಸ್ ಬಲಶಾಲಿಯಾಗಿತ್ತು. ಆದರೆ, ಸರ್ಕಾರದ ವಿಮಾನಯಾನ ಸಂಸ್ಥೆಯೊಂದು ಬಲಶಾಲಿಯಾಗಿರುವುದು ಸರ್ಕಾರಕ್ಕೇ ಬೇಕಿಲ್ಲ. ಹಾಗಿಲ್ಲವಾದರೆ, ಖಾಸಗಿ ವಿಮಾನಯಾನ ಕಂಪೆನಿಗಳು ಲಾಭ ಮಾಡುವುದಾದರೂ ಹೇಗೆ? ಅವರಿಗೆ ಉತ್ತೇಜನ ಕೊಡಬೇಕೆಂದಾದರೆ, ಇಂಡಿಯಾದ ಆಕಾಶದಿಂದ ಇಂಡಿಯನ್ ಏರ್‌ಲೈನ್ಸ್ ಎಂಬ ಹೆಸರನ್ನೇ ಮಂಗಮಾಯ ಮಾಡಬೇಕಾಗುತ್ತದೆ" ಎಂಬುದಾಗಿ ಜೆ.ಬಿ.ಕಡಿಯನ್ ಹೇಳುತ್ತಾರೆ.

ದ್ವಿಪಕ್ಷೀಯ ಒಪ್ಪಂದಗಳು

2004-05ರ ಅವಧಿಯಲ್ಲಿ ಭಾರತ ಸರ್ಕಾರವು ಕೊಲ್ಲಿ ದೇಶಗಳೊಂದಿಗೆ ಒಂದು ದ್ವಿಪಕ್ಷೀಯ ಒಪ್ಪಂದ ಮಾಡಿಕೊಂಡಿತ್ತು. ಅದರಂತೆ, ಎರಡೂ ದೇಶಗಳು ಸಮಾನವಾಗಿ ಒಂದು ನಿರ್ದಿಷ್ಟ ಸಂಖ್ಯೆಯ ವಾಣಿಜ್ಯ ಹಾರಾಟ ಮಾಡಬಹುದಿತ್ತು. ಆದರೆ, ಅತ್ಯಂತ ಲಾಭದಾಯಕವಾಗಿದ್ದ ಈ ಮಾರ್ಗದಲ್ಲಿ ಖಾಸಗಿ ಮತ್ತು ಅಂತರಾಷ್ಟ್ರೀಯ ಏರ್‌ಲೈನ್‌ಗಳಿಗೆ ಕೆಲವು ಅನುಕೂಲಗಳು ಒದಗುವಂತೆ ನೋಡಿಕೊಂಡಿದ್ದರ ಪರಿಣಾಮವಾಗಿ, ಈ ಮಾರ್ಗದಲ್ಲಿ ತನ್ನ ಆದಾಯದ 40% ಭಾಗ ಪಡೆಯುತ್ತಿದ್ದ ಇಂಡಿಯನ್ ಏರ್‌ಲೈನ್ಸ್ ಆದಾಯ 10%ಗೆ ಇಳಿಯಿತು. ಇಂತಹ ಪರಿಸ್ಥಿತಿಯಲ್ಲಿ, ಒಪ್ಪಂದದ ರೀತಿಯ ಹಾರಾಟಗಳಿಂದಾಗಿ ಏರ್ ಇಂಡಿಯಾ ನಷ್ಟ ಅನುಭವಿಸಿತು. ಪರಿಣಾಮವಾಗಿ, ಜೆಟ್ ಏರ್‌ವೇಸ್ ಮತ್ತು ಎಮಿರೇಟ್ಸ್ ನಂತಹ ಅಂತರಾಷ್ಟ್ರೀಯ ಏರ್‌ಲೈನ್‌ಗಳು ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್‌ನ ವ್ಯವಹಾರವನ್ನು ಕಬಳಿಸಿ ಈ ಮಾರ್ಗದಲ್ಲಿ ಪಾರಮ್ಯ ಪಡೆದವು. ಈ ಅಂಶವೂ ಸಿಎಜಿ ವರದಿಯಲ್ಲಿ ಪ್ರಸ್ತಾಪವಾಗಿದೆ..

ಮೊದಲೇ ಸಾಲದಲ್ಲಿ ಮುಳುಗಿದ್ದ ಈ ಸಂಸ್ಥೆಗಳು ಅವಶ್ಯಕತೆ ಇಲ್ಲದಿದ್ದರೂ ಹೆಚ್ಚಿನ ವಿಮಾನಗಳನ್ನು ಕೊಳ್ಳುವಂತೆ ನೋಡಿಕೊಳ್ಳಲಾಯಿತು. ನಂತರ, ಹೆಚ್ಚಿನ ಲಾಭ ತರುತ್ತಿದ್ದ ಮಾರ್ಗಗಳನ್ನು ಖಾಸಗಿ ಮತ್ತು ಅಂತರಾಷ್ಟ್ರೀಯ ಏರ್‌ಲೈನ್‌ಗಳಿಗೆ ಅನುಕೂಲವಾಗುವಂತೆ ನೋಡಿಕೊಳ್ಳಲಾಯಿತು. ಹಾಗಾಗಿ, ಹೆಚ್ಚಿನ ಸಂಖ್ಯೆಯ ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯ ಹೊಂದಿದ್ದ ಇಂಡಿಯನ್ ಏರ್ ಲೈನ್ಸ್‌ನ ವಿಮಾನಗಳು ಬಳಕೆಯಾಗದೆ ನಿಷ್ಪ್ರಯೋಜಕವಾದವು. ಏರ್ ಇಂಡಿಯಾದ ಮಾಜಿ ಕಾರ್ಯಕಾರಿ ನಿರ್ದೇಶಕರಾಗಿದ್ದ ಜಿತೇಂದ್ರ ಭಾರ್ಗವ ಅವರು ಈ ಸಂಸ್ಥೆಗೆ ಒದಗಿದ ಈ ದುರ್ಗತಿಯ ಬಗ್ಗೆ 2013ರಲ್ಲಿ ಬರೆದಿರುವ The Descent of Air India (ಧರೆಗಿಳಿದ ಏರ್ ಇಂಡಿಯಾ) ಎಂಬ ಒಂದು ಪುಸ್ತಕವನ್ನು, ಪ್ರಫುಲ್ ಪಟೇಲ್ ಹೂಡಿದ ಮಾನನಷ್ಟ ಮೊಕದ್ದಮೆಯ ಕಾರಣದಿಂದಾಗಿ ಹಿಂಪಡೆದು ಪ್ರತಿಗಳನ್ನು ನಾಶಮಾಡಲಾಗಿದೆ. ಅದನ್ನು ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಪ್ರಕಟಿಸಿರುವ ಅಮೆಜಾನ್ ಈಗ ಆನ್‌ಲೈನ್(ಇ-ಪುಸ್ತಕ) ಮಾರಾಟಕ್ಕಿಟ್ಟಿದೆ.

ಯುಪಿಎ ಸರ್ಕಾರದ ಅವಧಿಯಲ್ಲಿ ಅವಶ್ಯಕತೆಗಿಂತಲೂ ಬಹಳ ಹೆಚ್ಚಿನ ಸಂಖ್ಯೆಯ ವಿಮಾನಗಳ ಖರೀದಿಯ ಬಗ್ಗೆ, ವಿಮಾನಗಳನ್ನು ಗುತ್ತಿಗೆ ಕೊಟ್ಟ ಬಗ್ಗೆ ಮತ್ತು ಲಾಭದಾಯಕವಾಗಿದ್ದ ಮಾರ್ಗಗಳನ್ನು ಬಿಟ್ಟುಕೊಟ್ಟ ಬಗ್ಗೆ ನ್ಯಾಯವಾದಿ-ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಭೂಷಣ್, 2017ರ ಮೇ ತಿಂಗಳಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಮೇಲೆ ಸಿಬಿಐ ವಿಚಾರಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿತು. ಅದರಂತೆ, ಸಿಬಿಐ ಮೂರು ಕೇಸ್ ದಾಖಲಿಸಿದೆ. ಮತ್ತು ಏರ್ ಇಂಡಿಯಾ - ಇಂಡಿಯನ್ ಏರ್‌ಲೈನ್ಸ್ ವಿಲೀನದ ಬಗ್ಗೆಯೂ ವಿಚಾರಣೆ ಆರಂಭಿಸಿದೆ.

ಅದೇ ಸಮಯದಲ್ಲಿ(ಮೇ, 2017), ಈ ಬಗ್ಗೆ ಒಂದು ವರದಿ ತಯಾರಿಸಿದ ನೀತಿ ಆಯೋಗವು ಏರ್ ಇಂಡಿಯಾ ಸಂಸ್ಥೆಯನ್ನು ಸಂಪೂರ್ಣವಾಗಿ ಖಾಸಗೀಕರಿಸಬೇಕೆಂದು ಮಾಡಿದ್ದ ಶಿಫಾರಸನ್ನು ಎನ್‌ಡಿಎ ಸರ್ಕಾರವು ಕಳೆದ ವರ್ಷ ಜೂನ್‌ನಲ್ಲಿ ಒಪ್ಪಿಕೊಂಡಿತ್ತು.

ಏರ್ ಇಂಡಿಯಾದ ಸುಮಾರು ಹತ್ತು ಸಾವಿರ ಉದ್ಯೋಗಿಗಳನ್ನು ಪ್ರತಿನಿಧಿಸುವ ಒಂಭತ್ತು ಯೂನಿಯನ್‌ಗಳನ್ನು ಒಳಗೊಂಡ ಜಂಟಿ ವೇದಿಕೆಯು ಈ ತೀರ್ಮಾನವನ್ನು ಪ್ರಬಲವಾಗಿ ವಿರೋಧಿಸಿದೆ. ಖಾಸಗೀಕರಣದ ಬಗ್ಗೆಯೇ ತಮ್ಮ ವಿರೋಧವನ್ನು ಪುನರುಚ್ಚರಿಸಿರುವ ಈ ಯೂನಿಯನ್‌ಗಳು ತಮ್ಮ ಹೋರಾಟ ಮುಂದುವರೆಸುವುದಾಗಿ ಹೇಳಿವೆ. ಈ ಕಂಪೆನಿಯ ಆಗು-ಹೋಗುಗಳು ನಮಗೂ ಸಂಬಂಧಿಸಿವೆ. ಆದರೆ, ಈ ವರೆಗೂ ಇಷ್ಟೆಲ್ಲಾ ಅಪಾಯಕಾರಿ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ, ಸೌಜನ್ಯಕ್ಕಾದರೂ, ಒಮ್ಮೆಯೂ ನಮಗೆ ಏನನ್ನೂ ತಿಳಿಸಿಲ್ಲ. ಇದು ನಮ್ಮ ಅಳಿವು ಉಳಿವಿನ ಪ್ರಶ್ನೆ. ಹಾಗಾಗಿ, ನಮ್ಮ ಹೋರಾಟ ಮುಂದುವರೆಯುತ್ತದೆ ಎಂದು ವೇದಿಕೆ ತಿಳಿಸಿದೆ.

2018 ಮಾರ್ಚ್ 29ರಂದು ನೀಡಿರುವ ತಮ್ಮ ಹೇಳಿಕೆಯಲ್ಲಿ ಏರ್ ಇಂಡಿಯಾ ಮಾರಾಟದ ತೀರ್ಮಾನವನ್ನು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಖಂಡಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ, ಹಾಲಿ ಕೆಲಸಗಾರರನ್ನು ಒಂದು ವರ್ಷದವರೆಗೆ ಮಾತ್ರ ಉಳಿಸಿಕೊಳ್ಳುವ ಹೊಣೆಗಾರಿಕೆ ಏರ್ ಇಂಡಿಯಾ ಕೊಳ್ಳುವ ಮಾಲಿಕರಿಗೆ ಇರುತ್ತದೆ ಎಂಬ ಅಂಶವನ್ನು ತೀವ್ರವಾಗಿ ಖಂಡಿಸಿದ್ದಾರೆ. ವಾಸ್ತವಿಕವಾಗಿ, ಒಂದು ಸಂಸ್ಥೆಯ ಕಾರ್ಯ ನಿರ್ವಹಣೆ ಸಾಧ್ಯವಾಗುವುದು ಅದರ ಉದ್ಯೋಗಿಗಳಿಂದಲೇ. ಅಂತಹ ಉದ್ಯೋಗಿಗಳನ್ನು ಇಷ್ಟೊಂದು ತಿರಸ್ಕಾರದಿಂದ, ಕಾಲ ಕಸದಂತೆ ಕಂಡದ್ದು ಈ ವರೆಗೆ ಇಲ್ಲ. ಇದೊಂದು ರಾಷ್ಟ್ರ-ವಿರೋಧಿ ಕೃತ್ಯ ಎಂಬುದಾಗಿ ಅವರು ಹೇಳಿದ್ದಾರೆ.


ಏರ್ ಇಂಡಿಯಾ ಸಂಸ್ಥೆಯನ್ನು ತುಂಡು ತುಂಡಾಗಿ ಕತ್ತರಿಸಿ, ಲಾಭ ತರುವ ಭಾಗಗಳನ್ನು ಖಾಸಗಿಯವರಿಗೆ ಮಾರಲಾಗುವುದು. ಸಾಲದ 50% ಹೊಣೆಗಾರಿಕೆ ಮತ್ತಿತರ ಕೆಲವು ಚಟುವಟಿಕೆಗಳು ಒಂದು ವಿಶೇಷ ವಾಹಕದ ಮೂಲಕ ಸರ್ಕಾರದ ಬಳಿ ಉಳಿಯುತ್ತವೆ. ಇದರಿಂದ ರಾಷ್ಟ್ರದ ಖಜಾನೆಗೆ ಇನ್ನೂ ಹೆಚ್ಚಿನ ನಷ್ಟ ಉಂಟಾಗುತ್ತದೆ. ತುಂಡರಿಸಿದ ಏರ್ ಇಂಡಿಯಾ ಕೊಳ್ಳಲು ಮುಂದೆ ಬರುವ ಕಾರ್ಪೋರೇಟ್ ಉದ್ಯಮಪತಿಗಳು ಪಡೆದ ಸಾಲ ತೀರಿಸದ ಭೂಪತಿಗಳು. ಆದರೆ, ಏರ್ ಇಂಡಿಯಾ, ಸಾಲದ ಕಂತು ಕಟ್ಟುವಲ್ಲಿ ಈ ವರೆಗೂ ತಪ್ಪಿಲ್ಲ. ಆದರೂ ಅದನ್ನು ಮಾರಲಾಗುತ್ತಿದೆ. ಇದು ಏನನ್ನು ತೋರಿಸುತ್ತದೆ ಎಂದರೆ, ರಾಷ್ಟ್ರದ ಆಸ್ತಿಗಳನ್ನು ಮತ್ತು ಕಾರ್ಯನಿರ್ವಹಿಸುತ್ತಿರುವ ಉದ್ದಿಮೆಗಳನ್ನು, ರಾಷ್ಟ್ರ ಹಿತಕ್ಕೆ ವಿರುದ್ಧವಾಗಿ, ಬಂಗಾರದ ತಟ್ಟೆಯಲ್ಲಿಟ್ಟು ಸಮರ್ಪಿಸುವುದೇ ಈಗ ಜಾರಿಯಲ್ಲಿರುವ ಖಾಸಗೀಕರಣ ನೀತಿ. ಇಂತಹ ವಿನಾಶಕಾರಿ ಕ್ರಮಗಳನ್ನು ಐಕ್ಯ ಹೋರಾಟಗಳ ಮೂಲಕ ಹಿಮ್ಮೆಟ್ಟಿಸಬೇಕು ಎಂದು ತಪನ್ ಸೇನ್ ಕಾರ್ಮಿಕರಿಗೆ ಕರೆ ಕೊಟ್ಟಿದ್ದಾರೆ.

ಪಶ್ಚಿಮ ಬಂಗಾಲ ಪಂಚಾಯತ್ ಚುನಾವಣೆಗಳ ನಾಟಕ
ಬೆದರಿಕೆ, ಹಿಂಸಾಚಾರಗಳಿಂದ 34% ಸೀಟುಗಳಲ್ಲಿ ‘ಅವಿರೋಧ’ ಆಯ್ಕೆ!

1978ರಿಂದ ಬುಡಮಟ್ಟದ ಪ್ರಜಾಪ್ರಭುತ್ವದ ಪ್ರತೀಕವಾಗಿ ದೇಶದಲ್ಲಿ ಮತ್ತು ವಿದೇಶಗಳಲ್ಲೂ ಗಮನ ಸೆಳೆದಿರುವ ಪಶ್ಚಿಮ ಬಂಗಾಲದ ಪಂಚಾಯತು ಚುನಾವಣೆ ಈ ಬಾರಿ ಕೇವಲ ಕಪಟ ನಾಟಕದ ಮಟ್ಟಕ್ಕಿಳಿದಿದೆ. ಕೊಲ್ಕತ ಹೈಕೋರ್ಟಿನ ಮಧ್ಯಪ್ರವೇಶದ ನಂತರವೂ ಪ್ರತಿಪಕ್ಷಗಳು, ಅದರಲ್ಲೂ ಸಿಪಿಐ(ಎಂ) ಸ್ಪರ್ಧಿಸದಂತೆ ಮಾಡಲು ಆಳುವ ಪಕ್ಷ ಹಿಂಸಾಚಾರ ಹರಿಯ ಬಿಟ್ಟಿದ್ದರಿಂದಾಗಿ 34.2% ಸ್ಥಾನಗಳಲ್ಲಿ ಸ್ಪರ್ಧೆಯೇ ಇಲ್ಲದಂತಾಗಿದೆ. ಇದು ಪ್ರಜಾಪ್ರಭುತ್ವದ ಕೊಲೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ. ಕಳೆದ 40 ವರ್ಷಗಳಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಸ್ಪರ್ಧೆಯಿಲ್ಲದಂತೆ ಆಗಿಲ್ಲೆಂಬುದನ್ನು ಜತೆಗಿರುವ ಗ್ರಾಫ್ ತೋರಿಸುತ್ತದೆ.

ಎಪ್ರಿಲ್ 28ರಂದು ನಾಮಪತ್ರ ವಾಪಾಸಿನ ಅವಧಿ ಮುಗಿದ ಮೇಲೆ ಪ್ರಕಟಿಸಿದ ರಾಜ್ಯ ಚುನಾವಣಾ ಆಯೋಗದ ಅಂಕಿ-ಅಂಶಗಳ ಪ್ರಕಾರ ಸ್ಪರ್ಧೆಯಿಲ್ಲದಂತಾದ ಸ್ಥಾನ ಗಳ ಸಂಖ್ಯೆಗಳು ಹೀಗಿವೆ:

* **3358 ಗ್ರಾಮ ಪಂಚಾಯತುಗಳ 48,650 ಸ್ಥಾನಗಳಲ್ಲಿ 16814, ಅಂದರೆ 34.6%**
* **341 ಪಂಚಾಯತು ಸಮಿತಿಗಳ 9217 ಸ್ಥಾನಗಳಲ್ಲಿ 3059, ಅಂದರೆ 33.2%**
* **20 ಜಿಲ್ಲಾ ಪರಿಷತ್ತುಗಳ 825 ಸ್ಥಾನಗಳಲ್ಲಿ 203, ಅಂದರೆ 24.6%**



ಮೂರೂ ಹಂತಗಳಲ್ಲಿ ಟಿಎಂಸಿ ಯ ನಾಮಪತ್ರಗಳ ಸಂಖ್ಯೆ ನಿಜವಾಗಿ ಇರುವ ಸ್ಥಾನಗಳಿಗಿಂತಲೂ ಹೆಚ್ಚು ಎಂಬುದು ಗಮನಾರ್ಹ. ಬಿಜೆಪಿಗೆ 60% ಸ್ಥಾನಗಳಲ್ಲಿ ನಾಮಪತ್ರ ಸಲ್ಲಿಸಲು ಸಾಧ್ಯವಾಗಿದ್ದರೆ, ಎಡರಂಗಕ್ಕೆ ಕೇವಲ 38% ಸ್ಥಾನಗಳಲ್ಲಿ ಮಾತ್ರ ಎಂಬುದು ಆಳುವ ಪಕ್ಷದ ಹಿಂಸಾಚಾರದ ಪ್ರಮಾಣ ಮತ್ತು ಅದು ಎಡರಂಗದ ವಿರುದ್ಧವೇ ಅತಿ ಹೆಚ್ಚು ಎಂಬುದನ್ನು ತೋರಿಸುತ್ತದೆ.

ಜಿಲ್ಲಾ ಪರಿಷತ್ತಿನ 825 ಸ್ಥಾನಗಳಿಗೆ ಟಿಎಂಸಿಯಿಂದ 1000 ನಾಮಪತ್ರಗಳು ಸಲ್ಲಿಕೆಯಾಗಿವೆ, ಬಿಜೆಪಿಯಿಂದ 782 ಮತ್ತು ಎಡರಂಗದಿಂದ 537.

9217 ಪಂಚಾಯತು ಸಮಿತಿ ಸ್ಥಾನಗಳಿಗೆ ಟಿಎಂಸಿಯಿಂದ 12 590, ಬಿಜೆಪಿಯಿಂದ 6149 ಮತ್ತು ಎಡರಂಗದಿಂದ 4400 ನಾಮಪತ್ರಗಳು ಮಾತ್ರ.

48650 ಗ್ರಾಮ ಪಂಚಾಯತು ಸ್ಥಾನಗಳಿಗೆ ಟಿಎಂಸಿಯಿಂದ 58978, ಬಿಜೆಪಿಯಿಂದ 27,935 ಮತ್ತು ಎಡರಂಗದಿಂದ ಕೇವಲ 17319 ನಾಮಪತ್ರಗಳನ್ನು ಸಲ್ಲಿಸಲು ಸಾಧ್ಯವಾಗಿದೆ.

2013ರ ಪಂಚಾಯತು ಚುನಾವಣೆಗಳೂ ಟಿಎಂಸಿ ಆಳ್ವಿಕೆಯಲ್ಲಿಯೇ ನಡೆದವು. ಆಗಲೂ ಆಳುವ ಪಕ್ಷ ಹಿಂಸಾಚಾರ ನಡೆಸಲು ಪ್ರಯತ್ನಿಸಿತು. ಆದರೆ ಆಗಿನ ರಾಜ್ಯ ಚುನಾವಣಾ ಆಯುಕ್ತರ ಧೀರ ನಿಲುವು ಮತ್ತು ಸುಪ್ರಿಂ ಕೋರ್ಟಿನ ಮಧ್ಯಪ್ರವೇಶದಿಂದಾಗಿ ಚುನಾವಣೆಗಳು ಸಮಯಕ್ಕೆ ಸರಿಯಾಗಿ ನಡೆದವು.



ಆದರೆ ಈ ಬಾರಿ ರಾಜ್ಯ ಚುನಾವಣಾ ಆಯೋಗ ರಾಜ್ಯ ಸರಕಾರದ ಕೈಗೊಂಬೆಯಂತೆ ವರ್ತಿಸಿದೆ. ವ್ಯಾಪಕ ಹಿಂಸಾಚಾರ ನಡೆದರೂ ಮಧ್ಯಪ್ರವೇಶಿಸಲು ನಿರಾಕರಿಸಿದೆ. ಇದರಿಂದಾಗಿ ಮಧ್ಯಪ್ರವೇಶಿಸಿದ ಹೈಕೋರ್ಟಿನ ತರಾಟೆಯನ್ನೂ ಅದು ಎದುರಿಸಬೇಕಾಯಿತು. ಆದರೂ ಅದು ರಾಜ್ಯ ಸರಕಾರದ ಕೈಗೊಂಬೆಯಾಗಿಯೇ ಉಳಿದಿದೆ.

ಪ್ರತಿರೋಧ ಆರಂಭವಾಗಿದೆ –ಸೂರ್ಯಕಾಂತ್ ಮಿಶ್ರ

ನಾಮಪತ್ರ ಸಲ್ಲಿಸದಂತೆ ತಡೆಯುವುದಲ್ಲದೆ, ಎಲ್ಲ ಬೆದರಿಕೆಗಳನ್ನು ಎದುರಿಸಿಯೂ ನಾಮಪತ್ರ ಸಲ್ಲಿಸಿದವರೂ ಅದನ್ನು ವಾಪಾಸು ಪಡೆಯುವಂತೆಯೂ ಹಿಮಸಾಚಾರದ ಪ್ರಯತ್ನದ ನಡೆದಿದೆ. ಆದರೆ ಅದಕ್ಕೆ ಹಲವೆಡೆಗಳಲ್ಲಿ ತೀವ್ರ ಪ್ರತಿರೋಧಗಳು ವ್ಯಕ್ತವಾಗಿವೆ.

ಉದಾಹರಣೆಗೆ, ಎಪ್ರಿಲ್ 26 ರಂದು 60 ಟಿಎಂಸಿ ಗೂಂಡಾಗಳು ಬರ್ದ್ವಾನ್ ಜಿಲ್ಲೆಯ ಶಾಲ್ಕುನಿ ಗ್ರಾಮದ ಸಿಪಿಐ(ಎಂ) ಅಭ್ಯರ್ಥಿಯನ್ನು ನಾಮಪತ್ರವನ್ನು ಹಿಂತೆಗೆದುಕೊಳ್ಳುವಂತೆ ಬೆದರಿಸಲು ಹಳ್ಳಿಗೆ ನುಗ್ಗಲು ಪ್ರಯತ್ನಿಸಿದಾಗ ಗ್ರಾಮಸ್ಥರು ಒಟ್ಟಾಗಿ ಅವರನ್ನು ಎದುರಿಸಿ ನಿಂತರು. ಇದನ್ನು ಕಂಡ ಟಿಎಂಸಿ ಗೂಂಡಾಗಳು ಕಾಲು ಕಿತ್ತರು.

ಪಶ್ಚಿಮ ಮೇದಿನಿಪುರ ಜಿಲ್ಲೆಯ ಕೇಶೂಪುರ ಗ್ರಾಮದ ಮಹಿಳೆಯರು ಟಿಎಂಸಿ ಗೂಂಡಾಗಳು ಬರುತ್ತಿರುವುದನ್ನು ನೋಡಿದ ಕೂಡಲೇ ಸಾಮೂಹಿಕವಾಗಿ ಶಂಖಗಳನ್ನು ಊದಲಾರಮಭಿಸಿದರು. ಆಗ ಗ್ರಾಮದ ಜನಗಳೆಲ್ಲ ಕೈಗೆ ಸಿಕ್ಕ ಆಯುಧಗಳನ್ನು ಹಿಡಿದು ಧಾವಿಸಿ ಬಂದರು. ಇದನ್ನು ನೋಡುತ್ತಿದ್ದಂತೆ ಮೋಟಾರು ಸೈಕಲುಗಳಲ್ಲಿ ಬರುತ್ತಿದ್ದ ಗೂಂಡಾಗಳು ಪರಾರಿಯಾದರು.

ಇಂತಹ ಹಿಂದೆಂದೂ ಕಾಣದ ಪ್ರತಿರೋಧಗಳು ಈಗ ಆರಂಭವಾಗಿವೆ. ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳು ಬಂದೂಕಿನ ಎದುರೂ ಜಗ್ಗದೆ ನಿಲ್ಲುತ್ತಿದ್ದಾರೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ಎಪ್ರಿಲ್ 30 ರಂದು ಪಕ್ಷದ ರಾಜ್ಯಸಮಿತಿಯ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತಾಡುತ್ತ ಹೇಳಿದ್ದಾರೆ.



ಕಠುವ ಆಪಾದಿತರ ಬೆಂಬಲಿಗರು ಮತ್ತೆ ಜಮ್ಮು-ಕಾಶ್ಮೀರ ಸಂಪುಟದಲ್ಲಿ

ಎಂಟು ವರ್ಷದ ಬಾಲಕಿಯ ಅತ್ಯಾಚಾರ ಮತ್ತು ಕೊಲೆಯ ಭೀಕರ ಪ್ರಕರಣ ಬೇಶಾದ್ಯಂತ ಆಕ್ರೋಶ ಎಬ್ಬಿಸಿ ಪ್ರಧಾನಿಗಳೂ ಮೌನ ಮುರಿಯುವಂತೆ ಮಾಡಿದ ಮೇಲೆ ಅತ್ಯಾಚಾರಿಗಳನ್ನು ಬೆಂಬಲಿಸಿದರು ಎನ್ನಲಾದ ಇಬ್ಬರು ಜಮ್ಮು-ಕಾಶ್ಮೀರದ ಪಿಡಿಪಿ-ಬಿಜೆಪಿ ಸಂಪುಟದ ಬಿಜೆಪಿ ಮಂತ್ರಿಗಳು ರಾಜೀನಾಮೆ ನೀಡಿದರು.

ಸಂಪುಟದ ಪುನರ್ರಚನೆ ಮಾಡಲಾಯಿತು. ಆದರೆ ಹೊಸ ಸಂಪುಟದಲ್ಲಿ ಮಂತ್ರಿಯಾಗಿರುವ ಕಠುವಾದ ಶಾಸಕ ರಾಜೀವ್ ಜಸ್ರೋಟಿಯ ಕೂಡ ಅತ್ಯಾಚಾರದ ಆರೋಪಿಗಳನ್ನು ಬೆಂಬಲಿಸಿದ ಸಭೆಗಳಲ್ಲಿ ಭಾಗವಹಿದ್ದಷ್ಟೇ ಅಲ್ಲ, ಅವರ ಪರವಾಗಿ ಹೇಳಿಕೆಗಳನ್ನೂ ನೀಡಿದ್ದರು ಎಂದು ವರದಿಯಾಗಿದೆ. ಕೊಲೆಯಾದ ಬಾಲಕಿಯ ಕುಟುಂಬದ ಪರವಾಗಿ ನ್ಯಾಯಾಲಯದಲ್ಲಿ ವಾದಿಸುತ್ತಿರುವ ವಕೀಲರ ಪ್ರಕಾರ ಬಕ್ರೆವಾಲ್ ಅಲೆಮಾರಿ ಸಮುದಾಯವನ್ನು ಕಠುವಾದಿಂದ ಎತ್ತಂಗಡಿ ಮಾಡಬೇಕೆಂದೂ ಈತ ಹೇಳಿದ್ದರಂತೆ.

ಈ ಸಂಪುಟ ಪುನರ್ರಚನೆಯಲ್ಲಿ ಬಿಜೆಪಿಯ ಉಪಮುಖ್ಯಂತ್ರಿಯನ್ನು ವಿಧಾನಸಭಾಧ್ಯಕ್ಷರನ್ನಾಗಿ ಮಾಡಿ, ಬಿಜೆಪಿ ವಿಧಾನ ಸಭಾಧ್ಯಕ್ಷರನ್ನು ’ ಉಪಮುಖ್ಯಮಂತ್ರಿ ಮಾಡಲಾಗಿದೆ ಎಂಬುದೂ ಗಮನಾರ್ಹ. ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂಬ ಜಮ್ಮುವಿನ ಕೋಮುವಾದಿಗಳ ಬೇಡಿಕೆಯನ್ನು ಒಪ್ಪದೆ ರಾಜ್ಯದ ವಿಶೇಷ ಪೋಲೀಸ್ ತನಿಖೆಯನ್ನು ಮುಂದುವರೆಸಲಾಗುವುದು ಎಂಬ ಮುಖ್ಯಮಂತ್ರಿಗಳ ನಿಲುವನ್ನು ಬೆಂಬಲಿಸಿರುವುದೇ ಹಿಂದಿನ ಬಿಜೆಪಿ ಉಪಮುಖ್ಯಮಂತ್ರಿಯನ್ನು ಬದಲಿಸಲು ಕಾರಣ ಎಂದೂ ಹೇಳಲಾಗಿದೆ.

ಪ್ರಧಾನ ಮಂತ್ರಿಗಳೂ ತಮ್ಮ ದೀರ್ಘ ಮೌನವನ್ನು ಮುರಿಯುವಂತೆ ಮಾಡಿದ ಈ ಪ್ರಕರಣ ಒಂದು ಚಿಕ್ಕ ಘಟನೆಯಷ್ಟೇ ಎಂದು ಹೊಸ ಉಪಮುಖ್ಯಮಂತ್ರಿಗಳು ಹೇಳಿರುವುದು ಪ್ರಧಾನಿಗಳ ಆತಂಕದ ಮಾತುಗಳೂ ಕೇವಲ ನಾಟಕವೇ ಎಂಬ ಪ್ರಶ್ನೆಯನ್ನು ರಾಜ್ಯದ, ಅದರಲ್ಲೂ ಕಾಶ್ಮಿರ ಕಣಿವೆಯ ಜನ ಕೇಳುವಂತೆ ಮಾಡಿದೆ.

ಬಹುಶಃ ಈ ನಾಟಕದ ಇನ್ನೊಂದು ಭಾಗವಾಗಿ ಈ ಅಮಾನುಷ ಘಟನೆಯ ವಿಚಾರಣೆಯನ್ನೇ ದಾರಿ ತಪ್ಪಿಸುವಂತೆ ಮಾಡುವ ಪ್ರಯತ್ನ ನಡೆಸುತ್ತಿರುವಂತೆ ಕಾಣುತ್ತಿದೆ ಎಂದು ಹಿರಿಯ ಸಿಪಿಐ(ಎಂ) ಮುಖಂಡ ಹಾಗೂ ಶಾಸಕ ಯೂಸುಫ್ ತರಿಗಾಮಿಯುವರು ಅಭಿಪ್ರಾಯ ಪಟ್ಟಿದ್ದಾರೆ.

ಆಪಾದಿತರ ಮೇಲೆ ಚಾರ್ಜ್‌ಶೀಟ್ ಹಾಕುವುದಕ್ಕೆ ಜಮ್ಮು ನ್ಯಾಯಾಲಯದಲ್ಲಿ ತಡೆಯೊಡ್ಡಿದ ಜಮ್ಮುವಿನ ವಕೀಲರ ವರ್ತನೆಯ ಬಗ್ಗೆ ವರದಿ ನೀಡಲು ಸುಪ್ರಿಂ ಕೋರ್ಟ್ ಭಾರತದ ಬಾರ್‌ಕೌನ್ಸಿಲ್‌ಗೆ ಹೇಳಿತ್ತು. ಬಾರ್ ಕೌನ್ಸಿಲ್‌ನ ಈ ಕುರಿತಾದ ಸಮಿತಿ ವಕೀಲರ ವರ್ತನೆಯ ಬಗ್ಗೆ ವರದಿ ಕೊಡುವ ಬದಲು ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂಬ ಜಮ್ಮುವಿನ ವಕೀಲರ ನಿಲುವು ಸಮರ್ಥನೀಯವಾಗಿದೆ ಎಂಬಂತಹ ವರದಿ ನೀಡಿದ್ದಾರೆ ಎಂದು ವರದಿಯಾಗಿದೆ ಎಂದಿರುವ ತರಿಗಾಮಿ ಇದನ್ನು ಬಲವಾಗಿ ಟೀಕಿಸಿದ್ದಾರೆ. ಸುಪ್ರಿಂ ಕೋರ್ಟ್ ಅವರಿಂದ ಸಿಬಿಐ ತನಿಖೆ ಸಮರ್ಥನೀಯವೇ ಎಂದು ಪರಿಶೀಲಿಸಬೇಕೆಂದೇನೂ ಹೇಳಿರಲಿಲ್ಲ. ಆದ್ದರಿಂದ ಅಂತಹ ವರದಿ ಕೊಡುವ ಅಧಿಕಾರ ಬಾರ್‌ಕೌನ್ಸಿಲ್ ಸಮಿತಿಗಿಲ್ಲ. ರಾಜ್ಯದ ಪೋಲಿಸರು ಸರಿಯಾದ ತನಿಖೆ ಮಾಡಲಾರರು, ಇದನ್ನು ಸಿಬಿಐಗೆ ಒಪ್ಪಿಸಬೇಕು ಎಂಬ ಹಿಂದು ಏಕತಾ ಮಂಚ್‌ನ ಬೇಡಿಕೆ ಕಾನೂನುಬಾಹಿರ. ಯಾವ ರೀತಿಯ ತನಿಖೆ ನಡೆಯಬೇಕು ಎಂದು ಕೇಳುವ ಹಕ್ಕು ಆಪಾದಿತರಿಗೆ ಇಲ್ಲ ಎಂದು ತರಿಗಾಮಿ ಅಭಿಪ್ರಾಯ ಪಟ್ಟಿದ್ದಾರೆ.

ಗಡ್‌ಚಿರೋಲಿ ‘ಯಶಸ್ವಿ ಕಾರ್ಯಾಚರಣೆ’ಯೋ, 40ಕ್ಕೂ ಹೆಚ್ಚು ಮಂದಿಯ ಕಗ್ಗೊಲೆಯೋ?– ಉನ್ನತ ಮಟ್ಟದ ನ್ಯಾಯಾಂಗ ತನಿಖೆ ಅಗತ್ಯ: ಎಎಆರ್‌ಎಂ

ಮಹಾರಾಷ್ಟ್ರದ ಗಡ್ಚಿರೊಲಿ ಪ್ರದೇಶದಲ್ಲಿ ಎಪ್ರಿಲ್ 22ಮತ್ತು 23ರಂದು ಮಾವೋವಾದಿಗಳೊಂದಿಗೆ ಒಂದು “ಭೀಷಣ ಕಾಳಗ’(ಎನ್‌ಕೌಟಂರ್) ನಡೆಯಿತು, ಇದು ನಾಲ್ಕು ಗಂಟೆಗಳ ಕಾಲ ನಡೆಯಿತು. ಹಲವಾರು ಮಾವೋವಾದಿಗಳು ಇದರಲ್ಲಿ ಸತ್ತರು. ನಂತರ ನಡೆದ ಹುಡುಕಾಟದಿಂದ ಇನ್ನೊಂದು ‘ಕಾಳಗ’ ನಡೆಯಿತು. ಇದರಲ್ಲಿ ಇನ್ನಷ್ಟು ಮಾವೋವಾದಿಗಳು ಸತ್ತರು. ಇದು ಮಹಾರಾಷ್ಟ್ರ ಪೊಲಿಸ್‌ನ ವಿಶೇಷ ಪಡೆ ಸಿ-60 ಮತ್ತು ಸಿಆರ್‌ಪಿಎಫ್ ನಡೆಸಿದ ಅತ್ಯಂತ ಯಶಸ್ವಿ ಕಾರ್ಯಾಚರಣೆ-ಇದು ಸರಕಾರದ ಅಧಿಕೃತವಾದ ಪ್ರಕಟಣೆ.

ಆದರೆ ನಂತರ ಒಂದೊಂದಾಗಿ ಹೊರಬಂದಿರುವ ಸಂಗತಿಗಳು ಈ ಸರಕಾರೀ ಆವೃತ್ತಿಯನ್ನು ಪ್ರಶ್ನಿಸುವಂತೆ ಮಾಡಿವೆ. ನಾಲ್ಕು ಗಂಟೆಗಳ ಈ “ಭೀಷಣ ಕಾಳಗ”ದಲ್ಲಿ ಸಾವು ಉಂಟಾಗಿರುವುದು ‘ಮಾವೋವಾದಿ’ಗಳದ್ದು ಮಾತ್ರ. ಈ ಎನ್‌ಕೌಂಟರಿನಲ್ಲಿ ಸತ್ತವರೆಂದು ಹೇಳಲಾಗಿರುವ ಸಂಖ್ಯೆಗೆ ಹೋಲಿಸಿದರೆ ಪೋಲೀಸರು ಪ್ರದರ್ಶಿಸಿದ ಬಂದೂಕುಗಳು ಬಹಳ ಕಡಿಮೆ. ಸಶಸ್ತ್ರ ಕಾಳಗದಲ್ಲಿ ಅವರೆಲ್ಲ ಸತ್ತಿದ್ದರೆ ಹಲವಾರು ಹೆಣಗಳು ಪಕ್ಕದ ಇಂದ್ರಾವತಿ ನದಿಯಲ್ಲಿ ತೆಲುತ್ತಿದ್ದುದೇಕೆ- ಎಂಬಿತ್ಯಾದಿ ಹಲವು ಪ್ರಶ್ನೆಗಳು ಏಳುತ್ತವೆ ಎಂದು ಈ ಕುರಿತು ಎನ್‌ಡಿಟಿವಿ.ಕಾಂ. ನಲ್ಲಿ ಬರೆದ ಲೇಖನದಲ್ಲಿ ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಕೇಳುತ್ತಾರೆ.

ಇದು ಮಾವೋವಾದಿಗಳ ವಿರುದ್ಧ ಹೋರಾಟದ ಹೆಸರಿನಲ್ಲಿ 40ಕ್ಕೂ ಹೆಚ್ಚು ಮಂದಿಯ ಕಗ್ಗೊಲೆಯೆಂಬ ಬಲವಾದ ಸಂದೇಹ ಬರುತ್ತಿದೆ. ಆದ್ದರಿಂದ ಈ ಬಗ್ಗೆ ಸಮಯಬದ್ಧ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್(ಎಎಆರ್‌ಎಂ) ಆಗ್ರಹಿಸಿದೆ. ಈ ‘ಎನ್‌ಕೌಂಟರ್’ನಲ್ಲಿ ಸತ್ತವರೆಲ್ಲ ಮಾವೋವಾದಿಗಳು ಎಂಬ ಭದ್ರತಾ ಪಡೆಗಳ ಸಮರ್ಥನೆಯನ್ನು ಒಪ್ಪಲು ಸಾಧ್ಯವಿಲ್ಲ, ಮಾವೋವಾದಿಗಳೇ ಆಗಿದ್ದರೂ, ಅವರಿಗೆ ಶರಣಾಗತರಾಗುವ ಅವಕಾಶವನ್ನು ಏಕೆ ಕೊಡಲಿಲ್ಲ ಎಂದು ಎಎಆರ್‌ಎಂ ಕೇಳಿದೆ.

ನದಿಯಲ್ಲಿ ಸ್ನಾನ ಮಾಡುತ್ತಿದ್ದ ಮಹಿಳೆಯರನ್ನೂ ಗುಂಡಿಕ್ಕಿ ಕೊಲ್ಲಲಾಗಿದೆ ಎಂಬ ಭೀಕರ ವರದಿಗಳು ಬಂದಿವೆ. ಮರುದಿನ 17 ಹೆಣಗಳು ನದಿಯಲ್ಲಿ ತೇಲುತ್ತಿದ್ದವು ಎನ್ನಲಾಗಿದೆ. ಅಲ್ಲದೆ ಪಕ್ಕದ ಹಳ್ಳಿಯ ಎಂಟಕ್ಕೂ ಹೆಚ್ಚು ಮಂದಿ ಹುಡುಗಿಯರು ಕಾಣೆಯಾಗಿದ್ದಾರೆ ಎಂಬ ಸುದ್ದಿಯೂ ಜತೆಗೆ ಬಂದಿದೆ. ಬಹುಶಃ ಇನ್ನೂ ಎಷ್ಟೋ ಮಾವೋವಾದಿ ಕಾರ್ಯಕರ್ತರಲ್ಲದ ಹಳ್ಳಿಗರು ಈ ‘ಎನ್‌ಕೌಂಟರ್’ಗೆ ಬಲಿಯಾದವರಲ್ಲಿ ಸೇರಿದ್ದಾರೆ ಎಂದು ಎಎಆರ್‌ರಂ ಸಂದೇಹ ವ್ಯಕ್ತಪಡಿಸಿದೆ. ಅವರಿಗೆ ವಿಷಾಹಾರ ನೀಡಲಾಗಿತ್ತು, ಅದನ್ನು ಸೇವಿಸಿ ಪ್ರಜ್ಞೆ ತಪ್ಪಿದಾಗ ಅವರನ್ನು ಗುಂಡಿಟ್ಟು ಸಾಯಿಸಲಾಯಿತು ಎಂಬ ಸಂದೇಹವೂ ಉಂಟಾಗಿದೆ.

ಎಎಆರ್‌ಎಂ ಸದಾ ಮಾವೋವಾದಿಗಳು ಎನ್ನುವವರ ವಿನಾಶಕಾರಿ, ಸಂಕುಚಿತ ಪಂಥವಾದೀ ಹಿಂಸಾಚಾರವನ್ನು ವಿರೋಧಿಸಿದೆ, ಅದರ ವಿರುದ್ಧ ಹೋರಾಟವನ್ನೂ ಮಾಡುತ್ತಿದೆ, ಇನ್ನೊಂದೆಡೆಯಲ್ಲಿ ಸರಕಾರೀ ದಮನವನ್ನೂ ಅದು ಬಲವಾಗಿ ವಿರೋಧಿಸುತ್ತದೆ. ಇಂತಹ ದಮನ ಕಾರ್ಯಾಚರಣೆಗಳಿಗೆ ಬಲಿಯಾಗುವವರು ಆದಿವಾಸಿ ಸಮುದಾಯಗಳು, ಅದರಲ್ಲೂ ಭದ್ರತಾ ಪಡೆಗಳಿಂದ ಅತ್ಯಾಚಾರ, ಹಿಂಸಾಚಾರಗಳಿಗೆ ಬಲಿಯಾಗುವವರು ಈ ಸಮುದಾಯಗಳ ಹೆಂಗಸರು.

ನೂರಾರು ಆದಿವಾಸಿಗಳನ್ನು ಸುಳ್ಳು ಕೇಸುಗಳಲ್ಲಿ ಬಂಧಿಸಿ ವಿಚಾರಣಾಧೀನ ಕೈದಿಗಳಾಗಿ ಜೈಲುಗಳಲ್ಲಿ ಕೊಳೆಯುವಂತೆ ಮಾಡಲಾಗುತ್ತಿದೆ ಎಂದು ಎಎಆರ್‌ಎಂ ಪರವಾಗಿ ಹೇಳಿಕೆಯಲ್ಲಿ ತಿಳಿಸಿರುವ ಇದರ **ರಾಷ್ಟ್ರೀಯ ಸಂಯೋಜಕರಾಗಿರುವ ಲೋಕಸಭಾ ಸದಸ್ಯ ಜಿತೇಂದ್ರ ಚೌಧುರಿ ಗಡ್‌ಚಿರೊಲಿ ಎನ್‌ಕೌಂಟರ್ ಎಂಬ ಅಧಿಕೃತ ವಿವರಣೆ ವಿಶ್ವಾಸಾರ್ಹವಾಗಿಲ್ಲ, ಆದ್ದರಿಂದ ಒಬ್ಬ ಹಿರಿಯ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ಅಗತ್ಯ ಎಂದು ಹೇಳಿದ್ದಾರೆ.**

ಈ ಪ್ರಶ್ನೆಯ ಇನ್ನೊಂದು ಆಯಾಮದ ಬಗ್ಗೆ ಬೃಂದಾ ಕಾರಟ್ ಮೇಲೆ ಹೇಳಿದ ತಮ್ಮ ಲೇಖನದಲ್ಲಿ ಗಮನ ಸೆಳೆದಿದ್ದಾರೆ. **ಖನಿಜ ಸಂಪತ್ತು ತುಂಬಿರುವ ಈ ರಾಜ್ಯಗಳಲ್ಲಿ ಬಿಜೆಪಿ ಸರಕಾರಗಳಿದ್ದು, ಅವುಗಳ ಕಾರ್ಪೊರೇಟ್-ಪರ ಧೋರಣೆಗಳ ವಿರುದ್ಧ ಆದಿವಾಸಿಗಳ ಪ್ರತಿರೋಧ ಬಲಗೊಳ್ಳುತ್ತಿದೆ. ಝಾರ್ಖಂಡ್, ಮಹಾರಾಷ್ಟ್ರ, ರಾಜಸ್ತಾನ, ಛತ್ತಿಸ್‌ಗಡ್‌ನಲ್ಲಿ ಆದಿವಾಸಿಗಳ ಪ್ರಜಾಪ್ರಭುತ್ವ ಸಂಘಟನೆಗಳ ಐಕ್ಯತೆ ಬೆಳೆಯುತ್ತಿದೆ. ಇದನ್ನು ಮುರಿಯಲು ಮಾವೋವಾದಿ-ವಿರೋಧಿ ಕಾರ್ಯಾಚರಣೆಯ ನೆಪವನ್ನು ಬಳಸಲಾಗುತ್ತಿದ ಎಂದು ಅವರು ವಿಶ್ಲೇಷಿಸಿದ್ದಾರೆ.**

ಸಿಪಿಐ(ಎಂ) ಅಭ್ಯರ್ಥಿಗಳ ಪ್ರಚಾರ


ಬಳ್ಳಾರಿಯಲ್ಲಿ ಪ್ರಣಾಳಿಕೆ ಬಿಡುಗಡೆ

ಸಾವಿರ ಬೀಡಿಗೆ ಮಜೂರಿ ಗೊತ್ತಿಲ್ಲದವರು ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು ! : ಮುನೀರ್ ಲೇವಡಿ

ತುಳುನಾಡಿನ ಬಹುತೇಕ ಮನೆಗಳಲ್ಲಿ ಇಂದು ಒಂದಿಷ್ಟು ಬೆಳಕು ಕಾಣುತ್ತಿದ್ದರೆ, ಅದರ ಹಿಂದೆ ಬೀಡಿ ಕಟ್ಟುವ ತಾಯಂದಿರ ಪರಿಶ್ರಮವಿದೆ. ಕಷ್ಟಪಟ್ಟು ಮನೆಕೆಲಸ ಮಾಡುತ್ತಲೇ ಬೀಡಿಯನ್ನೂ ಕಟ್ಟಿ ಕುಟುಂಬಗಳನ್ನು ನಡೆಸಿದ್ದಾರೆ, ಅನ್ನ, ಬಟ್ಟೆಗಳನ್ನು ಹೊಂದಿಸಿದ್ದಾರೆ.

ಇಂದು ಬೀಡಿ ಉದ್ಯಮ ಸಂಕಷ್ಟದಲ್ಲಿದೆ. ಬೀಡಿ ಕಟ್ಟುವ ತಾಯಂದಿರಿಗೆ ಮಜೂರಿ ಹೆಚ್ಚಿಸಲು ಮಾಲೀಕರು ನಿರಾಕರಿಸುತ್ತಿದ್ದಾರೆ. ಇದರಿಂದಾಗಿ ಬೀಡಿ ಕಟ್ಟುವ ತಾಯಂದಿರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಯಾವ ಸಂಕಟಗಳ ಅರಿವೂ ಇಲ್ಲದ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳು, ತಮ್ಮನ್ನು ಗೆಲ್ಲಿಸಿದರೆ ಬಡವರನ್ನು ಉದ್ಧಾರ ಮಾಡುತ್ತೇವೆ ಎಂದು ಭಾಷಣ ಬಿಗಿಯುತ್ತಿದ್ದಾರೆ. ಸಾವಿರ ಬೀಡಿಗೆ ಮಜೂರಿ ಎಷ್ಟೆಂದೇ ಗೊತ್ತಿಲ್ಲದವರು, ಬೀಡಿ ಕಟ್ಟಿ ಕುಟುಂಬ ನಡೆಸುವ ಬಡವರನ್ನು ಉದ್ಧರಿಸುವುದು ಸಾಧ್ಯವೇ?" ಎಂದು ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಮುನೀರ್ ಕಾಟಿಪಳ್ಳ ಲೇವಡಿ ಮಾಡಿದ್ದಾರೆ.

ಕುಳಾಯಿ ಜಂಕ್ಷನ್ ನಲ್ಲಿ ಸಿಪಿಐಎಂ ಪಕ್ಷದ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರ ಅಭ್ಯರ್ಥಿ ಮುನೀರ್ ಕಾಟಿಪಳ್ಳ ಪರ ಹಮ್ಮಿಕೊಂಡಿದ್ದ ಚುನಾವಣಾ ಪ್ರಚಾರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಈ ಚುನಾವಣೆ ದುಡಿಯುವ ಜನರು ಹಾಗೂ ಶ್ರೀಮಂತ ವರ್ಗದ



ನಡೆಯುತ್ತಿರುವ ಸಂಘರ್ಷವಾಗಿ ಮಾರ್ಪಟ್ಟಿದೆ. ಜಾತಿ ಧರ್ಮಗಳ ಹೆಸರಿನಲ್ಲಿ, ಕಪ್ಪು ಹಣವನ್ನು ಚೆಲ್ಲುತ್ತಾ, ನೈಜ ಸಮಸ್ಯೆಗಳನ್ನು ಮರೆಮಾಚಿ ಚುನಾವಣೆ ಗೆಲ್ಲಲು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಹರಸಾಹಸ ಪಡುತ್ತಿವೆ. ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳಲ್ಲಿ ಯಾರೇ ಗೆದ್ದರೂ ಉದ್ಧಾರ ಆಗುವುದು ಶೇ.10ರಷ್ಟಿರುವ ಶ್ರೀಮಂತರು ಮಾತ್ರ. ಈ ಸತ್ಯವನ್ನರಿತು, ಶೇ.90ರಷ್ಟಿರುವ ಎಲ್ಲ ಸಮುದಾಯಗಳು ಒಂದಾಗಿ, ರಾಜಕೀಯ ಪ್ರಜ್ಞಾವಂತಿಕೆಯನ್ನು ತೋರಬೇಕು. ಶೇ.90ರಷ್ಟಿರುವ ದುಡಿಯುವ ಜನರ ಪರವಾಗಿರುವ ಸಿಪಿಐಎಂ ಪಕ್ಷದ ಅಭ್ಯರ್ಥಿಗೆ ಮತ ನೀಡಬೇಕೆಂದು ಮುನೀರ್ ಕಾಟಿಪಳ್ಳ ವಿನಂತಿಸಿದರು.


ಹಳಿಯಾಳ ಪ್ರಚಾರ


ರೋಣ ಪ್ರಚಾರ


ಶ್ರೀ ನಾರಾಯಣ ಗುರು, ಕೋಟಿ ಚೆನ್ನಯರು ನಮಗೆ ಆದರ್ಶ – ಸುನೀಲ್ ಕುಮಾರ್ ಬಜಾಲ್



ಮಂಗಳೂರು ನಗರವು ಒಂದು ಕಾಲದಲ್ಲಿ ಸೌಹಾರ್ದತೆಯ ತಾಣ ಆದರೆ ಇತ್ತೀಚಿನ ದಿನಗಳಲ್ಲಿ ಇಲ್ಲಿ ಸೌಹಾರ್ದತೆಯನ್ನು ನಾಶ ಮಾಡುವ ಹುನ್ನಾರ ಕೋಮುವಾದಿಗಳಿಂದ ವ್ಯವಸ್ಥಿತವಾಗಿ ನಡೆಯುತ್ತಿದೆ. ಸೌಹಾರ್ದತೆಯನ್ನು ಕಾಪಾಡಲು ಪಣ ತೊಡಬೇಕಾಗಿದ ಕಾಂಗ್ರೆಸ್ ಪಕ್ಷದ ನಾಯಕರು ಮಾತ್ರ ಮೊದಲೇ ಮೃದು ಹಿಂದುತ್ವವಾದಿ ಮನೋಭಾವಕ್ಕೆ ಒಳಗಾಗಿದ್ದಾರೆ. ಇಂತಹ ಅಪಾಯಕಾರಿ ಸ್ಥಿತಿಯಲ್ಲಿರುವ ಸಿಪಿಐ(ಎಂ) ಪಕ್ಷವೆ ಮಾತ್ರವೇ ಜಿಲ್ಲೆಯಲ್ಲಿ ಕೋಮುವಾದಕ್ಕೆದುರಾಗಿ ಐಕ್ಯತೆಯನ್ನು ಬೆಳೆಸಲು ನಿರಂತರ ಶ್ರಮವಹಿಸಿದೆ. ಸೌಹಾರ್ದತೆ ಬಯಸಲು ಸಿಪಿಐ(ಎಂ) ಪಕ್ಷ ಮಾತ್ರವೇ ಒಂದೇ ಜಾತಿ ಒಂದೇ ಮತ

ಧರ್ಮಗಳ ವೇದವನ್ನು ಸಾರಿದ ಶ್ರೀ ನಾರಾಯಣ ಗುರು ಹಾಗೂ ಸತ್ಯದ ಹಾದಿಯಲ್ಲಿ ನಡೆಯಲು, ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಹೋರಾಡಿದ ನಾಡಿನ ವೀರ ಪುರುಷರಾದ ಕೋಟಿ ಚೆನ್ನಯರ ಆದರ್ಶವನ್ನು ಮೈಗೊಡಿಸಿದೆ. ಆದ್ದರಿಂದ ನಾರಾಯಣ ಗುರು, ಕೋಟಿ ಚೆನ್ನಯರು ನಮಗೆ ಆದರ್ಶ ಎಂದು ಮಂಗಳೂರು ನಗರ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಸುನೀಲ್ ಕುಮಾರ್ ಬಜಾಲ್ ಉರ್ವಸ್ಟೋರ್‌ನಲ್ಲಿ ನಡೆದ ಪಕ್ಷದ ಚುನಾವಣಾ ಪ್ರಚಾರ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.


ಕಲಬುರಗಿ ಗ್ರಾಮಾಂತರ ಪ್ರಚಾರ


ರಾಮದುರ್ಗ ಪ್ರಚಾರ

ಭ್ರಷ್ಟ ರಾಜಕೀಯದ ನಡುವೆ ವಿಶ್ವಾಸದ ಅಲೆ...... ಪುಟ 10 ರಿಂದ

ಈಗಲೂ ಯುವಜನರಲ್ಲಿ ಮತೀಯ ಭಾವನೆಗಳನ್ನು ಕೆರಳಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ. ಸಿಪಿಎಂ ಪಕ್ಷದ ಮದ್ಯಪ್ರವೇಶಗಳು ಈ ಶಕ್ತಿಗಳಿಗೆ ಅಡ್ಡಿಯಾಗಿದೆ. ಬಿಜೆಪಿ ಪಕ್ಷ ಒಂದಿಷ್ಟು ಲಮಾಣಿ ಸಮುದಾಯದವರ ಮತಗಳನ್ನು ನಿರೀಕ್ಷಿಸುವಾಗಲೇ ಮೇಲ್ಜಾತಿಯವರ ಮತಗಳನ್ನು ನೆಚ್ಚಿಕೊಂಡಿದೆ. ವಾಲ್ಮೀಕಿ ಸಮುದಾಯದ ನಡುವೆ ಇವರ ಪ್ರಭಾವ ವಿಸ್ತರಿಸದಿದ್ದರೂ, ದಲಿತರ ಮೇಲಿನ ದೌರ್ಜನ್ಯಗಳ ಭಾಗವಾಗಿ ಈ ಸಮುದಾಯ ಹಿಂದೆ ಸರಿದಂತೆ ಕಾಣುತ್ತಿದೆ.

ಹಿಂದೆ ಜೆಡಿ ಎಸ್ ನಿಂದ ಚುನಾಯಿತವಾಗಿ, ಈಗ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಭೀಮಾನಾಯಕರವರ ಬಗ್ಗೆ ಜನರಲ್ಲಿ ಭ್ರಮ ನಿರಸನವಿದೆ. ಪ್ರತಿಯೊಂದು ಕೆಲಸಕ್ಕೂ ಹಣ ಇಡದೇ ಕೆಲಸ ನಡೆಯೋಲ್ಲ ಎಂಬ ಅಭಿಪ್ರಾಯ ಬಲವಾಗಿದೆ. ಆದರೆ ತಮ್ಮ ಕೆಲಸಗಳು ತಮ್ಮ ಕೈಹಿಡಿಯುತ್ತವೆ ಎಂದೂ, ಸಿದ್ದರಾಮಯ್ಯನವರ ಕೆಲಸಗಳು, ಭಾಗ್ಯಗಳು, ಕ್ಷೇತ್ರಕ್ಕೆ ನೀಡಿದ ಅನುದಾನ ಅವರ ಕೈ ಹಿಡಿಯ ಬಹುದೆಂದು ನಂಬಿದ್ದಾರೆ. ಮುಖ್ಯ ವಿಷಯವೇನೆಂದರೆ ಇಲ್ಲಿ ಪ್ರತಿಯೊಂದು ಬಲಪಂಥೀಯ ಪಕ್ಷವೂ ಗೆಲುವಿಗೆ ಅಕ್ರಮ ಗಣಿಗಾರಿಕೆಯ ಹಣವನ್ನೆ ನೆಚ್ಚಿಕೊಂಡಿವೆ. ಚುನಾವಣಾ ಪ್ರಚಾರದಲ್ಲಿ ಜನತೆಯ ಪ್ರಮುಖ ಪ್ರಶ್ನೆಗಳೂ ಗೌಣ. ಇಂತಹ ಎಲ್ಲಾ ದೌಲತ್ತಿನ ದರ್ಬಾರಿನ ಎದುರಿನಲ್ಲಿ ಸಿಪಿಐ(ಎಂ) ಸ್ಪರ್ದೆ ವಿಶೇಷವಾಗಿದೆ. ಈ ಹಿನ್ನೆಲೆಯಲ್ಲಿ ಸಿಪಿಎಂ ಪಕ್ಷದ ಸ್ಪರ್ಧೆ ಜನರಲ್ಲಿ ಪರ್ಯಾಯ ರಾಜಕಾರಣದ ಛಾಪು ಮೂಡಿಸುವಲ್ಲಿ ಯಶಸ್ವಿಯಾಗುತ್ತಿದೆ.

ವಿಭಿನ್ನ, ವಿಶಿಷ್ಟವಾಗಿ ಸಿಪಿಐ(ಎಂ)

ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾಗಿರುವ ಕಾಂ. ಮಾಳಮ್ಮ ನವರ ಸ್ಪರ್ಧೆಗೆ ದೇವದಾಸಿ ಮಹಿಳೆಯರಲ್ಲಿ ಸಂಚಲನವನ್ನು ಉಂಟು ಮಾಡಿದ್ದು ಒಗ್ಗಟ್ಟನ್ನು ಪ್ರದರ್ಶಿಸಿದ್ದಾರೆ. ಪ್ರತಿಯೊಬ್ಬ ದೇವದಾಸಿ ಮಹಿಳೆಯು ದೇಣಿಗೆಯನ್ನು ನೀಡುತ್ತಿದ್ದಾರೆ. 5 ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ದೇವದಾಸಿ ಮಹಿಳೆಯರು ಮತ್ತು ಅವರ ಮಕ್ಕಳು ಚುನಾವಣಾ ಪ್ರಚಾರದ ತಂಡಗಳ ರೂಪದಲ್ಲಿ ಅಖಾಡಕ್ಕೆ ಇಳಿದಿದ್ದಾರೆ. ಕಾರ್ಮಿಕರು, ಪಂಚಾಯ್ತಿ ನೌಕರರು, ತಮ್ಮ ಒಂದು ದಿನದ ದುಡಿಮೆಯನ್ನು ಚುನಾವಣೆಗಾಗಿ ನೀಡುತ್ತಿದ್ದಾರೆ. ಪಕ್ಷ ಹಾಗೂ ಜನ ಸಂಘಟನೆಗಳ ಕಾರ್ಯಕರ್ತರು ಚುನಾವಣೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮನೆ, ಮನೆಗೆ ತೆರಳಿ ಅವರೊಂದಿಗೆ ಬೆರೆತು ಮನ ಒಲಿಸುವ ಕೆಲಸ ನಡೆದಿದೆ. ವಿಶೇಷವಾಗಿ ಭೈಠಕ್ ಸಭೆಗಳು ಜನರಲ್ಲಿರುವ ಗೊಂದಲಗಳನ್ನು ನಿವಾರಿಸಿ ರಾಜಕೀಯ ಅರಿವನ್ನು ಮೂಡಿಸಲು ಸಾಧ್ಯವಾಗುತ್ತಿದೆ. ಬಹಿರಂಗ ಸಭೆಗಳೂ ನಡೆದಿದ್ದು ಜಿಲ್ಲಾ ಹಾಗೂ ರಾಜ್ಯ ನಾಯಕರೂ ಪಾಲ್ಗೊಳ್ಳುತ್ತಿದ್ದಾರೆ. ನಾಮಪತ್ರ ಸಲ್ಲಿಕೆಗೆ ಮೊದಲು ಮತ್ತು ನಂತರದಲ್ಲಿ 145 ಕ್ಕೂ ಹೆಚ್ಚು ಪ್ರಚಾರ ಸಭೆಗಳು ನಡೆದಿವೆ. 28 ಪಂಚಾಯ್ತಿವರು, 70ಕ್ಕೂ ಅಧಿಕ ಕೇರಿ ಸಭೆಗಳು, ಎಲ್ಲಾ ಹೋಬ್ಳಿ ಸಭೆಗಳು ನಡೆದಿವೆ.

ಹೆಚ್ಚುತ್ತಿರುವ ವಿಶ್ವಾಸ, ಬಲ

ನೂರಾರು ಕೋಟಿಗಳನ್ನು ಖರ್ಚು ಮಾಡಲೆಂದೇ ನಿಂತಿರುವ ಬಂಡವಾಳಶಾಹಿ ರಾಜಕೀಯ ಪಕ್ಷಗಳ ನಡುವೆ ದುಡಿಯುವ ಜನರೇ ಹಣ ನೀಡಿ ಮನೆ ಮಠಗಳನ್ನು ಬಿಟ್ಟು ಕೆಲಸ ಮಾಡುತ್ತಿರುವ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಎಲ್ಲರ ಗಮನ ಸೆಳೆದಿದ್ದಾರೆ. ಈ ಚುನಾವಣೆಯಲ್ಲಿ ಜನರಲ್ಲಿ ವಿಶ್ವಾಸ ಮೂಡಿಸಲು ಸಾಧ್ಯವಾಗುತ್ತಿದೆ. ದಿನದಿಂದ ದಿನಕ್ಕೆ ಜನರ ವಿಶ್ವಾಸ, ಬೆಂಬಲ ಹೆಚ್ಚಾಗುತ್ತಲೇ ಹೊರಟಿದೆ.

JANASHAKTHI KANNADA VARA PATRIKE MAY 07-13, 2018 Price: Rs. 10/- Date of Publication: 4 MAY 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283







ಜಗದಗಲಕ್ಕೂ ಮೇ ದಿನ

ಈ ಬಾರಿಯ ಮೇ ದಿನ ವಿಶೇಷದ್ದು. ಈ ವರ್ಷ ಅದೇ ವಾರದಲ್ಲಿ ಮಾರ್ಕ್ಸ್ ಅವರ 200ನೇ ಹುಟ್ಟು ಹಬ್ಬದ ದ್ವಿಶತಮಾನೋತ್ಸವ ಆರಂಭವಾಗಲಿದೆ. ಇಲ್ಲಿ ನಮ್ಮ ರಾಜ್ಯದಲ್ಲಿ, ದೇಶದಲ್ಲಿ, ಜಗತ್ತಿನ ಎಲ್ಲೆಡೆ ನಡೆದ ಮೇ ದಿನದ ಚಿತ್ರಗಳು ಇವೆ.



















JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**